REGISTERED NO. M. 1393.

ಕಂಠೀರವ

ಅದರ್ಶಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ ಮಂಗಳೂರು, ೧೯೩೬ನೇ ಇಸವಿ ಜೂನ್ ತಾರೀಕು ೧೨ನೇ ಶುಕ್ರವಾರ ಸಂಚಿಕೆ ೨೨.

VOL. XVIII MANGALORE, FRIDAY, JUNE 12, 1936 NO. 22.

BANK with the

UDIPI BANK Ltd.

(KALSANK,——UDIPI——S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

ESTD: 1925

ESTD:—1906.

THE

Canara Banking Corporation, Udipi, Ltd.

THE FIRST INDIGENOUS & COSMOPOLITAN BANK

OF

S. K. DISTRICT.

Capital: Authorised, Issued and Subscribed	Rs. 3,50,000-0-0
Paid up	Rs. 2,88,320-0-0
Reserve and other funds	Rs. 3,70,694-0-0

16—5—1936.

Fixed deposit rates up to 5% p. a.

Asiatic Government Security

LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch:	**187, Mount Road.**
Bombay Branch:	**Hornby Road, Fort.**
Calcutta Branch:	**15, Clive Street.**

V. RANGASWAMI, B. A., B. L.,

General Manager.

ಅತ್ಯಲ್ಪ ಬೆಲೆ — ಅಮಂದ ಆನಂದ

ಆಸೇತುಹಿಮಾಚಲ ಪರ್ಯಂತವೂ

ಅತ್ಯಲ್ಪ ಬೆಲೆಗೆ ಅಮಂದಾನಂದವನ್ನು ಕೊಡುವ

'ಟ್ವಿನ್' ರಿಕಾರ್ಡುಗಳನ್ನೇ ಕೊಳ್ಳುವಿರಿ!

ಕೆಳಗೆ ಕಾಣಬರುವ ಕನ್ನಡ "ಟ್ವಿನ್" ಡ್ರಾಮಾ ರಿಕಾರ್ಡುಗಳಿಂದ ನಿಮ್ಮ ಗೃಹಗಳನ್ನು ಅಲಂಕರಿಸುವಿರಿ!

ಪೌರಾಣಿಕ	ಸೆಟ್ಟು ನಂ.	ಸಾಂಘಿಕ	ಸೆಟ್ಟು ನಂ.
ಕೃಷ್ಣ ಪಾರಿಜಾತ	524	ವಿಚಿತ್ರ ಶಾಸನ	536
ಪಾರ್ವತಿ ಸ್ವಯಂವರ	550	**ಭಕ್ತಿರಸಪ್ರಧಾನ**	
ದ್ರೌಪದಿ ಸ್ವಯಂವರ	566	ಭಕ್ತ ತುಕಾರಾಮ	527
ರುಕ್ಮಾಂಗದ	568	ದಾಮಾಜಿ ಪಂತ್	555
ದಾನಶೂರ ಕರ್ಣ	575	ತುಲಸೀದಾಸ್	577
ವೀರ ಅಭಿಮನ್ಯು	580	**ಚಾರಿತ್ರಿಕ**	
ಗಯಚರಿತ್ರೆ	591	'ಟಿಪ್ಪು ಸುಲ್ತಾನ್' ಜೀವಿತ ಚರಿತ್ರೆ	592

"ಭೀಷ್ಮ ಪ್ರತಿಜ್ಞೆ" ಸೆಟ್ಟು ನಂ. **596.**

(ಭೀಷ್ಮ ಪಾತ್ರಧಾರಿ: ಶ್ರೀಯುತ **ಕೊಟ್ಟೂರಪ್ಪ**ನವರು).

ಇವುಗಳನ್ನೀಗಲೇ ನಮ್ಮ ವ್ಯಾಪಾರಿಗಳಲ್ಲಿ ಕೊಂಡು ಕೇಳಿ ಆನಂದಿಸುವಿರಿ!

ದಿ ಟ್ವಿನ್ ರಿಕಾರ್ಡ್ ಕಂಪೆನಿ, ಲಿಮಿಟೆಡ್,

ಪ

45, ಸೌತ್‌ಪೆರೇಡ್, ಬೆಂಗಳೂರು.

ದೊರೆಯುವ ಸ್ಥಳ:—

ಎಮ್. ಎಮ್. ಶ್ಯಾನುಭಾಗ ಎಂಡ್ ಸನ್, ಮಂಗಳೂರು.

WANTED

WANTED candidates for Telegraph and Station Master Class. Allowance Rs. 28. Uniform, passage and quarter free. Service essential. Rules and entrance form on annas eight. Director, Royal Telegraph and Rly. Duties College.

6, 29-5. Bombay No. 14.

Jubilee Stamps.

5 different from 5 different colonies for 5 as., 25 different from at least 10 different colonies Rs. 2—8—0. Grand collection of 100 different, used and unused, including many scarce stamps and high values, Rs. 25/—

Special Offer:— Commemorative packet of 30 different large pictorial stamps of Centenary, Quiniversary, Jubilee and Charity issues,—a packet full of historic and artistic interest. Included in this packet are 4 unused Russia Romanoff 1913 issue (Nicholas II and Katherine II) and Belgium, Queen Astrid mourning stamp. **Price Re. 1 only.**

Remit by M. O. Write your order on coupon giving name and address clearly. This is the safest and economical method of ordering.

Abyssinia and Jubilee lists free to all applicants.

IMPERIAL STAMP Co., Ltd., ALLAHABAD.

4, 5-6.

ನೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣಹಾಸೆಯುಳ್ಳವರಾಗಿ ಕಿರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು ದುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಕಾ ನಶ್ಯವನ್ನು ತರಿಸಿ ಇದೇ ಹೆಸರಾದ ಮದರಾಸು ನಶ್ಯವೆಂದು ಬೆಳರಿ ಮಾಡಿ ಬರುತ್ತಿರುವರು. ಸಹೋದರರೇ! ನೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದು, ನಾಸಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ವ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂದಿಸುವದು. ಆದುದರಿಂದ, ಆಪ್ತರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

FREE,—ಮುಫತ್,—ಪುಕಸಟ್ಟೆ!

ಮಹನೀಯರೆ,

ವಾಚನಾಲಯಗಳಲ್ಲಿಡಲು ಯೋಗ್ಯವಾದ ಮತ್ತು ಆಂದವಾದ ಬೈಂಡಿನ ಪುಸ್ತಕಗಳು, ಪ್ರತಿಯೊಬ್ಬರು ಓದಬೇಕಾದ ಕನ್ನಡ **ಕಥೆ ಪುಸ್ತಕ, ನಾಟಕ, ಕೀರ್ತನೆ** ಲಾ ಪುಸ್ತಕಗಳು ಮತ್ತು **ರಾಮಾಯಣ, ಭಾಗವತ, ಭಾರತ,** ವಗ್ಗೆರೆಗಳಿಂದ ನಿಬಿಡೀಕೃತವಾಗಿ ಈಗಲೆ ಹೊರಗೆ ಬಂದಿರುವ **ಕ್ಯಾಟಲಾಗಿಗೆ** ಕೂಡಲೇ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕಾಗಿ ವಿನಂತಿ.

ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು,
ಅವಿನ್ಯೂ ರೋಡ್, ಬೆಂಗಳೂರು, ಸಿಟಿ.

ಅದೊಂದು ಕಲೆ.

ಒಳ್ಳೆಯ ಚಹಾವನ್ನು ಮಾಡುವುದು ಅದೊಂದು ಕಲೆ. ನಿಜವಾಗಿಯೂ ಚೆನ್ನಾಗಿ ಮಾಡಿದ ಒಂದು ಕಪ್ಪು ಚಾ, ಒಬ್ಬನಿಗೆ ಅಷ್ಟು ಅಪರೂಪವಾಗಿ ದೊರಕುವುದೆಂದರೇನು? ಅನೇಕ ಮನೆಗಳಲ್ಲಿ, ಚಾ ಮಾಡುವ ಪಾತ್ರೆಯು, ವ್ಯವಹಾರದಲ್ಲಿ, ಎಲ್ಲ ತಾಸುಗಳಲ್ಲಿಯೂ, ಕೆಲಸದ ಮೇಲಿರುತ್ತದೆ. ಆದರೂ, ಕುಡಿಯುವುದಕ್ಕೆ ಯೋಗ್ಯವಾದ ಚಹಾವು ದೊರಕುವುದು ಎಲ್ಲಿಯೋ ಸ್ವಲ್ಪ ಮನೆಗಳಲ್ಲಿಯೇ. ಮಾಡುವ ರೀತಿಯಲ್ಲಿ ಮಾಡಲು ಒಬ್ಬನು ಜಾಗರೂಕತೆಯನ್ನು ಮಾತ್ರ ವಹಿಸಿದಲ್ಲಿ, ಮಾಡುವುದಕ್ಕೆ ಇಷ್ಟೊಂದು ಸುಲಭವಾದ ಈ ಪಾನೀಯವು, ಸಂಪೂರ್ಣವಾಗಿಯೂ, ಅಜಾಗರೂಕರಾದ ಮನೆಯ ಹೆಂಗಸರಿಂದ ಮತ್ತೂ ಅಯೋಗ್ಯರಾದ ಸೇವಕರಿಂದ ದೂರಿಗೆ ಗುರಿಯಾಗುವುದು ದುಃಖಕರವಾಗಿದೆ.

ಚಾ ಕುಡಿಯುವ ಕ್ರಮುಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಕಷ್ಟವೂ ಅಲ್ಲ; ಅದರಲ್ಲಿ ಗೂಢವಾದುದೂ ಇಲ್ಲ. ಪ್ರಯಾಸವೇನೆಂದರೆ, ಆ ಕ್ರಮುಗಳನ್ನು ಬಿಡದೆ ಸ್ಥಿರವಾಗಿ ಅನುಸರಿಸುವಂತೆ ಜನಗಳನ್ನು ಪ್ರೇರೇಪಿಸುವುದೇ. ಕುಡಿಯಲು ಯೋಗ್ಯವಾದ ಒಂದು ಕಪ್ಪು ಚಹಾವನ್ನು ತಯಾರು ಮಾಡಲು, ಅದಕ್ಕೇನೂ ಒಂದು ಯಂತ್ರ ಬೇಕಾಗಿಲ್ಲ—ಒಂದು ಜತೆ ಕೈಗಳು ಮತ್ತೂ ಅವುಗಳನ್ನು ಮುನ್ನಡೆಯಿಸಲು ಲಕ್ಷ್ಯ ಕೊಡುವ ಮನಸ್ಸು ಇವಿಷ್ಟೇ. ಅನೇಕ ವೇಳೆ, ಕೈಗಳು ಸಮರ್ಥವಾಗಿದ್ದರೂ, ಮನಸ್ಸಿನ ಲಕ್ಷ್ಯವು ಸಾಲದೆ ಬರುತ್ತದೆ.

ಒಳ್ಳೆಯ ಚಹಾವನ್ನು ಮಾಡುವುದರ ನಿಜವಾದ ರಹಸ್ಯವು, ಕಷಾಯವನ್ನು ಮಾಡುವಲ್ಲಿ ಉಪಯೋಗಿಸುವ ನೀರಿನಲ್ಲಿದೆ. ನೀರು ಹೊಸದಾಗಿರಬೇಕು; ಅದನ್ನು ಸರಿಯಾಗಿ ಕುದಿಸಬೇಕು. ಮಿತಿಮೀರಿ ಕುದಿಸಿದ, ಮೊದಲೇ ಕುದಿಸಿಟ್ಟ, ಅಥವಾ ಸರಿಯಾಗಿ ಕುದಿಸದ ನೀರು, ಕಷಾಯವನ್ನು ಸಪ್ಪೆಯಾಗಿಯೂ, ನೀರಸವಾಗಿಯೂ ಮಾಡುತ್ತದೆ. ಅನಂತರ ಬರುತ್ತದೆ ಸಮ್ಮಿಶ್ರಣದ ಪ್ರಶ್ನೆ. ಕನಿಷ್ಟಪಕ್ಷ ೫ ನಿಮಿಷಗಳಾದರೂ ನಿಲ್ಲುವುದಕ್ಕೆ ಬಿಡದೆ, ಅದಕ್ಕೆ ಮೊದಲೇ ಚಹಾವನ್ನು ಹೊಯಿದ ಪಕ್ಷದಲ್ಲಿ, ರುಚಿ ಸಾಲದೆಂದು, ಪರಿಮಳ ಸಾಲದೆಂದು ಟೀಯನ್ನು ದೂರಲಾಗದು. ಸಂಕ್ಷೇಪತಃ, ಆನಂದವನ್ನು ಕೊಡತಕ್ಕ ಒಂದು ಕಪ್ಪು ಚಹಾವನ್ನು ನಿಜವಾಗಿಯೂ ವ್ಯವಸ್ಥೆಗೊಳಿಸುವುದು ಯಾವುದೆಂದರೆ, ಅದನ್ನು ಸರಿಯಾದ ರೀತಿಯಲ್ಲಿ ತಯಾರಿಸುವ ಆ ವಿಧಾನವೇ.

ಚಹಾವನ್ನು ಮಾಡುವ ಆ ಕಲೆಗೆ ಇವೆರಡು ಪ್ರಾಮುಖ್ಯವಾದ ಆವಶ್ಯಕತೆಗಳೂ ಅಲ್ಲದೆ, ಹಳೆಯ ನಮೂನೆಯ ಒಂದು ಸೂತ್ರವೂ ಇದೆ. 'ಪ್ರತಿಯೊಬ್ಬ ವ್ಯಕ್ತಿಗೂ, ಒಂದು ತುಂಬು 'ಚಮಚ; ಚಾ ಪಾತ್ರೆಗೆ ಒಂದು ಚಮಚ ಪ್ರತ್ಯೇಕ' ಎಂಬುದು. ಇದರೊಂದಿಗೆ, ಉಪಯೋಗಿಸುವ ಮೊದಲು, ಪ್ರತಿಸಲವೂ, ಚೆನ್ನಾಗಿ ಒಣಗಿರುವ, ಒಳ್ಳೇ ಶುಚಿಯಾಗಿರುವ ಯೋಗ್ಯ ರೀತಿಯ ಒಂದು ಪಾತ್ರೆಯನ್ನು—ಮಣ್ಣಿನ ಪಾತ್ರೆಯಾದರೆ ವಾಸಿ,—ಸೇರಿಸಿಕೊಳ್ಳಿ. ಈ ದೇಶದಲ್ಲಿ, ಪಾತ್ರೆಯಲ್ಲಿ ಕುದಿಯುವ ನೀರನ್ನು ತುಂಬಿಸಿದ ಬಳಿಕ, ಎಲೆಗಳನ್ನು ಹಾಕುವ ರೂಢಿಯು ವಿಶೇಷವಾಗಿ ಪ್ರಚಾರದಲ್ಲಿರುತ್ತದೆ. ಈ ರೂಢಿಯು, ಕುದುರೆಯ ಮುಂಭಾಗದಲ್ಲಿ ಗಾಡಿಯನ್ನು ತಂದು ನಿಲ್ಲಿಸಿದ ಹಾಗೆಯೇ ಸರಿ. ಸರಿಯಾದ ಕ್ರಮವು ಯಾವುದೆಂದರೆ, ಒಣಗಿದ ಎಲೆಗಳನ್ನು ಹಾಕುವ ಮೊದಲು, ಪಾತ್ರೆಯನ್ನು ಬಿಸಿನೀರಿನಿಂದ ತೊಳೆದು, ಪಾತ್ರೆಯಲ್ಲಿರುವ ಎಲೆಗಳ ಮೇಲೆ, ಹೊಸದಾಗಿ ಕುದಿಸಿದ ನೀರನ್ನು ಸುರಿಯುವುದೇ.

ಕುಡಿಯಲು ಯೋಗ್ಯವಾದ ಒಂದು ಕಪ್ಪು ಚಹಾವನ್ನು ತಯಾರು ಮಾಡುವಂತೆ ಒಬ್ಬನಿಗೆ ತಿಳಿಯಲು ಅಗತ್ಯವಿರುವುದು ಮುಖ್ಯವಾಗಿ ಇದಿಷ್ಟೇ. ಆದುದರಿಂದ, ಚಹಾ ಮಾಡುವ ಈ ಕಲೆಯನ್ನು ಸಿದ್ಧಿಸಿಕೊಳ್ಳುವುದು ಸುಲಭ. ಒಂದು ಕಪ್ಪು ಚಹಾದ ಆನಂದವನ್ನು ಅನುಭವಿಸಲು ಕಲಿತವನೊಬ್ಬನ ವಿಚಾರದಲ್ಲಿ, ಅದಕ್ಕಿರುವ ಬೆಲೆಯು ಹೊರತಾಗಿ ಅದು ಜೀವನದ ಸೊಬಗುಗಳಲ್ಲಿ ಒಂದೆಂದೂ ಪರಿಗಣಿತವಾಗಿದೆ.

ಭಾರತೀಯ ಚಾ ಕುಡಿಯಿರಿ.
ಪ್ರಪಂಚದ ಪರಮೋತ್ಕೃಷ್ಟ ಪಾನೀಯ.

ಪದ್ರಾಡ್.

ನಾಲ್ಕು ಮೊಳದ ಮುಂಡು ಮಲಯಾಳದಲ್ಲಿ ಗಂಡಸರುಡುವರು. ಹೆಂಗಸರುಡುವಲ್ಲಿ ಆರು ಮೊಳವಾಗುವುದು. ಇದಕ್ಕೆ 'ಒನ್ನರ' (ಒಂದೂವರೆ) ಎನ್ನುವರು. ಮಡಿರುಮಾಲು ಇಲ್ಲದೆ ಹೆಂಡತಿಯ ಒನ್ನರೆಯನ್ನು ಸುತ್ತಿ ಮದುವೆಯ ಮಂಟಪಕ್ಕೆ ಹೋಗಿದ್ದೆನಾಗಿ ಒಬ್ಬ ಮಲಯಾಳಿ ಡಾಕಟರರು ಹೇಳಿದುದುಂಟು.

ನಾಲ್ಕು ಜನರು ಅಂದರೆ ಊರ ಪ್ರಮುಖರಲ್ಲಿ ಮೌಲ್ಯಾದಿಗಳನ್ನು ಕಟ್ಟಲಿಕ್ಕೆ ಕರೆಯಲಾಗುವ ಕೆಲವರು, ನಾಲ್ವರೇ ಬೇಕೆಂದಿಲ್ಲ—'ಕೃತಕ್ಕೆ ನಾಲ್ಕು ಜನರು ಕಟ್ಟುವ ಬೆಲೆ ಕೊಟ್ಟು.' ಎಸೆಸ್ಸರ್ಸ್ (assessors) ಎನ್ನಬಹುದು.

ಪಂಚಾಯತದಾರರೆಂದರೆ ವಿವಾದ ತೀರ್ಮಾನಕ್ಕೆ ಕರೆಯಲಾಗುವ ಗೃಹಸ್ಥರು, ಪಂಚ ಅಂದರೆ ಐವರೇ ಎಂದಲ್ಲ. ಜ್ಯೂರಿ (jury) ಎನ್ನಬಹುದು.

ತೆಲುಗಿನಲ್ಲಿ 'ಆರುಮೂಡು' (ಆರು ಮೂರು) ಎಂದರೆ ವಾಗ್ಯುದ್ಧ. ಒಂದು ಪಕ್ಷದವರು ಆರು ಎಂದೂ ಪ್ರತಿಪಕ್ಷದವರು ಮೂರೇ ಎಂದೂ ಹಟಹಿಡಿದರೆ, ಒಂದೆ ಹೊಡೆದಾಡಿಕೊಳ್ಳಬೇಕು, ಇಲ್ಲವೆ ಮಧ್ಯಸ್ಥನಾಗಬೇಕಷ್ಟೆ! To be at sixes and sevens ಎಂದು ಇಂಗ್ಲಿಷ ವಾಕ್ಯ.

'ಏಳೂವರೆ' ಎಂದರೆ ಉಪದ್ರವ ಅಥವಾ ಉಪದ್ರವಕಾರ (—ರಿ). ಇದು ಕನ್ನಡದಲ್ಲಲ್ಲದೆ ಇತರ ಭಾಷೆಗಳಲ್ಲೂ ಇರುವ ಪದ. ಹಿಂದೀ ತುಳಸೀದಾಸ ರಾಮಾಯಣದಲ್ಲಿ ಕೂಡ ದಶರಥರಾಯನು ರಾಮಚಂದ್ರನನ್ನು ವನವಾಸಕ್ಕೆ ಅಟ್ಟಬೇಕೆಂದು ಹಟ ಹಿಡಿದಿರುವ ಕೈಕೇಯಿಗೆ 'ಸಾಡೇ ಸಾತ್' ಎಂದು ಕರೆಯುವನು. ಗೋಚರದಲ್ಲಿ ಜನ್ಮದ್ವಿತೀಯ ದ್ವಾದಶ ರಾಶಿಗಳಲ್ಲಿ ಶನಿಯು ಬಂದನೆಂದರೆ ಅನರ್ಥಾನಿಷ್ಟನಷ್ಟಕಷ್ಟಗಳು ಸಂಭವಿಸುವುದಾಗಿ ನಂಬಿಕೆಯುಂಟು. ಒಂದೊಂದು ಗೃಹದಲ್ಲಿ ಎರಡೂವರೆ ವರ್ಷಗಳಂತೆ ಮೂರರಲ್ಲಿ ಏಳೂವರೆ ವರ್ಷಗಳಷ್ಟು ಶನಿ ನಿಲ್ಲುವುದು. ಇದೇ ಈ ಪದವ ವ್ಯುತ್ಪತ್ತಿ.

ಮಲಯಾಳದಲ್ಲಿ ಒಬ್ಬನಿಗೆ ಹತ್ತೂವರೆ (ಪತ್ತರ) ಎಂದರೆ ಹುಚ್ಚು ಎಂದರ್ಥ.

ತುಳುವಿನಲ್ಲಿ ಪದ್ರಾಡ್, ಎಂದರೆ ಹನ್ನೆರಡೆಂದು ಸಾಮಾನ್ಯಾರ್ಥ. ಓಡಿ ಹೋಗು ಎಂಬ ಅಲಂಕಾರಾರ್ಥವುಂಟು. ಕೊಂಕಣಿ-ಕನ್ನಡಗಳಲ್ಲೂ ಇದೇ ಶಬ್ದವನ್ನು ಇದ್ದಕ್ಕಿದ್ದಂತೆ, ಎಂದರೆ ಭಾಷಾಂತರಿಸದೆ, ಈ ಅಲಂಕಾರಾರ್ಥದಲ್ಲಿಯೇ ಉಪಯೋಗಿಸುವರು. ಸಂಬಳಕ್ಕೆ ನಿಲ್ಲುವೆನೆಂದು ಬಂದನೊಬ್ಬ ತುಳುವ. ಏನು ಸಂಬಳ ಕೇಳುವೆ ಎಂಬ ಧನಿಯ ಪ್ರಶ್ನೆಗೆ ಹತ್ತು ಎಂದ. ಎರಡು ಹೆಚ್ಚು ಹಾಕು ಎಂದು ಧನಿಯ ಉತ್ತರ. ಎಂದರೆ ಹತ್ತಲ್ಲ, ಹನ್ನೆರಡು ರೂಪಾಯಿ ಕೊಟ್ಟೇನೆಂಬ ಉದಾರ ವಚನವೇನೂ ಅಲ್ಲ. ಹತ್ತಕ್ಕೆ ಎರಡು ಹೆಚ್ಚು ಹಾಕು ಎಂದರೆ 'ಪದ್ರಾಡ್ ಹಾಕು' (ಬೇಗ ನಡೆ), ಹತ್ತು ರೂಪಾಯಿಯಷ್ಟು ಸಿಕ್ಕದು, ಎಂಬರ್ಥ; ಜಾರು, ಕಿಸುಳಿ ಹಾಕು, ಸಲಾಕೆ ಸೀಳು ಎಂಬಂತೆ. ಈ ಕೊನೆಯದು ಕೊಂಕಣಿಯಲ್ಲಿ ಬಹಳ—'ಕಾಂಬಿ ತಾಶೆ'. ಬಿದಿರಿನಿಂದ ಸಲಾಕೆ (ತುಳು—ತಲಕೆ, ಸಂಸ್ಕೃತ—ಶಲಾಕಾ)ಗಳನ್ನು ಸೀಳುವಾಗ ಕತ್ತಿ ಸರ್ರೆಂದು ಜಾರುವುದಷ್ಟೆ!

ಈ 'ಪದ್ರಾಡ್' ಎಂಬ ಶಬ್ದದ ವ್ಯುತ್ಪತ್ತಿ ಏನು? ಹನ್ನೆರಡೆಂದಾದರೆ ಈ ಅಲಂಕಾರಾರ್ಥ ಹೇಗೆ ಬಂತು? ವಿದ್ವಾನರೂ ಹಿರಿಯ ಕಿರಿಯ ಸಾಹಿತಿಗಳೂ ಕರುಣಿಸಿದರೆ ಲೋಕೋಪಕಾರವಾದೀತು.

M. Narasing Rao.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

S. C. 580/1934.
R. E. P. No. 160/1936.

ವಾದಿ—ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

ಪ್ರತಿವಾದಿರು-ಸಿ. ಬಾಲಕೃಷ್ಣರಾವ್ ಕೂಡಾ.

ಸದರಿ ಅಮ್ಲುಜಾರಿಯ 1ನೇ ಪ್ರತಿವಾದಿ ಕುಂದಾಪುರ ಕಸಬೆಯಲ್ಲಿರುವ ನಗರ ಬಾಲಕೃಷ್ಣರಾವ್ ಇವರಿಗೆ.

ಸದರಿ ಅಮ್ಲುಜಾರಿಯಲ್ಲಿ ಪ್ರತಿವಾದಿರು ಕುಂದಾಪುರ ಬೇಂಕ್, ಲಿಮಿಟೆಡ್, ಇದರಲ್ಲಿ ಡಿಪೊಜಿಟ್ ಇಟ್ಟಿರುವ ಹಣಗಳನ್ನು ಜಪ್ತು ಮಾಡಿಸಿ ವಾದಿಗೆ ಕೊಡಿಸಬೇಕಾಗಿ ವಾದಿಯು ಅರ್ಜಿ ಕೊಟ್ಟಿರುವುದರಿಂದ ಆ ಕುರಿತು ನಿಮ್ಮ ದೇನಾದರೂ ಆಕ್ಷೇಪವಿದ್ದಲ್ಲಿ ತಾರೀಕು 23—6—1936ನೇ ದಿನಸ ಸದರಿ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳೆ ತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ.

Coondapoor, 8—6—1936. } K. Narasimha Kamath,
Pleader for D. H.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ್ ಕೋರ್ಟಿನಲ್ಲಿ

O. S. 593/1934. R. E. P. 73/1936.

ವಾದಿ—ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

ಪ್ರತಿವಾದಿರು—ಶುಕ್ರಿ ಸಾಹೇಬರು ಕೂಡಾ.

ಸದರಿ ಅಮ್ಲುಜಾರಿಯ 2ನೇ ಪ್ರತಿವಾದಿ ದಕ್ಷಿಣ ಮಲಬಾರ ಜಿಲ್ಲಾ ಪೊನ್ನಾನಿಯಲ್ಲಿರುವ ಮಹಮ್ಮದ ಅಕ್ರನ್ ಖಾಜಿ ಗುಲಾಮು ಮೊಹಿದಿನ್ ಸಾಹೇಬರ ಮಗ ಮಹಮ್ಮದ ಜುಫ್ರಿ ಸಾಹೇಬರಿಗೆ.

ವಾದಿಯು ಸದರಿ ಡಿಕ್ರಿ ಮೇಲೆ ನಡೆಸಿದ ಸದರಿ ಅಮ್ಲುಜಾರಿಯಲ್ಲಿ ನಿಮ್ಮದೇನಾದರೂ ಆಕ್ಷೇಪ ಇದ್ದಲ್ಲಿ ತಾ. 4—7—1936ಕ್ಕೆ ಸದರಿ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

Coondapoor, 8—6—1936. } K. Narasimha Kamath,
Pleader for D. H.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

R. E. P. 149/1936
Claim 1326/29-30.

ಅರಂತೋಡು ಸಹಕಾರ ಸಂಘ ನಂಬ್ರ 3228 } **ವಾದಿ ಅರ್ಜಿದಾರ**

ಬಿ. ಆರ್. ಶೇಶಪ್ಪ ರೈ, ಬಿ. ಆರ್. ರಾಮಣ್ಣ ರೈ ಮಗ, ಭಾಗನುಂಡ ಪೇಟೆ, ಪಾಡಿನಾಕು ನಾಡು ತಾಲೂಕು, ಕೊಡಗು ಜಿಲ್ಲಾ } **ಪ್ರತಿವಾದಿ**

ಮೇಲೆ ಕಾಣಿಸಿದ ವಾದಿ ಮಾಡಿದ ಅಮಲ್ಜಾರಿಯು ತಾ. 19—6—'36ಕ್ಕೆ ಇಟ್ಟಿರುವುದರಿಂದ ಪ್ರತಿವಾದಿಯು ಆಕ್ಷೇಪವೇನಾದರೂ ಇದ್ದರೆ ಆ ದಿನ ಕೋರ್ಟು ಮುಂದೆ ಬೆಳಿಗ್ಗೆ ಗಂಟೆ 10ಕ್ಕೆ ಹಾಜರಾಗಿ ಜಾಹೀರುಮಾಡಿದಿದ್ದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಪುತ್ತೂರು, 8—6—1936. } H. Pundarik Bhat,
Pleader for petr. pfff

For your Diamonds enquire at
Sowcar
SRINIVAS RANGA PAI,
Sowcar Mahal,
Car Street,
MANGALORE.

FOR SALE.

One "SUN BEAM" Motor Cycle with side-car in running order. Owner going in for a "Baby Car." Can be seen at the below address.

HOUSES TO LET.

In suitable localities for residential, office and business Purposes.

REPRESENTATIVES FOR:-

OF CHEMICO SPECIALITIES OF CHEMICO WORKS BIRMINGHAM, ENGLAND.

(1) Spraying Cellulose; (2) "Sprayon" gum; (3) Chemico-Improved Motor Oils; (4) "Quikko" Metal polish; (5) Chemico Bath and household cleanesrs; (6) "TATERENE"—miracles that will save Motorists Millions.

Apply:—WELDON & CO., Hampankatta, Mangalore

FOR FURTHER PARTICULARS IN PERSON OR BY LETTER WHICH WILL BE PROMPTLY ATTENDED TO.

ಡಾಕ್ಟರ್ ಸಿ. ಮತಾಯಸರ ಸಿದ್ಧೌಷಧಗಳು.

ಮಸ್ಕ್ ಪಿಲ್ಸ್—ಈ ಮಾತ್ರೆಗಳು ಮಕ್ಕಳ ಜೀಷ್ಟೆಯ ವ್ಯಾಧಿಗೆ ಅದ್ಭುತಕರ ಔಷಧ. ಮಕ್ಕಳು ಯಾವಾಗಲೂ ಕೂಗುತ್ತಾ ಇರುವದು, ಕೈಕಾಲು ನಡುಗುವದು, ಮೂರ್ಛೆಯಾಗುವದು ಮುಂತಾದ ರೋಗಗಳನ್ನು ಗುಣಪಡಿಸುತ್ತದೆ. ರೋಗವಿಲ್ಲದವರಿಗೆ ಕೊಟ್ಟರೂ ಸುಖವಾಗಿರುವರು. ಒಳ್ಳೇ ತ್ರಾಣ ಕೊಡುವ ಶಕ್ತಿ ಇದೆ. ಕೇವಲ ಹಸುಮಗುವಿಗೂ ನಿರ್ಭಯವಾಗಿ ಕೊಡಬಹುದು. ಬೆಲೆ, 100 ಮಾತ್ರೆ I ಕ್ಲಾಸ್ 4 ರೂ; II ಕ್ಲಾಸ್ 1½ ರೂ.

ಇದಲ್ಲದೆ ಟಿಸ್ಕೂ ಮದ್ದುಗಳೂ, ಹೊಮ್ಯೊಪೆತಿಕ್ ಔಷಧಗಳೂ, ಹೊವೊ ಕೊಂಬಿನೊ ಔಷಧಗಳೂ ದೊರಕುತ್ತವೆ. ಹೆಚ್ಚಿನ ಮಾಹಿತಿಗೆ ಮತ್ತು ಇಂಗ್ಲಿಷ್ ಕ್ಯಾಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಡಾಕ್ಟರ್ ಸಿ. ಮತಾಯಸ್, ಎಂ. ಡಿ. (ಹೊಮ್ಯೋ) ಎಂ. ಬಿ. (ಆಯುರ್)
ಪೂವರ್ ಸರ್ವಿಸ್ ಲೋಜ್, ಮಂಗಳೂರು.

DAYTON
CYCLES & PARTS.

AN UP-TO-DATE CYCLE THAT SPELLS IT'S UNRIVALLED SUPREMACY.

GUARANTEED 10 YEARS!

THE REGAL CYCLE STORES,
CAR STREET : : : MANGALORE.

ಅಪೂರ್ವ ಗ್ರಂಥಗಳು.

ಪುರಂದರ ದಾಸರ ಕೀರ್ತನೆಗಳು 5 ಭಾಗಗಳು ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಅಹ್ನಿಕ ಮಂಜರಿ ಕಿತ್ತಾನಾರು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ನವನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.

ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವದಿಲ್ಲ.

ಸಂಪೂರ್ಣ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅದ್ಭುತ ಫಲಗಳು.

(೧೧ ವರ್ಷದ ಅನುಭವ)

ಸಕಲ ಬಾಧೆಗಳನ್ನೂ ಪರಿಹರಿಸುವ ತಾಯಿತ ಈ ಕೆಳಗಿನ ಸಂಗತಿಗಳಲ್ಲಿ ಒಳ್ಳೆಯ ಫಲಕೊಡುತ್ತದೆ:—

ನಾವು ಮಕ್ಕಳ ಎಲ್ಲಾ ತರದ ರೋಗಗಳನ್ನೂ ಗುಣಪಡಿಸುವೆವೆಲ್ಲದೆ ಅವರನ್ನು ಆರೋಗ್ಯವಂತರನ್ನಾಗಿಯೂ ಸುಖಿಗಳನ್ನಾಗಿಯೂ ಮಾಡುವೆವು. ೨. ಕೈಕೊಂಡ ವ್ಯಾಪಾರದಲ್ಲಿ ಜಯವೊದಗಿಸುವುದು. ೩. ಅಗಲಿದ ಸ್ನೇಹಿತರನ್ನೂ ಬಂಧುಗಳನ್ನೂ ಒಡಗೂಡಿಸುವುದು. ೪. ನಿರುದ್ಯೋಗಿಗಳಿಗೆ ಉದ್ಯೋಗ ಕೊಡಿಸುವುದು. ೫. ಶಕ್ತಿ, ಆನಂದಗಳನ್ನು ದಾನಮಾಡುವುದು. ೬. ದೀರ್ಘಾಯುಸ್ಸನ್ನೂ ದೀರ್ಘಕಾಲ ಮಕ್ಕಳಿಲ್ಲದ ಸ್ತ್ರೀಯರಿಗೆ ಪುತ್ರಸಂಪತ್ತಿಯನ್ನೂ ಬರಿಸುವುದು. ಮೇಲೆ ಹೇಳಿದ ಯಾವ ವಿಷಯಕ್ಕಾದರೂ ಯಂತ್ರಗಳಿವೆ. ಬೆಲೆಗೆ ಬರೆದುಕೊಳ್ಳಿ. ಎಷ್ಟು ಹಳೆಯ ರೋಗವಾದರೂ ೨೧ ದಿವಸಗಳೊಳಗೆ ಗುಣಹೊಂದುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾತ್ರ.

MYSTIC HOME
12, Vengai Chetty St., P. T., MADRAS.

POHOLATUM for Rheuma and Headache
LUBA for weakness of lungs, Coughs Etc.
COUGH-CURE for Colds, Coughs
CURATIVE-EARTH for Constipation, Typhoid, Dysenterie
OLYMPIA-TYPEWRITERS for better typing
ASTRIDA-BLADES for quicker shaving
EUCALYPTUS-BONBONS for hoarseness
BOOKS for your own and your children education
STATIONERIES for home and Office-use
LAMPS for better lights during the rainy season

ALL THIS YOU HAVE TO GET
FROM

Basel Mission Book Depot (Canarag Ltd.)
MANGALORE, S. K.

MISSION ROAD HAMPANKATTA

ಪಿಡಿಲ್‌ನಿಂದ ಕರ್ಣಾಟಕಸಂಗೀತಕ್ಕೆ ಅನುಕೂಲವೆ? ಅನನುಕೂಲವೆ?

ಪಿಡಿಲ್.

ಈ ವಾದ್ಯವು ಪಾಶ್ಚಿಮಾತ್ಯರ ವಾದ್ಯ. ಇದನ್ನು ನಮ್ಮ ಕರ್ಣಾಟಕ ಸಂಗೀತಕ್ಕೆ ಉಪಯೋಗಿಸಲು ತಿರುಕ್ಕೋಡಿ ಕಾವಲ್ ಕೃಷ್ಣಯ್ಯರೇ ಕಾರಣರೆಂದು ಹೇಳುತ್ತಾರೆ. ಆದರೆ ಅಣ್ಣಾಮಲೈ ಸಂಗೀತ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ವಿದ್ವಾನ್ ಮ॥ ರಾ॥ ಟಿ. ಎಸ್. ಸಭೇಶಯ್ಯರವರು ಈ ಕೃಷ್ಣಯ್ಯರಿಗಿಂತಲೂ ಮೊದಲು ಬಿಕ್ಷಾಂಡರು ಕೋವಿಲ್ ಸುಬ್ಬರಾಯರೆಂಬುವರು ಪಿಟೀಲು ಬಾರಿಸುತ್ತಿದ್ದರೆಂಬುದಾಗಿಯೂ ಅವರ ಹತ್ತಿರ ತಿರುಕ್ಕೋಡಿ ಕಾವಲ್ ಕೃಷ್ಣಯ್ಯರು ಅಭ್ಯಾಸನೂಡಲು ಹೋದರೆಂದೂ ಅದಕ್ಕೆ ಅವರು ಹೇಳಿಕೊಡಲಿಲ್ಲವೆಂದೂ ಪ್ರತೀತಿಯಿದೆ ಎಂದರು. ಅದಕ್ಕಾಗಿ ತಿರುಕ್ಕೋಡಿ ಕಾವಲ್ ಕೃಷ್ಣಯ್ಯರು ವೇಷವನ್ನು ಮರೆಯಿಸಿಕೊಂಡು ಹೋಗಿ ಬಿಕ್ಷಾಂಡರು ಕೋವಿಲ್ ಸುಬ್ಬರಾಯರ ಸಂಗೀತ ಕಛೇರಿಯನ್ನು ಕೇಳಿ ತಾವು ಅಭ್ಯಾಸ ಮಾಡಿದರೆಂಬುದಾಗಿ ಹೇಳಿದರು. ಅಲ್ಲದೆ ಅವರು ಈಗಿನ ಕಾಲದವರ ಹಾಗೆ ಎದೆಗೆ ಒತ್ತಿಟ್ಟುಕೊಳ್ಳದೆ ಕತ್ತಿನಲ್ಲಿ ಅದುಮಿಕೊಂಡು ಕೈಯ ಉಗುರಿನ ಹಿಂಭಾಗದಲ್ಲಿ ತಂತಿಗಳನ್ನು ಸವರಿಕೊಂಡು ಬಾರಿಸುತ್ತಿದ್ದರೆಂದು ಕೇಳಿದ್ದೇನೆ. ಅದು ಹೇಗಾದರೂ ಆಗಲಿ. ಫಿಡಿಲ್ ವಾದ್ಯವನ್ನು ಅದಕ್ಕಿಂತಲೂ ಹಿಂದೆ ಬಾರಿಸುತ್ತಿದ್ದರೆಂಬುದಕ್ಕೆ ಅಣ್ಣಾಮಲೈ ಸಂಗೀತ ಕಲಾ ಶಾಲೆಯಲ್ಲಿ ಬಾಯಿಪಾಠಹಾರಿಕೆಯ ಉಪಾಧ್ಯಾಯರಾದ ವಿದ್ವಾನ್ ಮ॥ ರಾ॥ ಕೆ. ಪೊನ್ನಯ್ಯ ಪಿಳ್ಳೆಯವರ ಮನೆಯಲ್ಲಿ ಅವರ ಅಜ್ಜಂದಿರ ತಮ್ಮಂದಿರಾದ ವಡಿವೇಲು ಎಂಬುನರಿಗೆ ತಿರುವಾಂಕೂರು ರಾಜಾಸ್ಥಾನದಿಂದ ಬಹುಮಾನಿಸಲ್ಪಟ್ಟ, ದಂತದಿಂದಲೇ ಮಾಡಲ್ಪಟ್ಟ ಪಿಟೀಲು ಇದೆ, ಅಲ್ಲದೆ ಅವರು ಪಿಟೀಲು ಬಾರಿಸುವುದರಲ್ಲಿ ಬಹು ಸಮರ್ಥರೆಂಬ ಹೆಸರು ಹೊಂದಿದುದರಿಂದ ಅವರಿಗೆ ಪಿಟೀಲು ಬಹುಮಾನಿಸಲ್ಪಟ್ಟಿತೆಂಬ ಪ್ರತೀತಿಯಿದೆ. ಅವರಿಗಿಂತ ಹಿಂದೆ ಪಿಟೀಲು ಪ್ರಚಾರದಲ್ಲಿತ್ತೋ ಇಲ್ಲವೋ ಎಂಬುದಕ್ಕೆ ಆಧಾರವೇನೂ ಇಲ್ಲ. ತಿರುಕ್ಕೋಡಿ ಕಾವಲ್ ಕೃಷ್ಣಯ್ಯರನಂತರ ಅವರ ಶಿಷ್ಯಂದಿರು ಗೋವಿಂದ ಸ್ವಾಮಿ ಪಿಳ್ಳೆಯವರು ದೊಡ್ಡ ವಿದ್ವಾನಂತರಾಗಿಯೂ ಪಿಟೀಲು ವಾದ್ಯದಲ್ಲಿ ಅತಿ ಸಮರ್ಥರೆಂಬ ಹೆಸರನ್ನೂ ಪಡೆದಿದ್ದರು.

ಈ ವಾದ್ಯವನ್ನು ಇಟಲಿ ದೇಶದಲ್ಲಿಯೇ ಜಾಸ್ತಿಯಾಗಿ ತಯಾರುಮಾಡುತ್ತಿದ್ದರೆಂದು ಹೇಳಿಕೆಯಿದೆ. ಇದನ್ನು ಮಾಡುವುದರಲ್ಲಿ (Stainer) ಸ್ಟೇನರ್ (Stradivarius) ಸ್ಟ್ರಾಡಿವರಿಯಸ್ ಮೊದಲಾದವರು ನಿಪುಣರಾಗಿದ್ದರು. ಈಗಲೂ ಕೂಡ ಇವರ ಕಾಪಿಗಳು ಪ್ರಸಿದ್ಧವಾಗಿವೆ. ಎರಡನೆಯವರು ಮೊದಲನೆಯವರ ಶಿಷ್ಯರೆಂಬದಾಗಿಯೂ ಪ್ರತೀತಿಯಿದೆ. ಅನುಭವದಲ್ಲಿ ಸ್ಟೇನರ್ ಕಾಪಿಗಿಂತ ಜಾಸ್ತಿಯಾಗಿ ಸ್ಟ್ರಾಡಿವರಿಯಸ್ ಕಾಪಿಗಳನ್ನೇ ಜಾಸ್ತಿಯಾಗಿ ಉಪಯೋಗಿಸುತ್ತಿದ್ದಾರೆ. ಕಾರಣವೇನೆಂದರೆ ಸ್ಟೇನರ್ ಕಾಪಿಯಲ್ಲಿ ತಾರಸ್ಥಾಯಿಯಲ್ಲಿ ಶಬ್ದವು ಜಾಸ್ತಿಯಾಗಿಯೂ ಸ್ವಲ್ಪ ಮೂಗುಶಬ್ದವಾಗಿಯೂ ಸ್ಟ್ರಾಡಿವರಿಯಸ್ ಮಧ್ಯ ಸ್ಥಾಯಿಯಲ್ಲಿ ಶಬ್ದ ಜಾಸ್ತಿಯೂ ನಾದವು ಸುಖವಾಗಿಯೂ ಇರುವುದರಿಂದ ಇದನ್ನೇ ಜನಗಳು ಜಾಸ್ತಿ ಉಪಯೋಗಿಸುತ್ತಿದ್ದಾರೆ. ಇವುಗಳಿಗೆ ಪದಾರ್ಥಗಳ ಮೇಲೆ ಲಕ್ಷಾಂತರ ರೂಪಾಯಿ ಬೆಲೆಯು ಕೂಡ ಉಂಟು. ಈಗಲೂ ಕೂಡ ಪಾಶ್ಚಿಮಾತ್ಯರಲ್ಲಿ ಇದನ್ನು ಬ್ಯಾರಿಸುವುದರಲ್ಲಿ ದೊಡ್ಡ ನಿಪುಣರು ಇದ್ದಾರೆ. ಈಗ ಇದನ್ನು ಬಾರಿಸುವುದರಲ್ಲಿ ಕ್ವಿಜಲಿನ್ ಎಂಬುವರು ಬುದ್ಧಿವಂತರಂತೆ. ಈ ವಾದ್ಯವನ್ನು ಇಂಡಿಯಾ ದೇಶದಲ್ಲಿ ಸಾಮಾನ್ಯವಾಗಿ ದಕ್ಷಿಣದೇಶದ ಸಂಗೀತ ವಿದ್ವಾಂಸರೇ ಜಾಸ್ತಿಯಾಗಿ ಉಪಯೋಗಿಸುತ್ತಿದ್ದಾರೆ. ಈ ವಾದ್ಯವನ್ನು ಇಂಡಿಯದ ಕ್ರಿಶ್ಚಿಯನ್‌ರು ಮತ್ತು ಆಂಗ್ಲೋ-ಇಂಡಿಯನ್‌ರು ಕ್ರಿಸ್ತ ಮತಪ್ರಚಾರಕ್ಕೂ ಚರ್ಚುಗಳಿಗೂ ಉಪಯೋಗಿಸುತ್ತಾರೆ.

ಈ ವಾದ್ಯವು ಯುರೋಪ್ ದೇಶದ ಒಂದು ಜಾತಿಯ ಮರದಿಂದ ತಯಾರುಮಾಡಲ್ಪಡುತ್ತೆ. ಆ ಮರವು ಭಾರವು ಕಡಿಮೆಯಾಗಿಯೂ ಗಟ್ಟಿಯಾಗಿಯೂ ಇರುವುದು. ಇದರಿಂದ ಒಂದು ಕಾಯಿಯು ಕೋಳಿಯ ಮೊಟ್ಟೆಯ ಆಕಾರವಾಗಿಯೂ ಅಡಿಭಾಗ ಮತ್ತು ಮೇಲು ಭಾಗಗಳು ಸುಮಾರಾಗಿ ಚಪ್ಪಟೆಯಾಗಿಯೂ ಮಧ್ಯಪ್ರದೇಶದಲ್ಲಿ ೨ ಎಸ್ ಮಾರ್ಕ್‌ಗಳಿಂದ ಕೂಡಿದುದಾಗಿಯೂ ಇದೆ. ಅಲ್ಲಿಯೇ ಪಿಟೀಲಿನ ತಂತಿಯನ್ನು ಹೊರಲು (ಬ್ರಿಡ್ಜ್) ಕುದುರೆಯು ನಿಲ್ಲುವ ಸ್ಥಳ. ಈ ಕುದುರೆಯ ಮೇಲೆ ೪ ತಂತಿಗಳು ಪಿಟೀಲಿನ ಗೂಟಕ್ಕೂ ಪಿಟೀಲಿನ ಗಡ್ಡದ ಚಕ್ಕೆ (Tail-pieces)ಗೂ ತಂತಿಯಿಂದ ಕಟ್ಟಲ್ಪಟ್ಟು ಕುದುರೆಯ ಮುಂದೆ ಕಾಯಿಯನ್ನು ಬಿಟ್ಟು ಸುಮಾರು ಅರ್ಧ ಅಥವಾ ಕಾಲು ಇಂಚು ಎತ್ತರದಲ್ಲಿ ಮುಲಗಿರುವ ಫಿಂಗರ್ ಬೋರ್ಡ್ (Finger Board)ಗೆ ತಗಲದೆ ಅದರ ತುದಿಯಲ್ಲಿ ಅಂದರೆ ಪಿಟೀಲಿನ ಕಾಯಿಯ ಮೇಲು ಭಾಗದ ತುದಿಯಲ್ಲಿರುವ ಮೇರ್ವೆ ಎಂದು ಕರೆಲ್ಪಡುವ ಒಂದು ದಂತದ, ಕೊಂಬಿನ ಅಥವಾ ಕರಿಯ ಮರದ ಚೂರಿನ ಮೇಲೆ ತಂತಿಯನ್ನಿಡಲು ಮಾಡಿರುವ ಹಳ್ಳದ ಮೇಲೆ ಹಾಯ್ದು ಕೆಳಗೆ ಇಳಿದು ಬಿಡಿಗೆಗಳಿಗೆ ಸುತ್ತಲ್ಪಟ್ಟಿವೆ. ಇದರಲ್ಲಿ ಬಾರಿಸುವವನ ಬಲಗಡೆಯ 1st E ಸ್ಟ್ರಿಂಗ್ (ತಂತಿಯು) ಮಧ್ಯ ಪವನ್ನೂ (ಪಂಚಮ), 2nd A (ಸಾರಣಿ) ತಂತಿಯು ಮಧ್ಯ ಸವನ್ನೂ, 3rd D (ತಗ್ಗು ಪಂಚಮ) ತಂತಿಯು ಮಂದ್ರ ಪವನ್ನೂ 4th G(ಮಂದ್ರ) ತಂತಿಯು ಮಂದ್ರ ಸವನ್ನೂ ಧ್ವನಿಸುತ್ತದೆ. ಅಂದರೆ ಒಟ್ಟಿನಲ್ಲಿ ಮಂದ್ರ ಸದಿಂದ ಕೆಳಗೆ ಬಾರಿಸಲಾಗುವುದಿಲ್ಲ. ಅಲ್ಲಿಗೆ ಸರಿಯಾದ ಶ್ರುತಿಗಿಂತ ಒಂದು ಸ್ಥಾಯಿ ಕೆಳಗೆ ಎಂದಾಯ್ತು. ಆದ್ದರಿಂದ ಈ ಪಿಟೀಲಿನ ಮಂದ್ರ ಮಧ್ಯ ತಾರ ಸ್ಥಾಯಿ ಮೂರು ಸ್ಥಾಯಿಗಳನ್ನೂ ಪೂರ್ತಿಯಾಗಿ ಬಾರಿಸಬಹುದು. ಆದರೆ ತಾರ ಸ್ಥಾಯಿಯು ಕೈಗೆ ಬಹಳ ದೂರವಾಗಿರುವುದರಿಂದಲೂ ಸ್ಥಾನಗಳು ಬಹಳ ಹತ್ತಿರವಾದುದರಿಂದಲೂ ಜಾಗ್ರತೆ, ಶುದ್ಧ ಸ್ಥಾನಗಳು ಸಿಕ್ಕುವುದು ಬಹಳ ಕಷ್ಟ. ಹಾಗೆ ಶುದ್ಧವಾಗಿ ಬ್ಯಾರಿಸುವವರೂ ಅತಿ ವಿರಳ. ಇದನ್ನು ಶಬ್ದಿಸಲು ಒಂದು ಮರದ ಉದ್ದವಾಗಿ ಬಗ್ಗಿದ ಕೋಲಿಗೆ ಕುದುರೆಯ ಬಾಲದ ಕೂದಲನ್ನು ಬೆಳ್ಳಗೆ ಮಾಡಿ ಕಟ್ಟಲ್ಪಟ್ಟಿದೆ. ಇದಕ್ಕೆ (Bow) ಕಮಾನು ಎಂದು ಹೆಸರು. ಪಿಟೀಲಿಗೆ ಕೆಲವರು ಉಕ್ಕಿನ ತಂತಿಗಳನ್ನೂ ಕೆಲವರು ಗಟ್ ತಂತಿಗಳನ್ನೂ ಕೆಲವರು ಒಂದು ತಂತಿಯ ಮೇಲೆ ಸಣ್ಣ ತಂತಿಯನ್ನು ಸುತ್ತಿದ ತಂತಿಗಳನ್ನೂ ಉಪಯೋಗಿಸುತ್ತಾರೆ. ಹೀಗೆ ಉಪಯೋಗಿಸುವುದರಲ್ಲಿ ಶ್ರುತಿಗೆ ತಕ್ಕ ಹಾಗೆ ತಂತಿಗಳನ್ನು ಉಪಯೋಗಿಸಬೇಕಾಗುತ್ತದೆ. ಶ್ರುತಿ ಹೆಚ್ಚಾದರೆ (ಅಂದರೆ ವೈಬ್ರೇಷನ್ ಲೆಕ್ಕ ಜಾಸ್ತಿಯಾದರೆ) ತೆಳುವಾದ ತಂತಿಗಳನ್ನೂ ಶ್ರುತಿ ಕಡಿಮೆಯಾದರೆ ದಪ್ಪ ತಂತಿಗಳನ್ನೂ ಉಪಯೋಗಿಸಬೇಕಾಗುತ್ತದೆ. ಆದರೆ ಈಗ ಮೈಸೂರ್ ದೇಶದ ವಿದ್ವಾಂಸರು ಪಾಶ್ಚಿಮಾತ್ಯರು ಉಪಯೋಗಿಸುವ ತಂತಿಗಳನ್ನು ಉಪಯೋಗಿಸುತ್ತಾರೆ. ಮಿಕ್ಕೆಡೆಗಳಲ್ಲಿ ಹಾಗಲ್ಲದೆ ಸಣ್ಣ ತಂತಿಗಳನ್ನೂ ಇನ್ನು ಕೆಲವೆಡೆಗಳಲ್ಲಿ ಉಕ್ಕಿನ ತಂತಿಗಳನ್ನೂ ಉಪಯೋಗಿಸುತ್ತಾರೆ. ಈ ಪಿಟೀಲು ವಾದ್ಯಗಳು ಸಾಮಾನ್ಯವಾಗಿ ಅರ್ಧ ಅಡಿ ಅಗಲ, ಸುಮಾರು ೧೦-೧೫ ಅಡಿಗಳ ಉದ್ದದ ವರೆಗೂ ಉಂಟು. ಆದರೆ ದೊಡ್ಡ ಸೈಜಿನ ಪಿಟೀಲುಗಳನ್ನು ನೃತ್ಯಗಳಿಗೂ ಆರ್ಕೆಸ್ಟ್ರಾಗಳಿಗೂ ಉಪಯೋಗಿಸುತ್ತಾರೆ. ಇವುಗಳಿಗೆ ಸೈಜಿಗೆ ತಕ್ಕ ಬೇರೆ ಬೇರೆ ಹೆಸರುಗಳು ಕೂಡ ಉಂಟು. ಈ ವಾದ್ಯವನ್ನು ದಕ್ಷಿಣ ಇಂಡಿಯದಲ್ಲಿ ಕರ್ಣಾಟಕಸಂಗೀತವಿದ್ವಾಂಸರುಗಳು ಸಂಗೀತ ಕಛೇರಿಗಳಿಗೂ ಹರಿಕಥೆ ಕಾಲಕ್ಷೇಪಗಳಿಗೂ ನಾಟಕಗಳಿಗೂ ಭಜನೆಮಂದಿರಗಳಿಗೂ ಉಪಯೋಗಿಸುತ್ತಾರೆ.

(ಸಶೇಷ.)

ಆರ್. ವಿ. ಶ್ರೀಕಾಂತಯ್ಯ,
ಸಂಗೀತಭೂಷಣಂ.

ಆಲ್ ಇಂಡಿಯಾ ಷುಗರ್ ಮಿಲ್ಸ್, ಲಿಮಿಟೆಡ್, ಕಲ್ಕತ್ತ.

ಷೇರ್ 1ಕ್ಕೆ ರೂ. 10—0—0.
ಅಡ್ಮಿಷನ್ ಫೀ ರೂ. 1—0—0.

ಷೇರ್ ಮೊಬಲಗನ್ನು ಪಾವತಿ ಮಾಡುವ ವಿಧಾನ :—

ಪ್ರತಿಯೊಂದು ಆಪ್ಲಿಕೇಷನ್ ಸಂಗಡ ಅಡ್ಮಿಷನ್ ಫೀ ರೂ. 1/-, ಪ್ರತಿ ಷೇರಿಗೂ 2/- ರೂ.ನಂತೆಯೂ, ಅಲಾಟ್‌ಮೆಂಟ್ ಆದ ಮೇಲೆ ಷೇರ್ 1ಕ್ಕೆ 2/- ರೂ.ನಂತೆಯೂ, ಬಾಕಿ ಮೊಬಲಗು 6/- ರೂ.ಗಳನ್ನು 3 ತಿಂಗಳ ವಾಯಿದೆಯಲ್ಲಿ ಪ್ರತಿ ಷೇರಿಗೂ ತಿಂಗಳೊಂದಕ್ಕೆ 2/- ರೂ.ನಂತೆ ಕೇಳಿದಾಗ ಕೊಡತಕ್ಕದ್ದು.

ಇಂಡಿಯಾದಲ್ಲಿ ಹೊರಗಡೆಯಿಂದ ತರಿಸಿಕೊಳ್ಳುವ ಒಟ್ಟು 100 ಭಾಗದಲ್ಲಿ 62 ಭಾಗ ಸಕ್ಕರೆಯನ್ನು ಬೆಂಗಾಲ್ ಪ್ರೆಸಿಡೆನ್ಸಿಯೊಂದರಲ್ಲಿಯೇನೆ ತರಿಸಿಕೊಳ್ಳುತ್ತದೆ. ಆದ್ದರಿಂದ ಮೇಲ್ಕಂಡ ಮಿಲ್ಲಿನಲ್ಲಿ ತಯಾರಾದ ಸಕ್ಕರೆಗೆ ಹೆಚ್ಚು ಪ್ರಾಶಸ್ತ್ಯವಿರುವುದರಿಂದ ಸಕ್ಕರೆ ಕಾರ್ಖಾನೆಯ ಷೇರುಗಳ ದರಗಳು ಕ್ರಮೇಣದಲ್ಲಿ ಹೆಚ್ಚಾಗುತ್ತವೆ. ಮೇಲ್ಕಂಡ ಷೇರುಗಳನ್ನು ಪಡೆಯಲಿಷ್ಟವಿರುವವರು ಕೂಡಲೆ 2 ಆಣೆ ಸ್ಟ್ಯಾಂಪಿನೊಡನೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಚಟುವಟಿಕೆಯಿಂದ ಕೆಲಸಮಾಡುವ ಏಜಂಟರುಗಳಿಗೆ ಧಾರಾಳವಾದ ಕಮಿಷನ್ ಕೊಡಲಾಗುತ್ತದೆ. ಇಷ್ಟವುಳ್ಳವರು ಜಾಗ್ರತೆಯಾಗಿ 2 ಆಣೆ ಸ್ಟ್ಯಾಂಪಿನೊಡನೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜಂಟರು:—

ಕೆ. ಎಸ್. ಲಕ್ಷ್ಮೀನಾರಣಪ್ಪ,
ಹೆಲ್ಪರ್, ಮೈಸೂರು ಸರಕಾರದ ಜೀವವಿಮೆ,
ತುಮಕೂರು, (ಮೈಸೂರು ಸ್ಟೇಟ್.)

3, 29—5.

ದೇಶಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕಾದ ದೇಶೀಯ ಕೈಗಾರಿಕೆ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಮದ್ರಾಸು.

ಇವರ ಉತ್ಕೃಷ್ಟ, ನಾಜೂಕಾದ ಹಾಗೂ ಬಹಳ ಬಾಳಿಕೆಯ ತ್ರಿಲೋಕ (ನಾರದ) ಮಾರ್ಕಿನ ಸ್ಟೀಲ್ ಟ್ರಂಕುಗಳು ಮತ್ತು ಸೂಟ್‌ಕೇಸುಗಳು.



ಈ ಕಾರ್ಖಾನೆಯಲ್ಲಿ ತಯಾರಾಗುವ ಪ್ರತಿ ಒಂದು ಸಾಮಾನು ಬಹುವರ್ಷಗಳಲ್ಲಿ ತಾವೇ ತಂ ಹೊಂದಿದ ಕೆಲಸಗಾರರಿಂದಲೇ ತಯಾರಾಗುತ್ತಿವೆ. ಆದುದರಿಂದಲೇ ಇಲ್ಲಿನ ವಸ್ತುಗಳು ಅಂದಚಂದದಲ್ಲೂ ಬಂದೋಬಸ್ತಿನಲ್ಲೂ ಕುಂದಿಲವೆಂಬುದು ನಿಸ್ಸಂದೇಹ. ಇಲ್ಲಿ ಬಗೆ ಬಗೆ ಅಳತೆಯ ಟ್ರಂಕುಗಳು, ಸೂಟ್‌ಕೇಸುಗಳು, ಹಣದ ಪೆಟ್ಟಿಗೆಗಳು, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳು, ಟೇಬಲಿಗ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳು ಮುಂತಾದುವು ಸರ್ವಕಾಲವೂ ವಿಕ್ರಯಕ್ಕೆ ಸಿದ್ಧವಿರುತ್ತವೆ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೋ'ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ. ನಿಮಗೆ ಖಚಿತವಾಗುವುದು.

ಹೆಚ್ಚಿನ ವಿವರಕ್ಕೆ ಮತ್ತು ಕ್ರಯದ ಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್,
ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.

ಹೆಡ್ ಆಫೀಸು: — 22, ಬೇಕರ್ ಸ್ಟ್ರೀಟ್, ಜಿ. ಟಿ. ಮದ್ರಾಸು.
ಬ್ರಾಂಚ್ ಆಫೀಸು:—ರೈಟ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

THE ASIAN ASSURANCE CO., LTD., BOMBAY.

ಇನ್ಶೂರೆನ್ಸಿಗಾಗಿ ಈ ಸಂಸ್ಥೆಯೊಡನೆ ಆಲೋಚಿಸಿರಿ

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಾಯಿ.

ರಜತಮಹೋತ್ಸವದ ಮೂಲ್ಯವೇತನದ ಫಲಿತಾಂಶವನ್ನು ಕಾಯುತ್ತಿರಿ.

ವಿಸ್ತಾರಗೊಳಿಸಿವ 'ಇನ್ಶೂರೆನ್ಸ್'

ಇದಕ್ಕೊಂದು ಉದಾಹರಣೆ:—ಒಬ್ಬ ಯುವಕನು, "ಕೋಷ್ಟಕ" III Aಯಂತೆ, ಲಾಭಸಹಿತವಾದ 20 ವರ್ಷಗಳ ಎಂಡೋಮೆಂಟಿಗಾಗಿ, 10,000 ರೂಪಾಯಿಗಳಿಗೆ ವಿಮೆ ಮಾಡುತ್ತಾನೆ ಎನ್ನುವ. ಆತನ ವರ್ಷಾವಧಿ ಪ್ರೀಮಿಯಮಿನ ಮೊತ್ತ ರೂ. 500—15—0. ಈ ಕಂತನ್ನು ಆತನು 5 ವರ್ಷ ಕಟ್ಟುತ್ತಾ ಬರುತ್ತಾನೆ; ಆ ಮೇಲೆ ಅದವನಿಂದ ಸಾಧ್ಯವಿಲ್ಲವೆಂದಾಗಲು, ಆತನು ವಿಸ್ತಾರಗೊಳಿಸಿದ ಈ ವಿಮಾ ಕ್ರಮದ ಪ್ರಯೋಜನ ಪಡೆಯಲು ಮನವಿ ಮಾಡುತ್ತಾನೆ. ಆಗ ಕಂಪೆನಿ, ಮುಖಮೂಲ್ಯದ ಸಂಪೂರ್ಣ ಮೊತ್ತ ರೂ. 10,000ಗಳಿಗೇ, ಆತನ ಪೋಲಿಸಿಯನ್ನು ಉಳಿದ 15 ವರ್ಷಗಳ ವರೆಗೂ ಊರ್ಜಿತದಲ್ಲಿರಿಸಲು ತಕ್ಕ ಭರವಸೆ ಕೊಡುತ್ತದೆ. ಈ ಅವಧಿಯಲ್ಲಿ ಆತನಿಲ್ಲಿಯಾದರೂ ಮೃತನಾದರೆ, ಈತನು ತೆರವೆ ಇರುವ ಪ್ರೀಮಿಯಮಿನಲ್ಲಿ ಎಷ್ಟನ್ನಾದರೂ ಕಳೆಯದೆ, ಆ 10,000 ರೂಪಾಯಿಗಳನ್ನೂ ಕಂಪೆನಿಯು ಸಲ್ಲಿಸಿಬಿಡುವುದು.

ಜೆ. ಎ. ಪ್ರುತ್ರನ್, ಬ್ರಾಂಚ್ ಮ್ಯಾನೇಜರ್,
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ವಿಶ್ವವಿಚಾರ

(ವಿಮಾನಪತ್ರ)

ಬ್ರಿಟನ್ನಿನಲ್ಲಿ ನೌಕಾರಚನೆ:—ಭೂಮಂಡಲದ ಪ್ರಮುಖ ರಾಜ್ಯಗಳಲ್ಲಿ ಒಟ್ಟಿಗೆ ಇದೇ ಕಳೆದ ಮಾರ್ಚಿ ೩೧ನೇ ತಾರೀಕಿಗೆ ತಯಾರಾಗುತ್ತಿರುವ ಯುದ್ಧನೌಕೆಗಳು ೯೭೭,೭೫೩ ಟನ್ (ಒಂದು ಟನ್=೩೫ ಘನ ಫೀಟು) ಸ್ಥಳಾಂತರದವುಗಳು; ಅವುಗಳಲ್ಲಿ ಬ್ರಿಟಿಷ ನೌಕಾಕಾರ್ಖಾನೆಗಳಲ್ಲಿ ಲಳ೨,೩೬೧ ಟನ್ನ್ ತಯಾರಾಗುತ್ತಿವೆ. ಜರ್ಮನಿಯಲ್ಲಿ ೩೧೭,೦೫೩ ಟನ್ನ್, ಜಪಾನು ೧೫೦,೬೬೨, ಹೊಲ್ಲೆಂಡು ೧೪೬,೭೬೦, ಸ್ವೀಡನ್ನ್ ೧೧೨,೭೫೦ ಟನ್ನ್.

ಫ್ರಾನ್ಸ್‌ನಲ್ಲಿ ಪಾರ್ಲಿಮೆಂಟ ಚುನಾವಣೆ:—ಫ್ರಾನ್ಸದಲ್ಲಿ ಸಮತಾವಾದದ ತಂಡದ ಬಹುಮತವೇ ಚುನಾವಣೆಯಲ್ಲಿ ತಲೆ ಎತ್ತಿ ಅವರ ನಾಯಕನಾಗಿ ಮಿ। ಬ್ಲುವ್ ಎಂಬವನು ಮುಖ್ಯ ಮಂತ್ರಿಯಾಗಿದ್ದಾನೆ. ಇದರಿಂದ ತಾನು ಹಿಂದೆ ಹಾರೈಸಿದಂತೆ ರುಶ್ಯದ ಸೋವಿಯಟದೊಡನೆ ಆದ ಒಪ್ಪಂದದಂತೆ ಈ ಸಮತಾವಾದದವರಿಂದ ಶಾಂತಿಭಂಗ ಖಂಡಿತವಾಗಿಯೂ ಆದೀತೆಂದು ಹಿಟ್ಲರನ ಅಭಿಪ್ರಾಯ. ಆದರೆ ಬ್ಲುವ್ ಈ ಲೀಗಿನ ಗೌರವವನ್ನು ಹೇಗೂ ಉಳಿಸಬೇಕೆಂದೂ ಶಾಂತಿಭಂಗದ ಲಕ್ಷಣಗಳು ಕಂಡುಬಂದರೆ ಫ್ರಾನ್ಸಿನ ಗೌರವಕ್ಕೂ ಆಸ್ತಿಕ್ಯಕ್ಕೂ ಭಂಗಬಾರದಂತೆ ತಾನು ವರ್ತಿಸುವೆನೆಂದು ಬ್ರಿಟನ್ನಿಗೆ ತಿಳಿಸಿರುವನು.

ಇಟಲಿಯ ಹತ್ತು ಮಹಾ ಆಜ್ಞೆಗಳು:—ಮಿ। ಮುಸ್ಸೊಲಿನಿಯು ಪ್ರತಿಯೊಬ್ಬ ಸೈನಿಕನು ಪಠಿಸತಕ್ಕ ಕಲವು ಆಜ್ಞೆಗಳನ್ನು ಸರಕಾರಿ ಗಜೇಟಿನಲ್ಲಿ ಪ್ರಕಟಿಸಿರುವನು. ಅವು ಹೀಗಿವೆ:—

೧. ನಿನ್ನ ಪ್ರತಿಯೊಂದು ಕಾರ್ಯದಲ್ಲಿಯೂ ನಿನ್ನ ಕರ್ತವ್ಯವೇ ಪ್ರೇರೇಪಿಸಲಿ.

೨. ಬೇರೆ ಯಾವುದಕ್ಕಿಂತಲೂ ದೇಶ ಪ್ರೇಮವೇ ಮಹತ್ವದ್ದು.

೩. ಹಿಮದಂತೆ ನಿರ್ಮಲತೆ, ಬಂಡೆಯಂತೆ ಸ್ಥಿರಬುದ್ಧಿ, ಸೂರ್ಯನಂತೆ ತೀಕ್ಷ್ಣತೆಯುಳ್ಳವನಾಗಿರು.

೪. ದಿನ ಹೋಗುತ್ತ ಉತ್ತಮ ಕಲಾಭಿಜ್ಞ, ಉತ್ತಮ ಯೋಧ್ಧ, ಉತ್ತಮ ನಾಗರಿಕನಾಗಲು ಯತ್ನಿಸು.

೫. ನಿನಗೆ ಒಪ್ಪಿಸಿದ ಕಾರ್ಯನಿರ್ವಹಣಕ್ಕೆ ತಕ್ಕುದಾದ ಚಿಂತನೆಯೂ ಅದಕ್ಕೆ ಅನುಸರಿಸುವ ಕಾರ್ಯಭಾಗವೂ ನಿನ್ನಲ್ಲಿರಲಿ.

೬. ನಿನ್ನ ಜನ್ಮಭೂಮಿ, ನಿನ್ನ ರಾಜ್ಯ, ನಿನ್ನ ನಾಯಕನ ಪರವಾಗಿ ಪ್ರಾಣತ್ಯಾಗ ಮಾಡಲಿಕ್ಕೆ ಕಾಲು ಹಿಂದೆಗೆಯಬೇಡ.

೭. ನಿನ್ನ ಭಾವಿಕಲ್ಯಾಣವು ನಿನ್ನ ಮತ್ತು ನಿನ್ನ ಹಿತಚಿಂತಕರ ನಿರೀಕ್ಷಣೆಯಂತೆ ನಿನ್ನ ಕೈಯಲ್ಲಿದೆ.

೮. ನಿನ್ನ ಕೈಗೆ ಒಪ್ಪಿಸಿದ ಕಾರ್ಯವು ಎಷ್ಟೆ ಅಲ್ಪವಾಗಿದ್ದರೂ ಅದನ್ನು ಚೆನ್ನಾಗಿ ಮಾಡಿದೆನೆಂಬ ಸಮಾಧಾನ ನಿನಗಿರುವಂತೆ ವರ್ತಿಸು.

೯. ಸೈನಿಕನಿಗೂ ನಾಗರಿಕ ಪ್ರಜಾವ್ಯಕ್ತಿಗೂ ಶಿಸ್ತಿಗೆ ಅನುಸರಿಸಿ ವರ್ತಿಸುವುದೇ ಮುಖ್ಯವೆಂದು ಮರೆಯಬೇಡ.

೧೦. ನಿನ್ನಲ್ಲಿ ಯೋಗ್ಯತೆಯಿದ್ದರೆ ಕೀರ್ತಿಯು ನಿನ್ನ ಕೈಸೇರಲೇಬೇಕು.

ಅಪ್ರಾಯಸ್ಥ ಯುವಕರ ಕೂಟಗಳಲ್ಲಿ ಪ್ರತಿಯೊಬ್ಬ ಮೆಂಬರನ ಹಲ್ಲುಮೋರೆಗಳ ಪರೀಕ್ಷೆ, ಆರೋಗ್ಯಪರೀಕ್ಷೆ ಮಾಡಿ ಫಲಿತಾಂಶವನ್ನು ಬರಕೊಂಡ ಪುಸ್ತಕಗಳಿವೆ.

ಡಿಸ್ಟ್ರಿಕ್ಟ ಬೋರ್ಡಿನ ಆಯವ್ಯಯ ಪಟ್ಟಿ

೧೯೩೬—೩೭.

(ಮುಂದುವರಿಸಿದುದು.)

ಸೆಕೆಂಡರಿ ಶಾಲೆಗಳಿಗೆ ಸಾದಿಲವಾರು:—೧೯೩೫—೩೬ರಲ್ಲಿ ರೂ. ೮,೯೦೦ನ್ನು ಇಟ್ಟಾಗ ರೂ. ೭೪೦೦ ಖರ್ಚಾಗಿತ್ತು. ೧೯೩೬—೩೭ರಲ್ಲಿ ರೂ. ೫,೧೦೦ನ್ನು ವಿಂಗಡಿಸಿಟ್ಟಿದೆ. ಲೆಬೋರೆಟರಿ ವಗೈರೆಗೆ ಬೇಕಾದ ಹಣ ಇಲ್ಲದಿದ್ದರೆ ಕಲಿಸುವಿಕೆಯೇ ಕಷ್ಟವಾದೀತು; ಆದ್ದರಿಂದ ಇದಕ್ಕೆ ಪ್ರತ್ಯೇಕಿಸಿ ಆ ಮೇಲೆ ಇತರ ಗರಜುಗಳ ಪೂರೈಕೆಗೆ ವಿಂಗಡಿಸುವುದು ಅಗತ್ಯ.

ಇಂಜಿನಿಯರಿಂಗ್ ಸಿಬಂದಿ:—ಇದರಲ್ಲಿ ೧೯೩೫—೩೬ಕ್ಕೆ ೫೮,೬೬೦ ರೂ. ವಿಂಗಡಿಸಿಟ್ಟಿದ್ದು ರೂ. ೫೧,೯೦೦ ಮಾತ್ರ ಖರ್ಚಾಯಿತು. ಹೀಗೆ ಖರ್ಚು ಕಡಿಮೆಯಾಗಲಿಕ್ಕೆ ಸಂಕಸೇತುವೆಗಳ ಖರ್ಚಿನಲ್ಲಿಯೇ ಕೆಲವು ಸಿಬಂದಿ (ಮೇಲ್ವಿಚಾರದ್ದು)ಯ ಖರ್ಚನ್ನು ಸೇರಿಸಿದ್ದೂ ರಜಾ ಬಗ್ಗೆ ತಗಲುವ ಖರ್ಚು ಕಡಿಮೆಯಾದದ್ದೂ ಕಾರಣವಂತೆ. ಇದಲ್ಲದೆ ನಿಡಗಲ್ಲ ಸೇತುವೆಯನ್ನು ತಿರಿಗಿ ಕಟ್ಟಿಸುವ ಬಗ್ಗೆ ವಿಂಗಡಿಸಿದ ರೂ. ೫೯,೦೦೦. ಹಿಂದಿದ ಅನುಭವದಿಂದ ಹೇಳುವುದಾದರೆ ಒಬ್ಬ ಎಸಿಸ್ಟಾಂಟ ಎಂಜಿನಿಯರನ್ನೇ ಈ ಕೆಲಸಕ್ಕೆ ವಿಂಗಡಿಸಿ ಬಾಕಿ ಕೆಲಸಗಳ ವಿಚಾರ ಉಳಿದ ಇಬ್ಬರೆ ಎಸಿಸ್ಟಾಂಟ ಎಂಜಿನಿಯರರಿಂದ ನಡಿಸುವುದಾದರೆ ಕಷ್ಟವಿರಲಾರದು. ಹೀಗೆ ಮಾಡುವುದರಿಂದ ಒಬ್ಬ ಎಸಿಸ್ಟಾಂಟ ಎಂಜಿನಿಯರರ ಖರ್ಚು ಬೋರ್ಡಿಗೆ ಉಳಿಯಬಹುದು. ಇದಲ್ಲದೆ ಕೆಪಿಟಲ್ ವರ್ಕ್ಸಿಗೆ ತಿದ್ದುಪಡಿ ಬಜೆಟಿನಲ್ಲಿ ರೂ. ೮,೬೦೦ ಖರ್ಚಾದರೂ ೧೯೩೬—೩೭ಕ್ಕೆ ರೂ. ೭,೬೪೦ ಮಾತ್ರ ಇಟ್ಟು ಖರ್ಚು ಕಡಿಮೆ ಮಾಡಿದ್ದು ಯೋಗ್ಯವಿದೆ. ಹಾಗೆಯೇ ಸಾದಿಲವಾರಿನಲ್ಲಿಯೂ ಒಂದು ಸಾವಿರ ರೂಪಾಯಿ ಕಡಿಮೆ ಮಾಡಿದ್ದು ನ್ಯಾಯವಿದೆ. ತಿದ್ದುಪಡಿ ಬಜೇಟಿನಲ್ಲಿ ರೂ. ೫೫,೨೦೦ ವೆಚ್ಚವಾದಾಗ ೧೯೩೬—೩೭ಕ್ಕೆ ರೂ. ೫೨,೦೮೦ ಭಾತ್ರ ವಿಂಗಡಿಸಿದೆ. ಉಡುಪಿ ಶಪರಿನ ರಸ್ತೆಗಳ ಖರ್ಚು ಬೋರ್ಡಿನ ಮೇಲೆ ಬೀಳದ್ದರಿಂದ ಈ ಖರ್ಚು ಕಡಿಮೆಯಾಗಲು ಸಾಧ್ಯವಿದೆ ಎಂದು ವಿವರಣಾಪತ್ರದಿಂದ ಕಾಣುತ್ತದೆ. ಇಂಜಿನಿಯರ್ ಇಲಾಖೆಯ ಕಟ್ಟಡಗಳ ಚಿಲ್ಲರೆ ದುರಸ್ತಿ ಬಗ್ಗೆ ೧೯೩೫-೩೬ರಲ್ಲಿ ಇಟ್ಟ ರೂ. ೧,೬೦೦ನ್ನು ೧,೫೦೦, ಬೋರ್ಡಿನ ಕಟ್ಟಡಗಳ ಬಗ್ಗೆ ಇಂಜಿನಿಯರರು ಕೇಳಿದ ರೂ. ೧೨,೦೦೦ದಲ್ಲಿ ಬರೇ ರೂ. ೯,೦೦೦ವನ್ನು ಮಾತ್ರ ವಿಂಗಡಿಸಿಟ್ಟಿದೆ. ರಾತ್ರಿ ಬೆಳಕು ಹಚ್ಚುವ ಬಗ್ಗೆ ೧೯೩೫—೩೬ರಲ್ಲಿ ರೂ. ೩,೬೫೦ ಇಟ್ಟಿದ್ದರೂ ಬರೇ ರೂ. ೧,೪೪೦ ಮಾತ್ರ ವೆಚ್ಚವಾಗಿತ್ತು. ಈ ವರ್ಷಕ್ಕೆ ಬರೇ ೧೦೦೦ ರೂಪಾಯಿ ಇಟ್ಟಿದೆ.

ವೈದ್ಯಕೀಯ ಮತ್ತು ಆರೋಗ್ಯ ರಕ್ಷಣೆಯ ಖಾತೆ:—ಇದರಲ್ಲಿ ಸಬ್ ಎಸಿಸ್ಟಾಂಟ ಸರ್ಜನರ ಸಂಬಳ ೧೬,೦೫೦ ರೂಪಾಯಿ ೧೯೩೫—೩೬ರಲ್ಲಿ ವೆಚ್ಚವಾಗಿದ್ದರೂ ಕಡಬದ ಮೆಡಿಕಲ್ ಆಫೀಸರರಿಗೆ ಮಲೇರಿಯದ ಬತ್ತೆ, ಮತ್ತು ಬೈಂದೂರಿನವರಿಗೆ ಡ್ಯೂಟಿ ಎಲ್ಲೊವೆನ್ಸ್ ವಜಾಮಾಡಿ, ಬರೇ ರೂ. ೧೪,೬೭೦ನ್ನು ಪ್ರತ್ಯೇಕಿಸಿಟ್ಟಿದೆ. ಇತರ ರೋಗಗಳ ನಿವಾರಣೆ ಬಗ್ಗೆ ರೂ. ೩,೦೦೦ವನ್ನು ೧೯೩೫-೩೬ರಲ್ಲಿ ಇಟ್ಟು ೨,೫೦೦ನ್ನು ವೆಚ್ಚಮಾಡಿತ್ತು. ಈಗ ಬರೇ ರೂ. ೧,೦೦೦ ಮಾತ್ರ ಇಡಬೇಕಾಯಿತೆಂಬುದು ಶೋಚನೀಯ. ಮುಂದಕ್ಕಾದರೂ ಇಂತಹ ವಿಷಯಗಳಿಗೆ ಹೆಚ್ಚಿನ ಪ್ರಮಾಣದ ಸಹಾಯ ಸಿಗುವಂತೆ ಪ್ರಯತ್ನಿಸಬೇಕು. ಪಾಯಿಖಾನೆಗಳನ್ನು ಸ್ವಚ್ಛ ಮಾಡುವ ಸಿಬಂದಿ ಬಗ್ಗೆ ರೂ. ೬,೦೦೦ವನ್ನು ೧೯೩೫—೩೬ರಲ್ಲಿ ಇಟ್ಟರೂ ನಾಲ್ಕು ತಾಲೂಕುಗಳಲ್ಲಿ ಹೊಸ ಪಂಚಾಯಿತುಗಳಾದುದರಿಂದಲೂ ಉಡುಪಿಯಲ್ಲಿ ಮ್ಯುನಿಸಿಪಾಲಿಟಿ

(ಉನೇ ಪುಟಕ್ಕೆ ಮುಂದರಿಸಿಯುದೆ)

ಸದ್ಯದಲ್ಲಿಯೇ
ಪ್ರದರ್ಶಿಸಲು
ಸಿದ್ಧವಾಗುತ್ತಲಿದೆ.



ಶ್ರೀಯುತ ಸಿಂಹರವರ
ನಿರ್ದೇಶಕತ್ವದಲ್ಲಿ ತಯಾರಾಗುತ್ತಲಿರುವ
ಅಮೋಘ ಚಲನಚಿತ್ರ.

ಪಂಜರ ಪಕ್ಷಿ

ಮಿಸ್ ರಾಜಮ್ಮ
ಶ್ರೀಯುತ ಬಿ. ಆರ್. ಪಂತಲು
,, ಎಂ. ಮಾಧವರಾವ್
,, ಎಂ. ಎಸ್. ಮಾಧವರಾವ್

ಇವರುಗಳ ಅತ್ಯುತ್ತಮ ಅಭಿನಯ.

ಈ ಚಲನಚಿತ್ರದ ವಿಚಾರವಾಗಿ

- ಲಕ್ಷಾಂತರ ಪ್ರೇಕ್ಷಕರ ಮುಕ್ತಕಂಠದ ಪ್ರಶಂಸೆಗೆ ಪಾತ್ರವಾದ ಕಥಾವಸ್ತು.
- ತಮಿಳು, ಆಂಧ್ರ, ಕರ್ನಾಟಕ ಕಲಾಭಿಮಾನಿಗಳಿಗೆ ಪೆಚ್ಚಿಗೆಯಾದ ಅಭಿನಯ.
- ಚಲನಚಿತ್ರಕಲಾನಿಷ್ಣಾತರಾದವರಿಂದ ಅಪರಿಮಿತ ಹಣ ವ್ಯಯಮಾಡಿ ತಯಾರಿಸಿದ ಚಿತ್ರ.

ಎಂದ ಮೇಲೆ ಪ್ರತಿಯೊಬ್ಬ ಕನ್ನಡಿಗನೂ ನೋಡಲೇ ಬೇಕಾದ ಚಿತ್ರವೆಂದು ಬೇರೆ ಹೇಳಬೇಕಾಗಿಲ್ಲ.

FOR BOOKING APPLY TO

Devi Films, Ltd., 501, Mint St., P. T., Madras.

ESTD: 1906.

CANARA BANK
LIMITED.

HEAD OFFICE: MANGALORE.

Subscribed Capital	....	....	6,00,000.
Paid up Capital	....	....	3,33,000.
Reserves	....	....	4,50,000.
Deposits	....	....	61,92,000.
Working Capital	....	....	73,40,000.

OFFICES

Bombay-Fort, Bombay-Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala, Coondapoor, Ganguli, Bantval, Davangere & Moolky.

ALL KINDS OF BANKING BUSINESS UNDERTAKEN.

ಕಂಠೀರವ

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹರಿ.

(ಚೌಪದಿ)

ನಿಂದಿಸಲಿ ವಂದಿಸಲಿ, ನಂದ ಧೀರರು ತಾ- ।
ವಿಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

[M. N

XVIII] ಮಂಗಳೂರು, ತಾರೀಕು ೧೨—೬—೧೯೩೬ [೨೨
ರಲಭಿಲ ಧಾತು ಸಂವತ್ಸರದ ಜ್ಯೇಷ್ಠ ಬ। ೮ ಶುಕ್ರವಾರ.

ಮದ್ರಾಸು ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಣ.

'ಕಳೆದ ಹತ್ತು ವರ್ಷಗಳಲ್ಲಿ, ಮದ್ರಾಸು ಪ್ರಾಂತದ ಶಿಕ್ಷಣಪ್ರಚಾರಕ್ರಮವು, ತೀರಾ ಅಸಮಾಧಾನಕರವಾಗಿದ್ದು, ಶಿಕ್ಷಣದ ಪ್ರಗತಿಯು ಮುಂದೊತ್ತುವ ಬದಲಾಗಿ, ಕಾಲು ಹಿಂದೆಗೆದಂತಾಗಿದೆ' ಎಂದು ಆರಂಭಿಸಿ, ಪ್ರಾಂತದ ಎಯ್ಡೆಡ್ ಶಾಲೆಗಳ ವರ್ಧಕಸಂಘದ ಪ್ರೆಸಿಡೆಂಟ ಶ್ರೀ। ಯನ್. ಕೆ. ತಿರುಮಲಾಚಾರ್ಯರು, ಉದಕಮಂಡಲದಲ್ಲಿ ವಿ। ಆರ್. ಯ್ಹಮ್. ಸ್ಪೆಫೆನು (ಮದ್ರಾಸು ವಿದ್ಯಾಖಾತೆಯ ಡಿರೆಕ್ಟರರು) ಸಾಹೇಬರ ಬಳಿಗೆ ಒಂದು ದೊಡ್ಡ ಮನವಿಯನ್ನು ಅರ್ಪಿಸಿದ್ದಾರೆ. ಅದರಲ್ಲಿ ಹೀಗಿದೆ:-

'ಚೇರಿಪಿಯನ್ ರಿಪೋರ್ಟಿನ ಸಂದೇಶವೇನೆಂದು, ಯಾರೂ ಸ್ಪಷ್ಟವಾಗಿ ತಿಳಿದುಕೊಳ್ಳಲಿಲ್ಲ. ಮನಸ್ವಿಯಾಗಿ ಅದನ್ನು ಕುರಿತು ದುರಭಿಪ್ರಾಯಗಳನ್ನು ಮಾತ್ರ ಮಾಡಿಕೊಂಡಿದ್ದಾರೆ. ಅದರ ವಿಷಯವಾಗಿ, ವಾದವಿವಾದಗಳ ತರಂಗಗಳು ಎದ್ದು, ಅದರ ಸೂಚನೆಗಳು ಜಾರಿಗೆ ಬರಲೇ ಇಲ್ಲ; ಸರಕಾರವೂ ಪ್ರಜೆಗಳೂ ಅದನ್ನು ಸಂಪೂರ್ಣ ಮರೆತುಬಿಟ್ಟಿದ್ದಾರೆಂದರೂ ಅಡ್ಡಿ ಇಲ್ಲ,' ಎಂದ ಮೇಲೆ, ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಕೌನ್ಸಿಲುಗಳ ಟೀಕೆ ಹೀಗೆ ಮಾಡಿದ್ದಾರೆ:-'ಈ ಕೌನ್ಸಿಲುಗಳಿಗೆ ಒಪ್ಪಿಸಿದ ಹಲವು ಅಧಿಕಾರಗಳನ್ನು, ಅವರು ಕೈಕೊಂಡು ನಡೆಯಿಸಲೇ ಇಲ್ಲ. ಈಗಿನ ರೂಪದಲ್ಲಿ, ಅವು ಸರಕಾರದಿಂದ ಸಿಕ್ಕಿದ ಗ್ರೆಂಟನ್ನು ಹಂಚುವ ಬಟವಾಡೆ ಪೇದೆಗಳಾಗಿದ್ದಾವೆ. ಇನ್ಸ್‌ಪೆಕ್ಟಿಂಗ್ ಆಫಿಸರುಗಳ ವರದಿಗಳನ್ನು ಟೀಕಿಸುವ ಧೋರಣವನ್ನು ಅವು ಕೈಕೊಂಡಿವೆ. ಹಲವು ಕಡೆಗಳಲ್ಲಿ, ವಿರೋಧಿ ತಂಡಗಳ ತೌರಮನೆಯಾಗಿರುವುದಲ್ಲದೆ, ತನುಗೆ ಬೇಕಾದವರಿಗೆ 'ಜೌಕಿ ಊಟ' ಕೊಡುವ ಸಂಸ್ಥೆಗಳಾಗಿವೆ.'

'ಲೋಕಲ್ ಬೋರ್ಡ್ ಮತ್ತು ಮ್ಯುನಿಸಿಪಾಲಿಟಿಗಳಲ್ಲಿ ಇನ್ನೂ ಕಡ್ಡಾಯದ ಶಿಕ್ಷಣವು ಜಾರಿಗೆ ಬರಲಿಲ್ಲ. ನಿರಕ್ಷರಿಗಳ ಸಂಖ್ಯೆ ಭೀಕರ ರೀತಿಯಲ್ಲಿ ವ್ಯಾಪಿಸಿದೆ. ಪ್ರಾಥಮಿಕ ಶಾಲೆಗಳ ಸಂಖ್ಯೆ ಇನ್ನೂ ವಿಸ್ತರಿಸಿಲ್ಲ.'

'ಸರಕಾರವೂ, ಮಿನಿಸ್ಟರುಗಳೂ ವರ್ಷಂಪ್ರತಿ ಪ್ರಾಥಮಿಕ ಶಾಲೆಗಳಿಗೆ ಹೆಚ್ಚುಹೆಚ್ಚಿನ ಸಹಾಯ ಮಾಡುತ್ತೇವೆಂದು ವಾಗ್ದತ್ತ ಮಾಡಿದರೂ ಅದು ಫಲಿತಕ್ಕೆ ಬರಲಿಲ್ಲ. ಸರಕಾರದ ಕೈ ಬಿಗಿಯಾಗಿ ಹಲವು ಶಾಲೆಗಳು ಮುಚ್ಚಿಹೋಗಿವೆ.'

'ಬೋರ್ಡು ಮತ್ತು ಎಯ್ಡೆಡ್ ಶಾಲೆಗಳ ಹಂಚಿಕೆಯಲ್ಲಿ ವ್ಯವಸ್ಥೆ ಇಲ್ಲ; ಹಲವು ಸಲ, ಒಂದಕ್ಕೊಂದು ವಿರೋಧವಾಗಿ ವರ್ತಿಸುತ್ತಿವೆ. ಸಂಗ್ರಹವಾಗಿ ಹೇಳುವುದಾದರೆ, ಇಡೀ ಪ್ರಾಥಮಿಕ ಶಿಕ್ಷಣವಿಚಾರದಲ್ಲಿ ಒಂದು ಕ್ರಮ, ವ್ಯವಸ್ಥೆ, ಒಂದು ಧ್ಯೇಯ ಯಾವುದೂ ಕಾಣಬರುವುದಿಲ್ಲ. ಒಟ್ಟಿಗೆ, ತರಗೆಲೆ ಬಿರುಗಾಳಿಗೆ ಹಾರಿಹೋದ ಧೋರಣವು ಈ ಪ್ರಚಾರಕಾರ್ಯದಲ್ಲಿ ಕಂಡುಬರುತ್ತದೆ.'

'ಪ್ರಾಥಮಿಕಶಿಕ್ಷಣಪ್ರಚಾರವು, ರಾಷ್ಟ್ರದ ಕರ್ತವ್ಯಗಳಲ್ಲಿ ಮುಖ್ಯವಾದುದೊಂದು ವಿಷಯವೆಂಬುದೇ ಮರವೆಯಾಗುತ್ತ ಬಂದಿದೆ. ಶಾಲೆಗಳ ಆಡಳಿತೆ, ಮಾತ್ರವಲ್ಲ, ಸಂಬಳದ ದರಗಳು, ಸರ್ವಿಸಿನ ಅವಧಿ, ಪ್ರೊವಿಡೆಂಟ ಫಂಡು ಇತ್ಯಾದಿಗಳ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸುವುದು ಅಗತ್ಯವಿದೆ. ಸರಕಾರಿ, ಬೋರ್ಡು ಮತ್ತು ಖಾಸಗಿ ಶಾಲೆಗಳಲ್ಲಿ ಸಂಬಳಗಳಲ್ಲಿರುವ ತಾರತಮ್ಯವು ವಿಚಾರಾಸ್ಪದವಾಗಿದೆ.'

'ಟ್ರೈನಿಂಗ ಶಾಲೆಯಿಂದ ಬಿಡುಗಡೆಹೊಂದಿದೊಡನೆ, ಕೆಲಸ ಸಿಕ್ಕಿದರೆ, ತಮ್ಮ ಅಭೀಷ್ಟವೆಲ್ಲ ಪೂರೈಸಿತು, ಕಲಿಯಬೇಕಾದುದೆಲ್ಲ ಟ್ರೈನಿಂಗ ಶಾಲೆಯಲ್ಲಿಯೇ ಕಲಿತ ಹಾಗಿದೆ ಎಂಬ ಸಂಕುಚಿತ ಅಭಿಪ್ರಾಯವು ಉಪಾಧ್ಯಾಯರಲ್ಲಿದೆ. ಅವರಿಗೆ ಬೇಕಾದ ಸೌಕರ್ಯಗಳಿಲ್ಲದಿರುವುದು ಇದಕ್ಕೆ ಒಂದು ಕಾರಣವಿರಬಹುದು. ಅವರ ಅನುಭವದ ಮೊತ್ತ ಹೆಚ್ಚಾಗುವಂತೆ ಪ್ರದರ್ಶನಗಳು, ಉಪನ್ಯಾಸಗಳು, ವಾಚನಾಲಯಗಳು ಮುಂತಾದುವುಗಳನ್ನು ಒದಗಿಸಿದರೆ ಈ ಕುಂದಕವನ್ನು ಹೋಗಲಾಡಿಸಬಹುದು. ಈಗ ಶಾಲೆಗೆ ಬರುವ ಮಗುವು ಮುಂದೆ ಜನಾಂಗದ ಒಂದು ಅಂಗವಾಗಿದೆ; ಆದ್ದರಿಂದ ನಾಗರಿಕತೆಯ ಪರಿಚಯ ಮತ್ತು ಆತನ ಬೌದ್ಧಿಚಟುವಟಿಕೆಗಳ ಪರಿಷ್ಕರಣ ಮಾಡುವುದೆಂದರೆ, ದೊಡ್ಡ ಜವಾಬ್ದಾರಿಯೆಂಬದನ್ನು ಮರೆಯದೆ, ಎಷ್ಟು ಸಾಧನೆ ಮಾಡಿತೋ ಅಷ್ಟು ಫಲೋನ್ನತಿಯಾಗಬಹುದು.'

'ಮಕ್ಕಳ ಸ್ಥಿತಿಯ ಕುರಿತು ಪರ್ಯಾಲೋಚಿಸುವಾಗ, ಹಣದ ವೆಚ್ಚಕ್ಕೆ ಸಮಾನವಾದ ಫಲಿತಾಂಶವು ಸಿಗುವುದಿಲ್ಲ. ಮದ್ರಾಸು ಶಹರಿನ ದೊಂದೇ ದೃಷ್ಟಾಂತವನ್ನು ಎತ್ತಿಕೊಂಡರೆ, ಮದ್ರಾಸು ಮ್ಯುನಿಸಿಪಾಲಿಟಿಯವರ ಶಾಲೆಗಳಲ್ಲಿ ಆರೋಗ್ಯಪರೀಕ್ಷೆ, ಆಟದ ಬಯಲು, ವಿಜ್ಞಾನಶಾಸ್ತ್ರಶಿಕ್ಷಣಕ್ಕೆ ಬೇಕಾದ ಸಾಹಿತ್ಯಗಳು ಮುಂತಾದ ಸೌಕರ್ಯವೆಲ್ಲವೂ ಹೆಚ್ಚುತ್ತಿದೆ. ಖಾಸಗಿ ಶಾಲೆಗಳಿಗೆ ಇಂತಹ ಸೌಕರ್ಯಗಳು ಇಲ್ಲ. ೫೫,೦೦೦ ಮಕ್ಕಳಿಗೋಸ್ಕರ ೯ ಲಕ್ಷ ರೂಪಾಯಿ ವೆಚ್ಚವಾಡುತ್ತಿದೆ. ಆದರೆ, ಸಾಧಾರಣ ಅಷ್ಟೇ ಮಕ್ಕಳಿಗೆ ಬರೇ ೧॥ ಲಕ್ಷ ರೂಪಾಯಿ ಗ್ರೆಂಟ್ ಆಗಿ ಸಲ್ಲುತ್ತದೆ. ಶಾಲಾಫೀಸಿನಿಂದ ಸಿಗುವ ಆದಾಯ ಬರೇ ಹೆಸರಿಗೆ ಮಾತ್ರವಾಗಿದೆ. ಹಾಗಿದ್ದರೆ, ಕಂದಾಯತೆರಿಗೆಗಳನ್ನು ತೆರುವ ಕೆಲವರ ಮಕ್ಕಳಿಗಿದ್ದ ಸೌಕರ್ಯವು ಇತರರಿಗೆ ಇಲ್ಲದಿರುವುದು ಶೋಚನೀಯ! ಎಡ್ಯುಕೇಶನ್ ಸೆಸ್ಸಿನ ಒಂದು ಅಂಶವನ್ನು, ಈ ಎಯ್ಡೆಡ್ ಶಾಲೆಗಳಿಗೆ ಸಹಾಯಮಾಡುವುದಕ್ಕೆ ವಿನಿಯೋಗಿಸುವುದು ನ್ಯಾಯವಾದೀತು.'

'ಇದಲ್ಲದೆ ಎಯ್ಡೆಡ್ ಮ್ಯುನ್ಸಿಪಲ್, ಬೋರ್ಡು ಇತ್ಯಾದಿ ಶಾಲೆಗಳೊಳಗೆ ಪರಸ್ಪರ ಪಟಾಪಟಿ ಇದ್ದು, ಖರ್ಚಾಗುವ ಹಣಕ್ಕೆ ತಕ್ಕ ಪ್ರತಿಫಲವು ಸಿಗುವುದಿಲ್ಲ!'

ಹೀಗಿರುವುದರಿಂದ, ಪ್ರಾಥಮಿಕ ಶಿಕ್ಷಣದ ಪ್ರಶ್ನೆಯು ಸಹಜವಾಗಿದ್ದರೂ, ತಜ್ಞರ ಮತ್ತು ಶಿಕ್ಷಣವಿಚಾರದಲ್ಲಿ ಓಲಾಡಿದವರ ಒಂದು ಸಮ್ಮೇಲನವನ್ನು ಜರಗಿಸಿ, ಎಲ್ಲಾ ಪ್ರಶ್ನೆಗಳನ್ನು ಜೆನ್ನಾಗಿ ಮಥಿಸಿ 'ಗ್ರೇಂಟ್-ಇನ್-ಎಯ್ಡ್ ಕೋಡಿ'ನಲ್ಲಿಯೂ ಅಗತ್ಯವಿರುವ ಬದಲಾವಣೆಗಳನ್ನು ಮಾಡಿ, ಗ್ರೇಂಟಿನ ದರಗಳನ್ನು ಹೆಚ್ಚಿಸಬೇಕೆಂದೂ ಈ ಸಂಘದ ಸೂಚನೆ.

ಈ ವಿಷಯದ ಟೀಕೆಯನ್ನು ಮುಂದಿನ ಸಂಚಿಕೆಗಳಲ್ಲಿ ಎತ್ತಿಕೊಳ್ಳಲಿರುವೆವು. ಈಗ ಸರಕಾರದವರು, ಡಿರೆಕ್ಟರರೂ ಕೂಡಾ, ಹೊಸ ಹಂಚಿಕೆಯನ್ನು ಮಾಡಿ, ಬೇಗನೆ ಒಂದು ಹುಕುಮನ್ನು ಹೊರಡಿಸಲಿರುವರೆಂದು ತಿಳಿದುಬರುತ್ತದೆ. ಅದನ್ನು ಎದುರು ನೋಡುತ್ತಾ ಇದ್ದೇವೆ!

ಬೆಂಗಳೂರಲ್ಲಿ ಚಿತ್ರಾಪುರ ಶ್ರೀ ಶ್ರೀಗಳವರು.

ಚಿತ್ರಾಪುರ ಸಾರಸ್ವತ ಬ್ರಾಹ್ಮಣ ಸಮಾಜದ ಪೂಜ್ಯಗುರುಗಳಾದ ಶ್ರೀಮದಾನಂದಾಶ್ರಮ ಸ್ವಾಮಿಜಿಯವರು ಬೆಂಗಳೂರಿನ ಶಿಷ್ಯಮಂಡಳಿಯವರ ಪ್ರಾರ್ಥನೆಯನ್ನು ಮನ್ನಿಸಿ, ಮಿತಪರಿವಾರದೊಡನೆ, ಹೊಸೂರು ಮಾರ್ಗವಾಗಿ, ಕಳೆದ ಜೂನ್ ತಾ. ೮ನೇ ಸೋಮವಾರ ಸಾಯಂಕಾಲ ೭ ಘಂಟೆಗೆ ಬೆಂಗಳೂರು ವಲ್ಲೇಶ್ವರಕ್ಕೆ ದಯೆಮಾಡಿಸಿದರು. ಹವಾಮಾನದ ಸಂಶಯಸ್ಥಿತಿಯನ್ನು ಅನುಲಕ್ಷಿಸಿ, ಬೀದಿಗಳಿಂದ ಮೆರವಣಿಗೆಯಾಗಿ ಕರೆತರಲು ಸಾಧ್ಯವೆಂದು ತೋರದ ಪ್ರಯುಕ್ತ, ಮೈಸೂರು ಹೈಕೋರ್ಟು ಆ। ಚೀಫ್ ಜಸ್ಟಿಸ್ ಶ್ರೀಮಾನ್ ಶಂಕರನಾರಾಯಣರಾಯರೇ ಆದಿಯಾಗಿ ಶಿಷ್ಯವರ್ಗಕ್ಕೆ ಸೇರಿದ ಹಿರಿಯರೂ, ಕಿರಿಯರೂ, ಸ್ತ್ರೀಯರೂ ಸುಮಾರು ೫೦೦ ಮಂದಿಗಿಂತ ಹೆಚ್ಚಾಗಿ ಕೆನರಾ ಯೂನಿಯನಿನ ಹೆಬ್ಬಾಗಿಲಲ್ಲಿ ಶ್ರೀಯವರನ್ನು ಗೌರವಾದರಗಳೊಡನೆ ಬರಮಾಡಿಕೊಂಡು ದಿವ್ಯವಾಗಿ ಅಲಂಕರಿಸಲ್ಪಟ್ಟ ಹಂದರಕ್ಕೆ ಕರೆದೊಯ್ದರು. ಬಳಿಕ ಶಿಷ್ಯಮಂಡಲಿಯವರ ಪ್ರತಿ ಮನೆಯ ಹಿರಿಯರನ್ನು ಇದಿರಲ್ಲಿ ನಿಲ್ಲಿಸಿ, ಹೆಸರು ಹೇಳಿ, ಶ್ರೀಯವರಿಗೆ ಪರಿಚಯ ತಿಳಿಸಲಾಯಿತು. ಆ ತರುವಾಯ ಮಹಾಜನರ ಪರವಾಗಿ ನಿವೃತ್ತ ಡಿ. ಜಜ್ಜ್ ಶ್ರೀ. ಕಬಾಡ ಅಪ್ಪಾಜಿರಾಯರವರು ಶ್ರೀಯವರ ಪಾದಪೂಜೆಯನ್ನು ನಡೆಸಿದರು. ಮುಂದೆ, ಪ್ರಮುಖ ವರ್ತಕರಾದ ಶ್ರೀ। ದೇವರಾವ್ ಶಿವರಾಮು ಉಭಯಕರ್ ಅವರು, ಶಿಷ್ಯವರ್ಗದವರ ಕಡೆಯಿಂದ ಶ್ರೀಯವರಿಗೆ ಕನ್ನಡದಲ್ಲಿ ಒಂದು ಮಾನಪತ್ರವನ್ನು ಸಮರ್ಪಿಸಿದರು. ಅದರಲ್ಲಿ ಶ್ರೀಯವರ ಅಗಾಧವಾದ ಪಾಂಡಿತ್ಯ, ಉದಾರವಾದ ಅಭಿಪ್ರಾಯಗಳು, ಶಿಷ್ಯಕೋಟಿಯ ಮೇಲಿರುವ ನಿಸ್ಸೀಮವಾದ ವಾತ್ಸಲ್ಯ, ತನ್ನ ಆಶ್ರಮಕ್ಕೆ ಅನುರೂಪವಾದ ನಡತೆ ಮುಂತಾದ ಅನೇಕ ವಿಷಯಗಳು ಲಿಖಿತವಾಗಿದ್ದುವು. ಶ್ರೀ ಸ್ವಾಮಿಯವರು ತದನಂತರದಲ್ಲಿ ಅಸ್ಖಲಿತವಾದ ವಾಣಿಯಿಂದ ಅವೇಘವಾದ ಭಾಷಣವನ್ನು ಮಾಡಿ, ಶಿಷ್ಯವರ್ಗದವರ ಹಾರ್ದಿಕವಾದ ಭಕ್ತಿಯನ್ನು ಹೊಗಳಿ, ಅವರಿಗೆ ಸರ್ವವಿಧವಾದ ಕ್ಷೇಮಾಭ್ಯುದಯಗಳಾಗಲೆಂದು ಆಶೀರ್ವದಿಸಿದರು.

ನಿನ್ನೆ (ತಾ. ೯) ಸಂಜೆ ಘಂಟೆ ೭ರ ಹೊತ್ತಿಗೆ, ಅದೇ ಸ್ಥಳದಲ್ಲಿ ಪುನಃ ಶಿಷ್ಯಮಂಡಲಿಯವರ ದೊಡ್ಡ ಸಭೆ ಸೇರಿದ್ದಿತು. ಪೂಜ್ಯಪಾದರು 'ಧರ್ಮ'ವೆಂದರೇನು? ಎಂಬ ಕುರಿತು ಬಹು ಸುಸವಾಗಿ ಸುಮಾರು ೪೫ ನಿಮಿಷಗಳ ಕಾಲ, ಸಮಸ್ತರಿಗೂ ಮಂದಟ್ಟಾಗುವಂತೆ ಮಾತನಾಡಿ ಸಂತೋಷಪಡಿಸಿದರು.

ಶ್ರೀ ಸ್ವಾಮಿಯವರ ಈ ವಿಜಯವು ಶಿಷ್ಯಮಂಡಳಿಗೆ ದೊಡ್ಡದೊಂದು ಹಬ್ಬವಾಗಿ ಪರಿಣಮಿಸಿದೆ. ಬರುವ ೧೫ನೇ ತಾರೀಕು ಸೋಮವಾರದ ಪರ್ಯಂತ ಶ್ರೀಯವರು ಈ ಕಲ್ಯಾಣನಗರಿಯಲ್ಲಿ ವೊಕ್ಕಾಂ ಮಾಡಬೇಕಾಗಿ ಗೊತ್ತಾಗಿದೆ.

ಮಂಗಳೂರು

ದಿವಾನ್ ಬಹದೂರ್ ಬಿ. ಮಹಾಬಲ ಹೆಗ್ಗಡೆಯವರು, ನಮ್ಮ ಮುಂದಿನ ಮದ್ರಾಸ್ ನ್ಯಾಯವಿಧಾಯಕ ಎಸೆಂಬ್ಲಿಯ ಸ್ಥಾನಗಳಲ್ಲಿ, ಕುಂಡಾಪುರ ಸರ್ಕಲಿನ ಒಂದು ಸ್ಥಾನಕ್ಕೆ ಉಮೇದುವಾರರಾಗಿರುವರೆಂದು ತಿಳಿದುಬರುತ್ತದೆ. ಶ್ರೀಯುತರು ಮಾಜಿ ಎಂ. ಎಲ್. ಸಿ.ಗಳು. ಇವರಾಗಲೇ ತಮ್ಮ ಕ್ಷೇತ್ರದಲ್ಲಿ ಚುನಾವಣೆಯ ಕೆಲಸಕಾರ್ಯಗಳನ್ನು ಆರಂಭಿಸಿದ್ದಾರೆ.

ಶ್ರೀ. ಜೆರೋಮ್ ಏ. ಸಾಲ್ಡಾನಾ, ಮಾಜಿ ಎಂ. ಎಲ್. ಸಿ., ಇವರು ಮದ್ರಾಸ್ ನ್ಯಾಯವಿಧಾಯಕ ಕೌನ್ಸಿಲಿ (ಅಪ್ಪರ್ ಹೌಸಿ)ನಲ್ಲಿ ಹಿಂದೀ ಕ್ರೈಸ್ತರಿಗಿರುವ ೩ ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ ಕಾಂಗ್ರೆಸಿನ ಪರವಾಗಿ ಉಮೇದುವಾರರಾಗಿರುವರೆಂದು ತಿಳಿದು ಬರುತ್ತಿದೆ.

ಕಳೆದ ತಾ. ೯ರಲ್ಲಿ ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ಉಪಾಧ್ಯಾಯರ ಸಂಘದ ಒಂದು ವಿಶೇಷ ಮೀಟಿಂಗ್ ಜರುಗಿ, ಡಿ॥ ಬೋರ್ಡ್ ಉದ್ಯೋಗಿಗಳಿಗೆ ಈಗ ಉಂಟಾಗಿರುವ ೫ ರೂಪಾಯಿಗೆ ಒಂದಾಣೆ ಕಡಿತದ ಕುರಿತಾದ ತರಾವಿನ ವಿಷಯದಲ್ಲಿ ಆಲೋಚಿಸಲು, ಡಿ॥ ಬೋರ್ಡಿನ ಸೆಕೆಂಡರಿ ಮತ್ತೂ ಮಿಡ್ಲ್ ಸ್ಕೂಲುಗಳ ಬೇರೆ ಬೇರೆ ಉಪಾಧ್ಯಾಯರ ಸಂಘಗಳ ಪ್ರತಿನಿಧಿಗಳದೊಂದು ವಿಶೇಷ ಮೀಟಿಂಗು ಇದೇ ತಾ. ೨೧ನೇ ಆದಿತ್ಯವಾರ ಡಿ॥ ಬೋ॥ ಆಫೀಸಿನ ವಠಾರದಲ್ಲಿ ಜರುಗಿಸುವಂತೆ ನಿರ್ಮಾನವಾಗಿದೆ.

ನಮ್ಮ ಮುಂದಿನ ಮ್ಯುನಿಸಿಪಲ್ ಕೌನ್ಸಿಲಿನ ಮೀಟಿಂಗು ಇದೇ ತಾ. ೧೫ನೇ ಶುಕ್ರವಾರ ಗಂಟೆ ೫-೩೦ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರುಗುವುದು.

ಬರುವ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಲೆಜಿಸ್ಲೇಟಿವ್ ಕೌನ್ಸಿಲಿಗೆ ಆಥವಾ, ಲೆಜಿಸ್ಲೇಟಿವ್ ಎಸೆಂಬ್ಲಿಯ ಜಿಲ್ಲೆಯ ಯಾವುದೊಂದು ರಿಸರ್ವ್ ಡಿವಿಜನ್ನಿನ ಸೀಟಿಗೆ ಶ್ರೀ. ಎ. ಬಿ. ಶೆಟ್ಟಿ ಕಾಂಗ್ರೆಸಿನ ಪರವಾಗಿ ಉಮೇದ್ವಾರರೆಂದು ತಿಳಿದು ಬರುತ್ತದೆ.

ಉಡುಪಿ ತಹಶೀಲ್ದಾರರಾದ ವಿ॥ ಕೆ. ಕೃಷ್ಣಯ್ಯ, ಬಿ. ಎ.ರವರು ರಜೆಯನ್ನು ಪಡಕೊಂಡಿರುವದರಿಂದ ಆತರ ಸ್ಥಾನಕ್ಕೆ ಪುತ್ತೂರಿನಿಂದ ವಿ. ಜೆ. ಎಲ್. ಡಿ. ಸೋಜಾ, ಬಿ. ಎ.ರವರು ವರ್ಗಾಯಿಸಲ್ಪಟ್ಟಿರುವರು.

ನಮ್ಮ ಜಿಲ್ಲೆಯ ಲೋನ್ಸ್ ಆಫೀಸರರಾಗಿ ನೇಮಕಹೊಂದಿರುವ ವಿ. ಬಿ. ಆನಂದ ಭಾಳಿಗ, ಬಿ. ಎ., ಬಿ. ಎಲ್.ರವರು ತಮ್ಮ ಚಾರ್ಜನ್ನು ವಹಿಸಿಕೊಂಡಿರುವರು.

NOTICE.

Sealed tenders are invited for 'Reconstructing the bridge at Nidgul in the 43rd mile of Mangalore-Mysore Trunk Road No. A.22'. Tender documents, plans etc., can be seen in the office of the District Board Engineer during office hours on working days or can be had on payment of Rs. 15/—. Last day for the receipt of the tenders is 15th August 1936.

P. S. Barboza,
Dt. Board Engineer, S. Ka

Supplement to—"KANTEERAVA" of 12—6—1936.

ಯು. ಆರ್. ಶೆಣೈ ಎಂಡ್ ಸನ್ಸ್, ರಥಬೀದಿ, ಮಂಗಳೂರು.

ಹೂಗನ್ನಡ ಪಾಠಮಾಲೆ

೧ರಿಂದ ೫ನೇ ಪುಸ್ತಕದ ತನಕ

(ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾತಿ ದೊರಕಿದೆ.)

Vide Ft. St George Gazette Part I—B. 26—5—1936.

ಒಂದನೇ ಕ್ಲಾಸಿನಿಂದ ಐದನೇ ಕ್ಲಾಸಿನ ತನಕ

ಒಂದೇ ಸ್ಕೀಮಿಗೆ ಸರಿಯಾಗಿ ತಯಾರಾದ ಪುಸ್ತಕಗಳು.

(ಶಾಲೆಗಳಲ್ಲಿ ಒಂದೇ ಸ್ಕೀಮಿನ ರೀಡರುಗಳನ್ನು ಇರಿಸುವ ಅಗತ್ಯವನ್ನು ಕುರಿತು ಡ್ಯಾರೆಕ್ಟರರವರ ಹುಕುಮು ಇರುತ್ತದೆ.)

ಮಕ್ಕಳಿಗೆ ಪಾಠವು ಆಟವಾಗಿ ಕಾಣಿಸುವಂತೆ, ಭಾಷೆಯ ಮೇಲೆ ಪ್ರೇಮ ಹುಟ್ಟುವಂತೆ, ಕ್ಲಾಸಿಗೆ, ವಯಸ್ಸಿಗೆ, ಮಕ್ಕಳ ಮನೋಧರ್ಮಕ್ಕೆ ಸರಿಯಾಗಿ ರೂಪಿಸಲ್ಪಟ್ಟ ಪುಸ್ತಕಮಾಲೆಯಿದು.

ಸಣ್ಣ ಮಕ್ಕಳಿಗೆ ಕರ್ನಾಟಕದ ಪ್ರಸಿದ್ಧ ಕವಿಗಳ ಶಿಶುಗೀತೆಗಳಿವೆ

ದೊಡ್ಡವರಿಗೆ ಆಧುನಿಕ, ಪ್ರಾಚೀನ, ಕನ್ನಡ ಗದ್ಯ, ಪದ್ಯ, ವಿಮರ್ಶೆಗಳ ರೀತಿಯನ್ನು ತಿಳಿಸುತ್ತದೆ.

ವಿಷಯಗಳ ವಿಸ್ತಾರವು ಬಹಳವಾಗಿದೆ. ಮಕ್ಕಳಶಿಕ್ಷಣ, ಮನೋರಂಜನೆಗಳು ಸಂಪೂರ್ಣವಾಗಿದೆ.

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಹೆಸರಾದವರಿಂದ ಬರೆಯಿಸಿದ **ಪಾಠಮಾಲೆ ಇದು.**

ಬೆಲೆಯಂತೂ ತೀರಾ ಅಗ್ಗವಾಗಿದೆ.

ಪಿ. ರಾಮಕೃಷ್ಣ ರಾವ್ ಬಿ. ಎ. ಎಲ್. ಟಿ.

ಮತ್ತು

ಶಿ. ಹಮ್ಮಬ್ಬ

ಇವರಿಂದ ರಚಿತವಾದ

ಮೂರನೆಯ ಗಣಿತ ಪುಸ್ತಕ

(ಮಂಜೂರಾತಿ 26—5—'36)

ನಾಲ್ಕನೆಯ ಗಣಿತ ಪುಸ್ತಕ

(ಮಂಜೂರಾತಿ 26—5—'36)

ಐದನೆಯ ಗಣಿತ ಪುಸ್ತಕ

ಇದೇ ವರ್ಷದಲ್ಲಿ ಮಂಜೂರಾತಿ ಪಡೆದ

ಸಾಮಾನ್ಯ ವಿಜ್ಞಾನ—೧ನೇ ಭಾಗ

1ನೇ ಫಾರ್ಮಿಗೆ

ಸಿಲೆಬಸಿನಂತೆ ಕಲಿಸಲು ಅತಿ ಅವಶ್ಯವಾದ ಪುಸ್ತಕ.

ಈಗಾಗಲೇ ಸಾಮಾನ್ಯ ವಿಜ್ಞಾನದ ೨-೩ನೇ ಭಾಗಗಳು ಪ್ರಕಟವಾಗುತ್ತಿವೆ.

ಬೇರೆ ಪುಸ್ತಕಗಳನ್ನು ಕೊಳ್ಳುವ ಮೊದಲು

ಇವನ್ನು ಚೆನ್ನಾಗಿ ಪರಿಶೀಲಿಸಿರಿ.

U. R. SHENOY & SONS, CAR STREET, MANGALORE.

ಮಂಗಳೂರು ಪ್ರೆಸ್, ರಥಬೀದಿ ಮಂಗಳೂರು.

ಹಿಂದೂದೇಶ

ಒಬ್ಬ ಬಂಗಾಳಿ ವಿದ್ಯಾರ್ಥಿನಿ; ಅನಾರೋಗ್ಯದ ದೆಸೆಯಿಂದ ಐ. ಏ. ಪರೀಕ್ಷೆಗೆ ಕುಳ್ಳಿರಲಾಗಲಿಲ್ಲ. ಆದರೆ ಅವಳ ಸಂಗಾತಿಗಳಾದ ವಿದ್ಯಾರ್ಥಿನಿಯರಲ್ಲಿ ಹಲವರು ಆ ಪರೀಕ್ಷೆಯಲ್ಲಿ ಕೃತಾರ್ಥರಾದರೆಂದು ಕೇಳಿದ ಕೂಡಲೇ ಆಕೆ ಅಫೀಮನ್ನು ನುಂಗಿ ಈಗ ಮೃತಳಾಗಿದ್ದಾಳೆಂದು ಕಲ್ಕತ್ತೆಯ ವಾರ್ತೆ.

ಸರ್ ಸಪ್ರೂರವರ ನಿರುದ್ಯೋಗ ಸಂಬಂಧದ ವರದಿಯ ಕೆಲವು ಅಂಶಗಳನ್ನು, ಸಮಗ್ರ ಭಾರತದಲ್ಲಿಯೂ ಆಚರಣೆಗೆ ತರಲು ಸಾಧ್ಯವೇ ಎಂದು, ಮುಂದೆ ಡಿಲ್ಲಿಯಲ್ಲಿ ಕೌನ್ಸಿಲ್ ಆಫ್ ಸ್ಟೇಟಿನವರು ಪರ್ಯಾಲೋಚಿಸುವರಾಗಿ ತಿಳಿದುಬರುತ್ತಿದೆ.

ಸಿಂಧ್ ಪ್ರಾಂತದ ಥಾರೂದ ಜಿಲ್ಲೆಯ ಒಂದು ಹಳ್ಳಿಯಲ್ಲಿ, ೫ ಮಂದಿ ಮುಸ್ಲಿಂ ಹುಡುಗಿಯರು ಸ್ನಾನಕ್ಕೆಂದು ಒಂದು ಜಲಾಶಯಕ್ಕೆ ಹೋಗಿದ್ದು, ಒಬ್ಬಾಕೆ ಮುಳುಗಿಹೋಗಲು, ಅವಳನ್ನು ರಕ್ಷಿಸಹೋಗಿ ೫ ಮಂದಿಯೂ ಮೃತರಾದರು.

ಜಾಬೂ ಸಂಸ್ಥಾನದ ಪ್ರಜಾಪರಿಷತ್ತಿನ ನೆಕ್ಕೆಟರಿಗಳಾದ ಶ್ರೀ. ಭೂಪೇಂದ್ರನಾಥ ತ್ರಿವೇದಿಯವರನ್ನು ಕೈದುಮಾಡಲಾಗಿದೆ.

ರಾವಲ್ಪಿಂಡಿಯಲ್ಲಿ ಬಿರುಗಾಳಿಯಿಂದ ಮರಗಳುರುಳಿ, ರಸ್ತೆಗಳ ವಹಿವಾಟು ನಿಂತು, ತಗಡುಗಳು ಹಾರಿಹೋಗಿವೆ.

ಆಲ್ಲಪ್ಪಿಯಲ್ಲಿ ಹೊಸದಾಗಿ ಸಿಖ್ ಮತಕ್ಕೆ ಸೇರಿದ ೩ ಯರಲ್ಲಿ ಇಬ್ಬರ ಕೃಪಾಣಗಳನ್ನು ರಿಜರ್ವ್ ಪೋಲೀಸರು ವಶಪಡಿಸಿಕೊಂಡುದರ ಕುರಿತು ಜಿಲ್ಲಾ ಮ್ಯಾಜಿಸ್ಟ್ರೇಟರು ವಿಚಾರ ನಡೆಸಿ ಕೃಪಾಣಗಳನ್ನು ಹಿಂದೆ ಕೊಡಿಸಿದರು. ಪೋಲೀಸ್ ಅಸಿ॥ ಸುಪರಿಂಟೆಂಡೆಂಟರು ಈ ಘಟನೆಯು ಕುರಿತು ವಿಷಾದವನ್ನು ಸೂಚಿಸಿದರು.

ವೃತ್ತಿಸಂಬಂಧವಾದ ನಡತೆಯ ಕುರಿತು ಕಲ್ಕತ್ತೆಯ ಹೈ ಕೋರ್ಟು ಎಟೋರ್ನಿಗಳಾದ ಶ್ರೀ. ಸುರೇಶಚಂದ್ರ ಭೋಸರವರು, ೭ ವರ್ಷಗಳ ವರೆಗೆ 'ಪ್ರಾಕ್ಟೀಸ್' ನಡೆಸಕೂಡದಾಗಿ ಹೈಕೋರ್ಟಿನ ಅಪ್ಪಣೆಯಾಗಿದೆ.

ಇಕ್ಬಲ್ ಸಿಂಗ್ ಮತ್ತೂ ಸೋಮನಾಥ ಲಹರಿ ಎಂಬಿಬ್ಬರು ಕಮ್ಯೂನಿಸ್ಟರಿಗೆ ತಲಾ ೨ ವರ್ಷಗಳ ಕಠಿಣ ದಂಡನೆಯಾಗಿದೆಯಲ್ಲದೆ ಅವರ ೫ ಸಾವಿರ ರೂಪಾಯಿಗಳೂ ರುಜಪ್ತಾಗಿ ಹೋಗಿವೆ.

ನಮ್ಮ ಮದ್ರಾಸ್ ಕೌನ್ಸಿಲಿನ ಮುಂದಿನ ಅಧಿವೇಶನವು ಬರುವ ಅಗೋಸ್ತು ತಾ. ೩೭ರಲ್ಲಿ ಆರಂಭವಾಗುವುದು. ತಾ. ೨೦ಕ್ಕೆ ರಾಜಾ ಬೊಬ್ಬಿಲಿಯವರೂ ಬೊಂಬಾಯಿಗೆ ಬಂದು, ಅವರು ಪುನಃ ಮಂತ್ರಿಗಳಾಗುವರೆಂದು ತಿಳಿದುಬರುತ್ತಿದೆ.

ಕಲ್ಕತ್ತೆಯ ಪ್ರಾಂತದಲ್ಲಿ ಏಕಕಾಲದಲ್ಲಿ ೬ ಇಂಚು ಮಳೆ ಬಿದ್ದು, ಎಲ್ಲವೂ ಜಲಮಯವಾಗಿ, ಜನಗಳು ಬಹಳ ಸಂಕಟಕ್ಕೀಡಾದರು.

ಪಾಟ್ನಾದಲ್ಲಿ ಗಯೆಯಲ್ಲಿ ಪುನಃ ಭೂಕಂಪವಾಗಿದೆ.

ಮುಂಚಿತವಾಗಿ ಅಂದಾಜನ್ನು ತಯಾರಿಸದೆ, ಲಾಹೋರಿನ ಕೆಲವು ಮುಸಲ್ಮಾನ್ ಬೀದಿಗಳ ದುರಸ್ತಿ ಸಂಬಂಧ ೨೦೦ ರೂಪಾಯಿಗಳನ್ನು ಮಂಜೂರುಮಾಡಿದುದನ್ನು ಪ್ರತಿಭಟಿಸಿ, ಆ ಮುನಿಸಿಪಲ್ ಕಮಿಟಿಯ ಇಬ್ಬರು ಹಿಂದೂ ಮೆಂಬರರು ಸಭೆಯಿಂದ ಹೊರ ತೆರಳಿದರು.

ವೆಲ್ಲೂರು ಡಿ॥ ಬೋರ್ಡಿನ ವಿದ್ಯಾಂಗದ ಕೌನ್ಸಿಲಿನ ೪ ಸ್ಥಾನಗಳಿಗೆ ೬ ಮೆಂಬರನ್ನಾರಿಸಿದ ಸಂಬಂಧ ಹೊಸ ಪರಿಸ್ಥಿತಿಯೊಂದು ಉಂಟಾಗಿದೆ.

ಗಡಿನಾಡಿನಲ್ಲಿ ಅನೂನ್ ಮತ್ತೂ ಹಾಜಿ ಮೈಂಜನ್ ಕೊಡೆಕಲ್ ಎಂಬ ಇಬ್ಬರು ನಾಯಕರಲ್ಲಿ ಮನಸ್ತಾಪವೆದ್ದು ಅವರಿಬ್ಬರ ದಳಗಳೊಳಗೆ ಕಾದಾಟವಾಗುತ್ತಿದೆ.

ಒರಿಸಾ ಪ್ರಾಂತದ ಖುರ್ದದ ಸಬ್ ರಿಜಿಸ್ಟ್ರಾರ್ ಶ್ರೀ. ಜಗನ್ನಾಥ ಪ್ರಸಾದ ಸೇನ್ ಎಂಬವರು ಮನೆಯಲ್ಲಿದ್ದಾಗ ಸಿಡಿಲು ಬಡಿದು ಅವರು ಮೃತರಾದರು. ಮನೆಯಲ್ಲಿದ್ದವರು ಸ್ಮೃತಿ ತಪ್ಪಿ ಮತ್ತೆ ಎಚ್ಚರಗೊಂಡರು. ಬಂಗಲೆಗೆ ಸಪ್ಪೆ ಸಂಭವಿಸಿದೆ. ಮೃತರ ವಯಸ್ಸು ೪೫.

ಉದಕಮಂಡಲದಲ್ಲಿರುವ ನಮ್ಮ ಪ್ರಾಂತೀಯ ಸೆಕ್ರೆಟೇರಿಯೆಟಿನ ಆಫೀಸುಗಳು ಇದೇ ಜುಲ್ಯಾ ೩೦ಗಳ ೧೭ರಲ್ಲಿ ಅಲ್ಲಿಂದ ಹೊರಟು ಅದೇ ೩೦ಗಳ ತಾ. ೩೩ರಲ್ಲಿ ಮದ್ರಾಸಿನಲ್ಲಿ ತೆರೆಯಲಾಗುವುದು.

ವಿಜಾಪುರದ ಸೈಶ್ಯಲ್ ಮ್ಯಾಜಿಸ್ಟ್ರೇಟರು ೭ ಮತ್ತೂ ೬ ವರ್ಷಗಳ ಕಠಿನ ಸಜೆ ವಿಧಿಸಿದ್ದರು ಇಬ್ಬರು ಬಂಗಾಳಿ ಯುವಕರಿಗೆ;—ಭಯೋತ್ಪಾದಕರ ಚಳುವಳಿಯ ಕಾರಣಾನಿನಂತೆ. ಹೈಕೋರ್ಟಿನವರು ಇವರಿಬ್ಬರನ್ನೂ ಬಿಡುಗಡೆ ಮಾಡಿದ್ದಾರೆ.

ವಿದೇಶ

ರುಮೇನಿಯದ ಬುಕಾರೆಸ್ಟಿನಲ್ಲಿ, ಅರಸರಾಧ ಕೆರೋಲರವರ ಸಿಂಹಾಸನಾರೋಹಣದ ೭ನೆಯ ವರ್ಷವರ್ಧಂತಿಯು ಗೌರವಾರ್ಥವಾಗಿ ೭೫ ಸಾವಿರ ಯುವಕರು ಮತ್ತೂ ಯುವತಿಯರು ನೆರೆದು ಬಂದು, ಆ ಸಂಭ್ರಮೋತ್ಸವದ ಪರಿಶೀಲನೆಯು ಆಗುತಿದ್ದ ಹಾಗೆ ಅದನ್ನು ನೋಡುವುದಕ್ಕೆಂದು ಸುಮಾರು ೬ ಸಾವಿರದ ಜನರು ಕಿಕ್ಕಿರಿದು ನಿಂತಿದ್ದ ಒಂದು ಭವ್ಯವಾದ ಆಟ್ಟಳಿಗೆಯು ಜರಿದು ಬಿದ್ದು ಸುಮಾರು ೨೦—೩೦ ಮಂದಿ ಸತ್ತರು; ಸುಮಾರು ೪೦೦ ಮಂದಿ ಗಾಯಗೊಂಡರು. ಈ ವಿಪತ್ಕಾಲದಲ್ಲಿ ಅರಸರೇ ಸ್ವತಃ ವಿಪನ್ನರಿಗೆ ಸಹಾಯ ಮಾಡುವವರಾದರು. ಈ ಆಟ್ಟಳಿಗೆಯನ್ನು ಹೊಸದಾಗಿ ಕಟ್ಟಿಸಲಾಗಿದ್ದಿತು.

ಬರುವ ವರ್ಷದ ಕೊರೊನೇಶನ್ನಿನ ಸಂಬಂಧವಾದ ಬ್ರಿಟಿಪ್ ಪತಾಕೆಗಳಿಗಾಗಿ ದೊಡ್ಡ 'ಆರ್ಡರು'ಗಳು ಜಪಾನಿಗೆ ಹೋಗುತ್ತಿದೆಯೂದ ಕಾರಣ ಪರದೇಶಗಳಿಂದ ಬರುವ ಈ ಪತಾಕೆಗಳ ಮೇಲೆ ಭಾರವಾದ ಸುಂಕವನ್ನು ಹೇರಬೇಕೆಂದು ಬ್ರಿಟಿಶ್ ನಿಶಾನೆ ಕಾರ್ಖಾನೆಗಳವರ ಒಂದು ಮೀಟಿಂಗ್ ನಡೆದಿದೆ.

ಕಾಂಟಿಂಗ್ ಸರಕಾರವು ಕಾರುಗಳಿಗಾಗಿಯೂ ಅವುಗಳ ಸಾಕಣೆಗಾಗಿಯೂ ಖರ್ಚಾಗುತ್ತಿರುವ ಅಪಾರ ಹಣವನ್ನು ಕಂಡು ಗಾಬರಿಗೊಂಡು ಈಗ ಕುದುರೆಗಳ ಸಾಕಣೆ ಮತ್ತು ಗಾಡಿಗಳ ತಯಾರಿಗಾಗಿ ೧೫ ಸಾವಿರ ರೂಪಾಯಿಗಳನ್ನು ವಿನಿಯೋಗಿಸಿದ್ದಾರೆ.

ಫ್ರಾನ್ಸಿನ ದೊಡ್ಡ ಮುಷ್ಕರದ ಗಲಭೆಯು ಉಪಶಮನವಾಗಿದೆ.

ಪೆಲಸ್ತೈನ್ ದಂಗೆಯು ಕುರಿತಾಗಿ ಪತ್ರಿಕೆಗಳಲ್ಲಿ ಪ್ರಕಟವಾದ ವಾರ್ತೆಗಳು ಕೆಲವು ತೀರಾ ಸುಳ್ಳೆಂದು ಅಲ್ಲಿನ ಹೈ ಕಮಿಶನರರ ಹೇಳಿಕೆ. ಇದೇ ಕಮಿಶನರರ ಅಪ್ಪಣೆಯಿಂದಲೇ ಈಗ ಅಲ್ಲಿನ ಮೇಯರರನ್ನೂ 'ಡಿಸ್‌ಮಿಸ್' ಮಾಡಲಾಗಿದೆ.

ಸುವೇಜ್ ಕಾಲಿನೆಯ ಮುಟ್ಟಿಗೆ ತಟಸ್ಥವಾಗಿರುವುದು ಲೇಸೆಂದು ಖ್ಯಾರಿಸಿನಲ್ಲಿ ಸುವೇಜ್ ಕೆನಾಲ್ ಕಂಪೆನಿಯ ಚೆಯರ್‌ಮ್ಯಾನರ ಮತ.

ಚೀನದ ದಕ್ಷಿಣ ಭಾಗದಲ್ಲಿ ಯುದ್ಧವು ನಡೆಯುದೆಂದು, ಸರಕಾರದ ಕಡೆಯು ಹೇಳಿಕೆ. ಸರಕಾರವು ತಡೆದರೂ ಯುದ್ಧ ನಡೆಯಬೇಕೆಂದೂ, ಸನ್ಮಾಹಗಳಾಗಲೆಂದೂ ಅಲ್ಲಿನ ಮುಖಂಡರ ಪ್ರಯತ್ನ.

ಇರಾಕಿನ ಯುವಕ ಅರಸರಾದ ಗಾಜಿಯವರ ಚಿಲುವ ಸಹೋದರಿಯರಾದ ರಾಜಕುಮಾರಿ ಅಜಾ ಎಂಬಾಕೆ, ೨೦ ವರ್ಷಗಳಿಂದ ಒಂದು ಹೊಟೆಲಿನ ಪೋರ್ಟರನಾದ, ಗ್ರೀಕ್ ದೇಶದವನಾದ ಎ. ಚಾರಲಂಬಿಸ ಎಂಬಾತನನ್ನು ಪ್ರೀತಿಸುತ್ತಿದ್ದು, ಈಗ ತಾನು ಇಸ್ಲಾಂ ಮತದಿಂದ ಗ್ರೀಕ್ ಚರ್ಚಿಗೆ ಸೇರಿ, ಯಾರಿಗೂ ತಿಳಿಯದಂತೆ, ಆಥೆನ್ಸಿನ ಒಂದು ಚರ್ಚಿನಲ್ಲಿ, ಬಹು ಗುಟ್ಟಿನಲ್ಲಿ ಮದುವೆಯಾಗಿರುವಳು. ಮದುವೆಯ ಸಮಾಚಾರ ತಿಳಿದು ಪೋಲೀಸರು ಚರ್ಚಿಗೆ ಹೋಗುವಾಗ, ಮದುವೆ ಮುಗಿದಿದ್ದಿತು.

ಬರುವ ಜುಲ್ಯಾಯಿಯಲ್ಲಿ ಕೇಂಬ್ರಿಜಿನಲ್ಲಿ ನಡೆಯಲಿರುವ ಬ್ರಿಟಿಪ್ ಸಾಮ್ರಾಜ್ಯದ ಯೂನಿವರ್ಸಿಟಿಗಳ ಕಾಂಗ್ರೆಸಿನಲ್ಲಿ ಮದ್ರಾಸ್ ಯುನಿವರ್ಸಿಟಿ ಮತ್ತೂ ಇಂಡಿಯದ ಇತರ್-ಯುನಿವರ್ಸಿಟಿ ಬೋರ್ಡಿನ ಪರವಾಗಿ, ಈಗ ಅಲ್ಲಿ ರಜೆಯು ಮೇಲಿರುವ ನಮ್ಮ ಮದ್ರಾಸ್ ವಿಶ್ವವಿದ್ಯಾಲಯದ ವ್ಯಾಸ್ ಚಾನ್ಸಲರರಾದ ಮಿ. ಆರ್. ಲಿಟ್ಟೌ ಹೇಲ್ಸ್‌ರವರು ಪ್ರಾತಿನಿಧ್ಯವನ್ನು ನಿರ್ವಹಿಸುವರಾಗಿ ತಿಳಿದುಬರುತ್ತಿದೆ.

'ಅಬಿಸೀನಿಯದ ಯುದ್ಧ ಮುಗಿದಿಲ್ಲ. ಎಡಿಸ್ ಅಬಾಬಾ ಇಟೆಲಿಯುವರ ಸ್ವಾಧೀನವಾದದೇನ್ನಾಯಿತು? ಇತರ ಪ್ರಾಂತಗಳಲ್ಲಿ ಅಬಿಸೀನಿಯದ ಬಲವು ಹಬ್ಬಿಕೊಂಡಿದ್ದು, ಯುದ್ಧ ಮಾಡಲು ಸಿದ್ಧವಾಗಿವೆ' ಎನ್ನುತ್ತಾರೆ ತುರ್ಕಿಯ ಮಿಲಿಟರಿ ಎಡ್ಜ್‌ಟೆಂಟರು!

ಫ್ರಾನ್ಸಿನ ಮುಷ್ಕರವು ಮುಗಿದುದರ ಫಲಿತಾಂಶವಾಗಿ ಕೆಲವು ಕೆಲಸಗಾರರಿಗೆ ಸೇಕಡ ೧೫ರಷ್ಟೂ ಕೆಲವರಿಗೆ ಸೇಕಡ ೭೫ರಷ್ಟೂ ಸಂಬಳವು ಪೆಚ್ಚಿಸಲ್ಪಟ್ಟಿದೆ. ಕೆಲಸಗಾರರು ಕೆಲಸಕ್ಕೆ ಬರುತ್ತಲಿದ್ದಾರೆ.

ಇಟೆಲಿಯ ಡ್ಯೂಸ್‌ರವರು ಸದ್ಯದಲ್ಲೇ ಇತಿಯೋಪಿಯವನ್ನು ಸಂದರ್ಶಿಸುವರು.

ಚೀನಾದಲ್ಲಿ ಒಂದು ಸಿವಿಲ್ ಯುದ್ಧವು ಸಂಭವಿಸುವ ಲಕ್ಷಣಗಳು ಕಂಡುಬರುತ್ತಿವೆ. ಅನಂತರ ಅದು ಕ್ರಿಮಿನಲ್ ಯುದ್ಧವೂ ಆಗಬಹುದು.

ಬ್ರಿಟಿಷ್ ಬಜೇಟಿನ ಗಟ್ಟು ಹೊರಬಿದ್ದ ಸಂಬಂಧ, ಕ್ರಿಮಿನಲ್ ವ್ಯವಹಾರಣೆಯನ್ನು ಹೂತಬೇಕೋ ಹೇಗೆಂದು ಪಾರ್ಲಿಮೆಂಟಿನಲ್ಲಿ ಸದ್ಯದಲ್ಲಿಯೇ ಚರ್ಚೆ ನಡೆಯಲಿದೆ.

ಕರಾಚಿ ಪ್ರಾಂತದಲ್ಲಿ ಸಂಚರಿಸುತ್ತಿರುವ ಪಂಜಹ್ವರಲಾಲ ನೆಹರೂಯವರು, ಜುಲ್ಯಾ ೩೦ಗಳಲಿ ಸಿಂಧ್ ಪ್ರಾಂತಕ್ಕೆ ದಯೆಮಾಡಿಸುವುದಾಗಿ ತಿಳಿದುಬರುತ್ತಿದೆ.

ಕರ್ನಾಟಕ

ಗ್ರಾಮೋನ್ನತಿಗಾಗಿ, ಮೈಸೂರು ಸರಕಾರವು, ೭೫ ಸಾವಿರ ರೂಪಾಯಿಗಳ ಒಂದು ಹೆಚ್ಚಿಗೆ ಗ್ರಾಂಟನ್ನೂ ಮಂಜೂರುಮಾಡಿರುವುದೆಂದು ದಿವಾನ್ ಸರ್ ಎಮ್. ಇಸ್ಮಾಯೇಲ್‌ರವರು ಅಲ್ಲಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪ್ಪಣೆಕೊಡಿಸಿದರು.

೩೦ ವರ್ಷಗಳಿಂದ ಕೆಲಸ ಮಾಡಿ ಸುಮಾರು ೧ ಸಾವಿರ ಮಂದಿಗೂ ಹೆಚ್ಚಾಗಿ ಶಿಷ್ಯವರ್ಗವನ್ನು ಪಡೆದಿರುವ ಧಾರವಾಡದ ಕರ್ನಾಟಕ ವ್ಯಾಯಾಮ ವಿದ್ಯಾಪೀಠದ ವಿದ್ಯಾರ್ಥಿ ತಂಡದ ರ್ಯಾಲಿಯು ಅಲ್ಲಿಯ ಡಿಪ್ಟಿ ಜಡ್ಜರಾದ ಶ್ರೀ. ಜಿ. ಎಸ್. ರಾಜಾಧ್ಯಕ್ಷ, ಐ. ಸಿ. ಎಸ್.ರವರ ಅಧ್ಯಕ್ಷತೆಯಲ್ಲಿ ಬಹು ವಿತರಣೆಯಿಂದ ನಡೆಯಿತು.

ಭದ್ರಾವತಿಯ ಬೆಂಚ್ ಕೋರ್ಟಿನ ಕಟ್ಟಡದ ಹೆಚ್ಚಿನ ಅಂಶವೂ, ಅದರ ಕೆಲವು ರಿಕಾರ್ಡುಗಳೂ ಬೆಂಕಿಯ ಪಾಲಾಗಿದೆ. ಪೋಲೀಸ್ ತನಿಖೆ ನಡೆಯುತ್ತಿದೆ.

ಬೆಂಗಳೂರಲ್ಲಿ ಶ್ರೀ. ಜಮುನಾದಾಸ್ ಮೇಥಾರವರು, ಅಶ್ಲೀಲ ಹೊಗೆಸೊಪ್ಪಿನ ಕಾರ್ಖಾನೆಯ ಕೆಲಸಗಾರರ ಸಭೆಯಲ್ಲಿ ಭಾಷಣ ಕೊಟ್ಟು, ಅವರ ಅಹಿಂಸಾಪರವಾದ ನಡತೆಯ ಕುರಿತು ಶ್ಲಾಘಿಸಿದರು.

ದ. ಕನ್ನಡ

ಮೂಲ್ಕಿ:—ಸ್ಥಳೀಯ ಯೂನಿಯನ್ ಕ್ಲಬ್ಬಿನ ೨೧ನೇ ವರ್ಷ ವರ್ಧಂತ್ಯುತ್ಸವವೂ, 'ದಿವಂಗತ ಡಾಕ್ಟರ್ ಬೋಳ ಕ್ಯಾಮರಾಯ'ರ ಜನ್ಮದಿನಾಚರಣೆಯೂ ಇದೇ ಬರುವ ತಾ. ೧೬—೬—೩೬ನೇ ಮಂಗಳವಾರ ಅಪರಾಹ್ನ ೪ ಘಂಟೆ ೫ಕ್ಕೆ ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಮ. ರಾ. ರಾ. ದಿವಾನ್ ಬಹದೂರ್ ಬಿ. ಮಹಾಬಲ ಹೆಗ್ಡೆ ಅವರ್ಗಳ್, ಬಿ. ಎ., ಬಿ. ಎಲ್.ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಇಲ್ಲಿಯ ಸಂಗೀತ್ಕಲಾ ಮಂದಿರದ ಪ್ರಥಮ ವರ್ಧಂತಿಯು ಇದೇ ಬರುವ ತಾ. ೨೦—೬—೩೬ನೇ ಶನಿವಾರ ಅಪರಾಹ್ನ ೪ ಘಂಟೆ ೪ಕ್ಕೆ ಮ. ರಾ. ರಾ. ಎನ್. ರಾಮಕೃಷ್ಣ ಪೂಂಜ ಅವರ್ಗಳವರ ಅಧ್ಯಕ್ಷತೆಯಲ್ಲಿ ನೆರವೇರಲಿರುವುದು ಎಂದು ತಿಳಿದುಬರುತ್ತದೆ.

ಸ್ಥಳೀಯ ಯೂನಿಯನ್ ಕ್ಲಬ್ಬಿನ ಕಟ್ಟೋಣ ವಿಸ್ತರಣಕ್ಕೆ ಮತ್ತು ಪುಸ್ತಕಾಲಯದ ಬಡಾವಣೆ ಬಗ್ಗೆ ರೂ. ೩೫,೦೦೦ದ ಒಂದು ಸೋತ್ತಿಯನ್ನು ಸದ್ಯದಲ್ಲೇ ತೆರೆಯಲಿರುವರು.

ಕಾರ್ಕಳ:—ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ತರಬೇತಿಹೊಂದಿದ ಇಬ್ಬರು ಹೊಸ ಉಪಾಧ್ಯಾಯಿನಿಯರ ನೇಮಕವಾಗಿದ್ದು, ಈಗ ಶಾಲಾ ಕೆಲಸವು ಮೊದಲಿಗಿಂತಲೂ ತೃಪ್ತಿಕರವಾಗಿ ನಡೆಯುವದೆಂದು ಆಶಿಸಲಾಗಿದೆ ಮೇಲ್ತರಗತಿಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯೂ ಬೆಳೆದುಬರುವಹಾಗಿ ನಂಬಿದ್ದೇವೆ.

ಕಾರ್ಕಳ:—ಹರಿಜನಸೇವಾಸಂಘದ ಕಳೆದ ವರ್ಷದ ವರದಿಯೂ ಆಯವ್ಯಯ ಪಟ್ಟಿಯೂ ಬರೆದು ತಯಾರಾಗಿರುವದು. ಸಂಘವು ಹಿಂದಿನಿಗಿಂತ ಹೆಚ್ಚು ಅಭಿವೃದ್ಧಿಯನ್ನು ಸೂಚಿಸುತ್ತದೆ. ಸಂಘದ ಆಶ್ರಯದಲ್ಲಿ ಊಟ ಉಡಿಗೆ ಪುಸ್ತಕ ಸ್ಲೇಟು ಮೊದಲಾದವು

ತೃಪ್ತಿಯಾಗದಿದ್ದರೆ, ಹಣವನ್ನು ಹಿಂದೆ ಕೊಡಲಾಗುವುದು.

ಬೇವಿನ ಗಿಡದ ಸಾರವನ್ನೂ, ಶುದ್ಧಗೊಳಿಸುವ ಮತ್ತೂ ವಿಷಹರವಾದ ಇತರ ಸಾಮುಗ್ರಿಗಳನ್ನೂ ಒಳಗೊಂಡಿದೆ.

ದಿ ಸ್ವಸ್ತಿಕಾ ಆಯಿಲ್ ಮಿಲ್ಸ್, ಲಿಮಿಟೆಡ್, ಬೊಂಬಯಿ.

ಗಳನ್ನು ಪಡೆದು ಬೇರೆ ಬೇರೆ ಶಾಲೆಗಳಲ್ಲಿ ಓದುತ್ತಿದ್ದ ಹರಿಜನ ವಿದ್ಯಾರ್ಥಿಗಳೆಲ್ಲರೂ ತಾವು ತಾವು ಓದುತ್ತಿದ್ದ ತರಗತಿಗಳ ವರ್ಷಾವಧಿಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವರು. ಸಂಘದ ಹರಿಜನವಸತಿಗೃಹವು ಸಂಪೂರ್ಣವಾಗುತ್ತ ಬರುತ್ತಲಿದೆ. ಸಂಘವು ಸಾರ್ವಜನಿಕರ ಉದಾರ ಸಹಾಯಸಹಾನುಭೂತಿಗಳನ್ನು ಬೇಡುತ್ತದೆ.

ಶ್ರೀಮತ್ ಭುವನೇಂದ್ರ ಮಹಾವಿದ್ಯಾಲಯದ ಪ್ರಧಾನ ಆಚಾರ್ಯರಾದ ಶ್ರೀ. ಕೆ. ವೆಂಕಟೇಶ ಕಾಮತ್, ಬಿ. ಎ. (ಹೊನರ್ಸ), ಎಲ್. ಟಿ.ಯವರು ಕನ್ನಡ ವಿದ್ವಾನ್ ಪ್ರಿಲಿಮಿನರಿ ಪರೀಕ್ಷೆಯನ್ನು ಕೊಟ್ಟು ತೇರ್ಗಡೆಯಾಗಿರುವರು. ಶ್ಲಾಘನೀಯವಾಗಿದೆ. ಇವರ ಕನ್ನಡದ ಅಧ್ಯಯನವು ಇನ್ನು ಮುಂಬರಿದು ಕರ್ನಾಟಕ ಸಾಹಿತ್ಯದ ಶ್ರೀ ವೃದ್ಧಿಯಾಗಲೆನ್ನುತ್ತೇವೆ.

ಸಾಕಾದಷ್ಟು ವಿದ್ಯಾರ್ಥಿಗಳು ತಮ್ಮ ಉನ್ನೇದುವಾರಿಕೆಯನ್ನು ಸೂಚಿಸಿದಲ್ಲಿ ಇಲ್ಲಿಯ ಸಂಸ್ಕೃತ ಕಾಲೇಜಿನಲ್ಲಿ ಹಿಂದೀ ವಿದ್ವಾನ್ ತರಗತಿಗಳನ್ನು ತೆರೆಯುವ ಆಲೋಚನೆ ಉಂಟು. ಉನ್ನೇದುವಾರರು ತಮ್ಮ ಅಪೇಕ್ಷೆಯನ್ನು ಕಾಲೇಜಿನ ಅಧಿಕಾರಿಗಳಿಗೆ ತಿಳಿಸಬಹುದು.

NOTICE OF SALE.

IN O. P. No. 94/1935.

IN THE DISTRICT JUDGE'S COURT, S. KANARA.

Letters of Administration having been granted to the undersigned Mother Rose Saldanha in respect to the estate of the late Gertrude Mary Saldanha, the said Mother Rose Saldanha or her agent (Advocate) will sell by public auction the house and garden (described below) opposite the Catholic Church at Urva, at 9 a. m. on **Sunday**, 14th June 1936. The auction sale will be held at the said house.

Mangalore, 9—6—'36.

Rose Saldanha, *Administrator.*
Jerome A. Saldanha, *Advocate.*

DESCRIPTION OF THE PROPERTY.

In Boloor village 90A Patta No. 143.

T. S. No.	R. S. No.	Extent. A. C.	Amount.
666—5	95—5	0.6534	Rs. 3—12—0.
666—86A	95—86A	0.436	Rs. 0— 4—0.
666—85B	95—85B	0.2178	Rs. 1— 4—0.
		Enhanced by	Rs. 1— 1—0.

Containing tiled house bearing T. S. No. 665—35 mortgaged to Nathalia Lobo, wife of Gregory Lobo, residing at Boloor for Rs. 600/- borrowed by the said Gertrude Mary Saldanha as per mortgage deed dated 26th June 1935.

Jerome A. Saldanha,
Advocate.

ದಕ್ಷಿಣ ಕನ್ನಡ ಜಿಲ್ಲೆಯೂ, ಕೇರಳ ಮಜ್ಲಿಸ್ ಇಲೆಕ್ಷನ್ ಬೋರ್ಡೂ.

(ಲೇಖಕ:—ಜನಾಬ್ ಮಹಮ್ಮದ್ ಶೆರೂಲ್.)

ಇದೇ ಕಳೆದ ಮೇ ತಿಂಗಳ ತಾರೀಕು ೨೩—೨೪ರಲ್ಲು ಕನ್ನಾನೂರಿನಲ್ಲಿ ಕೇರಳ ಮುಸ್ಲಿಮ್ ಮಜ್ಲಿಸಿನ ತೃತೀಯ ವಾರ್ಷಿಕ ಸಭೆಯು ಜರಗಿತು. ಆ ಸಭೆಯಲ್ಲಿ ಮಂಜೂರಾದ ಠರಾವುಗಳಲ್ಲಿ ಕೇರಳ ಇಲೆಕ್ಷನ್ ಬೋರ್ಡಿನ ಸ್ಥಾಪನೆಯ ಠರಾವೂ ಒಂದಾಗಿದೆ. ಆ ಠರಾವಿಗೊಂದು ಉಪಸೂಚನೆಯಾಗಿ ನಾನು ದಕ್ಷಿಣ ಕನ್ನಡ ಜಿಲ್ಲೆಯನ್ನು ಕೇರಳ ಇಲೆಕ್ಷನ್ ಬೋರ್ಡಿನಿಂದ್ಹೊರ ವಿರಹಿತಗೊಳಿಸಬೇಕೆಂದು ಸೂಚಿಸಿದೆನು. ಆದರೆ ನನ್ನ ಸೂಚನೆಯು ಸ್ವೀಕೃತವಾಗದಿದ್ದುದಕ್ಕಾಗಿ ನಮ್ಮ ಜಿಲ್ಲೆಯಿಂದ ಸಭೆಗೆ ತೆರಳಿ, ಹಿಂತೆರಳಿ ಬಂದವರ ಪೈಕಿ ಕೆಲವರು ಆ ವಿಚಾರವನ್ನು ಮಹದ್ವಿಚಾರವಾಗಿ ಮಾಡಿಕೊಂಡು ಅದರ ಕುರಿತು ಅನಾವಶ್ಯಕವಾದ ಟೀಕೆಟಿಪ್ಪಣಿಗಳ ಸುರಿಮಳೆಯನ್ನು ಸುರಿಸುತ್ತಿರುವುದರಿಂದ ಈ ಕೆಳಗಿನ ಹೇಳಿಕೆಯನ್ನು ನಾನು ಪ್ರಕಟಿಸಬೇಕಾಗಿದೆ.

ಮೇಲೆ ಹೇಳಿದ ಇಲೆಕ್ಷನ್ ಬೋರ್ಡಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಸೇರಿಸಿರುವುದು ಪ್ರಜಾಸತ್ತಿನ ರಾಜ್ಯಭಾರಕ್ರಮಕ್ಕೆ ವಿರೋಧವಾದುದು. ಮಾತ್ರವಲ್ಲ, ದಕ್ಷಿಣ ಕನ್ನಡದ ಮುಸ್ಲಿಮರ ಅಭಿಮಾನಕ್ಕೆ ಒಂದು ಭಂಗ ತರುನಂತಹದೆಂಬೀ ಕಾರಣಗಳಿಂದ ಮೇಲೆ ಹೇಳಿದ ಠರಾವಿನಲ್ಲಿ ತೋರುವ ಬೋರ್ಡಿಗೆ 'ಕೇರಳ'ವೆಂಬ ಹೆಸರಿನ ಬದಲಾಗಿ 'ಮಲಬಾರ್' ಎಂದು ಕರೆವಂತೆ ನಾನು ಉಪಸೂಚನೆಯನ್ನು ತಂದಿರುವುದು. ಯಾವುದಾದರೊಂದು ವ್ಯಕ್ತಿಯನ್ನು ಚುನಾಯಿಸಿಬಿಟ್ಟಾರೆಂಬ ಭಯದ ಪ್ರೇರೇಪಣೆಯಿಂದ ನಾನೀ ಸೂಚನೆಯನ್ನು ತಂದುದಲ್ಲ. ಪ್ರಜಾಸತ್ತಿನ ರಾಜ್ಯಭಾರಕ್ರಮವೆಂದರೆ ಪ್ರಜಾಪ್ರತಿನಿಧಿಗಳು ಸಂಘಟಿತವಾಗಿ ರಾಜ್ಯಭಾರವೆಸಗುವುದೆಂಬುದು ಸರ್ವವಿದಿತವಾದ ವಿಚಾರವಾಗಿದೆ. ಆದುದರಿಂದ ಮತಾಧಿಕಾರವು (Adult franchise) ಪ್ರಜೆಗಳೆಲ್ಲರಿಗೂ ದೊರಕಬೇಕೆಂದು ನಮ್ಮ ಮುಂದಾಳುಗಳು ಆದಷ್ಟು ಪ್ರಯತ್ನಿಸುತಿದ್ದರು ಮತ್ತು ಪ್ರಯತ್ನಿಸುತಿದ್ದಾರೆ ಎಂಬುದು ಕೂಡಾ ಸರ್ವವಿದಿತವಾದ ಸಂಗತಿಯಾಗಿದೆ.

ನಮ್ಮ ಮದ್ರಾಸು ಸಂಸ್ಥಾನದಲ್ಲಿರುವ ಮುಸಲ್ಮಾನರಿಗೆ ದೊರೆತ ಸ್ಥಾನ (Seats)ಗಳಲ್ಲಿ ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿಯ ನಮ್ಮ ಜನಸಂಖ್ಯಾನುಸಾರವಾಗಿ ಸ್ಥಾನಗಳು ನಮಗೆ ಸಿಗಲೇಬೇಕಾಗಿವೆಯೆಂದೂ, ಅದರಲ್ಲಿ ಒಂದು ಸ್ಥಾನವನ್ನು ನಮ್ಮ ತಮಿಳುನಾಡಿನ ಸಹೋದರರಿಗೆ ಬಿಟ್ಟು ಕೊಟ್ಟರೆ ನಮ್ಮ ಅವಕಾಶಕ್ಕೆ ಭಂಗವುಂಟಾಗುವುದೆಂದು ವಾರ್ತಾಪತ್ರಿಕೆಗಳ ಮೂಲಕವೂ ಸಭೆಗಳಲ್ಲಿಯೂ ವಾದಿಸಿದ ನಿನಾದವು ಇಂದು ಕೂಡಾ ನಮ್ಮ ಕರ್ಣರಂಧ್ರಗಳಿಗೆ ಕೇಳಿಸುವಂತಿದ್ದರೂ ಅವೆಲ್ಲವನ್ನು ಮರೆತುಬಿಟ್ಟು ಇಂದು ಮುಸ್ಲಿಮ್ ಮಜ್ಲಿಸಿನವರು ದಕ್ಷಿಣ ಕನ್ನಡದ ಮುಸ್ಲಿಮರಿಗೆ ದೊರೆತ ಎರಡೇ ಎರಡು ಸ್ಥಾನಗಳ ಪ್ರತಿನಿಧಿಗಳನ್ನು ನಿರ್ಣಯಿಸುವ ಅಧಿಕಾರವು ದಕ್ಷಿಣ ಕನ್ನಡಿಗರಾದ ಮುಸ್ಲಿಮರಿಗಿಲ್ಲವೆಂದೆನ್ನುವುದು ಪ್ರಜಾಸತ್ತಿನ ತತ್ವಗಳಿಗೆ ಶುದ್ಧ ವಿರುದ್ಧವಾದುದು. ಮಜ್ಲಿಸಿನಿಂದ ರೂಪೀಕೃತವಾದ ಇಲೆಕ್ಷನ್ ಬೋರ್ಡು ಎಷ್ಟರ ಮಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯ ಜವಾಬ್ದಾರಿಕೆಯನ್ನು ಹೊಂದಿರುವುದೆಂಬುದು ಯೋಚಿಸಲರ್ಹವಾದುದಾಗಿದೆ. ಮಜ್ಲಿಸಿಗೆ ದಕ್ಷಿಣ ಕನ್ನಡದ ಪ್ರತಿನಿಧಿಗಳಾಗಿ ಕಾಸರಗೋಡು ತಾಲೂಕಿನ ಮೂರು ಗ್ರಾಮದ ಐದಾರು ಜನರು ಮಾತ್ರ ಹೋಗಿರುವರಷ್ಟೆ! ಹೀಗಿರುವಾಗ ಕಾಸ್ರಗೋಡು ತಾಲೂಕಿನ ಇನ್ನಿತರ ಗ್ರಾಮುಗಳ ಮತ್ತು ದಕ್ಷಿಣ ಕನ್ನಡದ ಬೇರೆ ತಾಲೂಕುಗಳಲ್ಲಿರುವ ಮುಸ್ಲಿಮರ ಪ್ರಾತಿನಿಧಿತ್ವವೆಲ್ಲಿದೆ? ಅಲ್ಲದೆ ಇನ್ನಿತರ ತಾಲೂಕುಗಳ ಮುಸ್ಲಿಮರಿಗೆ ಮಜ್ಲಿಸಿನ ಅಸ್ತಿತ್ವದ ಅರಿವಿಲ್ಲ. ಮಲಬಾರು ಜಿಲ್ಲೆಯಲ್ಲಿ ಮುಸ್ಲಿಮರ ಸರಿಯಾದ ಪ್ರಾತಿನಿಧ್ಯಕ್ಕಾಗಿ ಪತ್ರಿಕೆಗಳ ಮೂಲಕವೂ, ಕರಪತ್ರಗಳ ಮೂಲಕವೂ, ಪ್ರಚಾರಕರ ಮೂಲಕವೂ ಸರಿಯಾದ ಪ್ರಚಾರವೂ ನಡೆದಿದೆ. ಮಾತ್ರವಲ್ಲ, ಸಕಲ ಮಹಜೀದಿಗಳಿಗೆ ಎರಡೆರಡು ಪ್ರತಿನಿಧಿಗಳನ್ನು ಚುನಾಯಿಸಿ ಕಳಹಿಸಲು ಆಮಂತ್ರಣಪತ್ರಗಳನ್ನು ಕಳುಹಿಸಿರುತ್ತಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರಿಗೆ ಯಾವ ರೀತಿಯಲ್ಲಿಯೂ ಇದರ ಅರಿವನ್ನು ಸುಳಿಯಬಿಡಲಿಲ್ಲ. ಅಲ್ಲದೆ ದಕ್ಷಿಣ ಕನ್ನಡದ ಯಾವುದೇ ಒಂದು ಪತ್ರಿಕೆಯಲ್ಲಿಯೂ ಪ್ರಕಟಿಸಲಿಲ್ಲ. ಮಾತ್ರವಲ್ಲದೆ ಇಲ್ಲಿಯ ಯಾವ ಸಂಘಗಳಿಗೂ ಈ ವಿಚಾರವನ್ನು ತಿಳಿಸಲಿಲ್ಲ. ಹೀಗಿರುವಾಗ ಚುನಾವಣೆ ಬೋರ್ಡಿನ ಪರಿಧಿಯೊಳಗೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಸೇರಿಸಲು ಮಜ್ಲಿಸಿಗಿರುವ ಅಧಿಕಾರದ ಕುರಿತು ಪ್ರಶ್ನಿಸಿದಾಗ ಅವರು ಸರಕಾರದೊಡನೆ ಬೇಡಿಕೆಗಳನ್ನೊಪ್ಪಿಸಿದಾಗ ಕೇರಳವೆಂಬ ಶಬ್ದವನ್ನು ಉಪಯೋಗಿಸಿ ದಕ್ಷಿಣ ಕನ್ನಡವನ್ನು ಅದರಲ್ಲಿ ಸೇರಿಸಿದ್ದಾರೆಂದು ಪ್ರತ್ಯುತ್ತರವಿತ್ತರು. ಇದರಿಂದ ನಾವು ತಿಳಿಯಬೇಕಾದ ವಿಚಾರ ಯಾವುದೆಂದರೆ ದಕ್ಷಿಣ ಕನ್ನಡದ ಮುಸ್ಲಿಮರಿಗಿರುವ ಕಿಂಚಿತ್ ಅಧಿಕಾರವನ್ನು ಕೂಡಾ ನಿಷ್ಕರುಣೆಯಿಂದ ಕೇರಳ ಮಜ್ಲಿಸಿನವರು ನಿರ್ನಾಮಗೈಯುತ್ತಿರುವರೆಂಬ ವಿಚಾರವು ಅತ್ಯಂತ ಶೋಚನೀಯಕರವಾದುದು. ಮಜ್ಲಿಸಿನವರೆನ್ನುವಂತೆ ಸರಕಾರದೊಡನೆ ಅವರು ಮಾಡಿಕೊಂಡ ಬೇಡಿಕೆಯಲ್ಲಿ ದಕ್ಷಿಣ ಕನ್ನಡಿಗರ ಹೆಸರನ್ನು ಕೂಡಿಸಿಕೊಂಡದ್ದರಿಂದ ಮಾತ್ರ ಅವರಿಗೆ ನಮ್ಮ ಪ್ರತಿನಿಧಿಗಳನ್ನು ನಿರ್ಣಯಿಸುವ ಅಧಿಕಾರವಿರುವುದಿದ್ದರೆ ಮಲಬಾರ್ ದಂಗೆಯ ಕಾಲದಲ್ಲಿ ಇನ್ನಿತರ ಮುಸ್ಲಿಮ್ ಸಂಸ್ಥೆಗಳು (ಇನ್ನಿತರ ಸಂಸ್ಥಾನಗಳ) ಮಲಬಾರಿನ ಮುಸ್ಲಿಮರಿಗೆ ರಕ್ಷಣೆಯನ್ನೀಯಬೇಕಾಗಿ ಸರಕಾರದೊಡನೆ ಬೇಡಿಕೊಂಡಿರುವ ಏಕಮಾತ್ರ ಕಾರಣದಲ್ಲಿ ಇವರ ಪ್ರತಿನಿಧಿಗಳನ್ನು ನಿರ್ಣಯಿಸುವ ಹಕ್ಕನ್ನು ಅಂತಹ ಸಂಸ್ಥೆಗಳಿಗೆ ಇನ್ನು ಕೊಡಲಿಕ್ಕೆ ಸಿದ್ಧರಾಗಿರುವರೇನು? ಮಜ್ಲಿಸಿನ ಸಭೆಯಲ್ಲಿದ್ದ ಕೆಲವು ಸಂದರ್ಶಕರು ಮೊಸಳೆ ಕಣ್ಣೀರನ್ನು ಧಾರಾಪೂರ್ವಕವಾಗಿ ಸುರಿಸಿದ ಸುರಸ ಗಂಭೀರವಾದ ಭಾಷಣಗಳನ್ನು ಕೇಳಿ ಆವೇಶ ಭರಿತರಾಗಿ ಹಿಂದು ಮುಂದೆ ನೋಡದೆ ಸಭಾ ಪೀಠಕ್ಕೆ ನೆಟ್ಟಗೆ ತೆರಳಿ ಭಾಷಣವೀಯಲು ಪ್ರಾರಂಭಿಸಿದರು. ಇವೆಲ್ಲ ವೈಪರೀತ್ಯಗಳನ್ನು ನೋಡುವಾಗ ನನ್ನ ಉಪಸೂಚನೆಯು ಸ್ವೀಕೃತವಾಗದಿದ್ದುದು ಆಶ್ಚರ್ಯಕರವಾದುದಲ್ಲ.

ಅಧಿಕಾರವನ್ನು ಸೆಳೆದು ತಮ್ಮನ್ನೆ ಬಲವತ್ತಾಗಿ ಮಾಡಿಕೊಳ್ಳುವಂತಹದು ಇಂದಿನ ಲೋಕರೂಢಿಯಾಗಿದೆ. ವಸ್ತುಸ್ಥಿತಿಯು ಹೀಗಿರಲು ಮಲಬಾರಿನ ಮಜ್ಲಿಸು ದಕ್ಷಿಣ ಕನ್ನಡ ಮುಸ್ಲಿಮರ ಕಿಂಚಿತ್ ಅಧಿಕಾರವನ್ನೆಲ್ಲ ಸೆಳೆಯಲೆತ್ನಿಸಿದುದು ಅಷ್ಟೊಂದು ವಿಶೇಷವಾದುದಲ್ಲ. ಒಂದು ವೇಳೆಗೆ ಮಜ್ಲಿಸಿಗೆ ಪ್ರತಿನಿಧಿಗಳನ್ನು ನಿರ್ಣಯಿಸುವ ಹಕ್ಕಿದೆಯೆಂದು ನಾವು ಭೋವಿಸುವದಿದ್ದರೂ ಮಲಬಾರಿಗೆ ೧೭ ಸ್ಥಾನಗಳನ್ನು ಕೊಟ್ಟು ದಕ್ಷಿಣ ಕನ್ನಡಕ್ಕೆ ಒಂದೇ ಒಂದು ಸ್ಥಾನವನ್ನು ಕೊಡುವುದು ಅದಾವ ನ್ಯಾಯ? ದಕ್ಷಿಣ ಕನ್ನಡದ ಮುಸ್ಲಿಮರೊಳಗೆ ಇಲೆಕ್ಷನ್ ಸಂಬಂಧವಾಗಿ ಕಲಹಗಳು ಉತ್ಪನ್ನವಾಗುವುದೆಂದು ದಯಾಭಾವದಿಂದ ಮಜ್ಲಿಸು ದಕ್ಷಿಣ ಕನ್ನಡ ಜಿಲ್ಲೆಯನ್ನು ಕೇರಳ ಇಲೆಕ್ಷನ್ ಬೋರ್ಡಿನ ಪರಿಧಿಯೊಳಗೆ ಸೇರಿಸಿಕೊಂಡದ್ದಾದರೆ ತಮಿಳುನಾಡಿನ ಮುಸ್ಲಿಮರ ಸಹೋದರರು ಮಜ್ಲಿಸಿನವರಿಗೆ ಮಾಡಿದ ಅಪರಾಧವೇನು? ಇಲೆಕ್ಷನಿನಲ್ಲಿ ನಾವು ಬರಿಯ ಜಾತೀಯತೆಯ ದೃಷ್ಟಿಯನ್ನು ಮಾತ್ರ ಇಟ್ಟುಕೊಳ್ಳಬಾರದು. ಆದರೆ ಪ್ರಾಂತೀಯತೆಯ ದೃಷ್ಟಿಯು ಕೂಡ ನಮ್ಮಲ್ಲಿರಬೇಕು. ಇಲ್ಲದಿದ್ದರೆ ಕೆಲವು ಪ್ರಾಮುಖ್ಯವಾದ ಕಾರ್ಯಗಳಿಗೆ ತೊಡಕುಂಟಾಗುತ್ತದೆ.

ಇವೇ ಮೊದಲಾದ ಕಾರಣಗಳಿಂದಾಗಿ ದಕ್ಷಿಣ ಕನ್ನಡದ ಮುಸಲ್ಮಾನ ಬಾಂಧವರು ತಂತಮ್ಮ ಕಾಲುಗಳಲ್ಲಿಯೇ ನಿಲ್ಲಲು ಯತ್ನಿಸಬೇಕಾಗಿದೆ.

(೫ನೇ ಪುಟದಿಂದ)

ಯಾದುದರಿಂದಲೂ ರೂ. ೨,೬೪೦ ಖರ್ಚಾಗದೆ ಉಳಿಯಿತು. ಹಾಗೆಯೇ ಖಾಸಗಿ ಪಾಯಿಖಾನೆಗಳನ್ನು ಸ್ವಚ್ಛವಾಗಿರಿಸುವ ಬಗ್ಗೆ ಇಟ್ಟ ರೂ. ೨,೬೦೦ಲ್ಲಿ ೨೯೦ ರೂಪಾಯಿ ಉಳಿಯಿತು. ಮೇಲಿನ ಸಿಬಂದಿಗೆ ರೂ. ೨,೪೦೦ ಮತ್ತು ಕೆಳಗಿನ ಸಿಬಂದಿಗೆ ರೂ. ೧,೦೦೦ ಮಾತ್ರ ಇಟ್ಟಿದೆ. ಬಜಪೆಯಲ್ಲಿ ಎಷ್ಟೋ ಜನರು ಬೇಸಿಗೆಯಲ್ಲಿ ಬಂಗ್ಲೆ ಮತ್ತು ಛತ್ರಗಳಲ್ಲಿ ಉಳಿಯುತ್ತಾರೆ. ಅಲ್ಲಿದ್ದ ಬೋರ್ಡ್ ಪಾಯಿಖಾನೆ ಸ್ವಚ್ಛವಾಗಿರಿಸುವುದಕ್ಕಾಗಲೀ ಪೇಟೆಯ ಬೀದಿಯನ್ನು ಗುಡಿಸುವುದಕ್ಕಾಗಲೀ ಸಿಬಂದಿ ಇಡುವುದು ಅತ್ಯಾವಶ್ಯಕ.

ಸಾಲುಮರಗಳನ್ನು ನೆಡುವುದು ಇತ್ಯಾದಿ ಸಿಬಂದಿಯ ವ ಇತರ ಖರ್ಚಿನ ಬಗ್ಗೆ ೧೯೩೫—೩೬ರಲ್ಲಿ ರೂ. ೫೬೦ ಮಾತ್ರ ಖರ್ಚಾಗಿತ್ತು. ಚಾಲ್ತಿ ವರ್ಷಕ್ಕೆ ಬರೇ ೧೦೦ ರೂ ಪಾಯಿ ವಿಂಗಡಿಸಿಡ ಬೇಕಾಯಿತು. ಪ್ರಾಥಮಿಕ ಶಿಕ್ಷಣದ ಜಮಾ-ಖರ್ಚನ್ನು ಮುಂದೆ ಟೀಕಿಸಲಾಗುವುದು.

(ಮುಂದರಿಸಲಾಗುವುದು)

THE DECCAN CO.,

Cantonment, :: MANGALORE,

Agents for

"Mohini Coffee Powder"

and

"Kelagur Tea"

ಡೆಕ್ಕಾನ್ ಕಂಪೆನಿ

ಕೆಂಟೋನ್‌ಮೆಂಟ್—ಮಂಗಳೂರು

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ಏಜಂಟರು.

— ಸನ್ನಾಪರ —

ಸುಬೋಧಶತಕ

ಟಿಕ್ಸ್‌ಬ ಬುಕ್ ಕಮಿಟಿಯಲ್ಲಿ ಮಂಜೂರಾದ

ಪಾಠಶಾಲಾ—ಪಠ್ಯಪುಸ್ತಕ.

ತಿದ್ದಿ ಬೆಳೆಸಿದ 2ನೇ ಆವೃತ್ತಿ-ಬೆಲೆ: 0-2-6. ಎಲ್ಲ ಪುಸ್ತಕವ್ಯಾಪಾರಿಗಳಲ್ಲೂ ಸಿಗುವುದು. ಒಂದಾಣೆಯ ಅಂಚೆಚೀಟನ್ನು ನನಗೆ ಕಳುಹಿಸುವ ಉಪಾಧ್ಯಾಯರಿಗೆ ಒಂದು ಪ್ರತಿ ಮಾದರಿಗಾಗಿ ಕಳುಹುವೆವು.

ವಿಳಾಸ:—

ವಿಕ್ಟೋರಿಯಾ ಮುದ್ರಾಶಾಲೆ,

ಬಂಟ್ವಾಳ, ದ. ಕನ್ನಡ.

1, 8-5.

ಗಂಡಹೆಂಡರಿಗೆ ದೊಡ್ಡ ಜಗಳವಾಯಿತು. ಕೊನೆಗೆ ಹೆಂಡತಿ (ಬಹಳವಾಗಿ ಅಳಿಸಿ ಕೊಂಡು)—'ಛಿ! ನಾನು ಈ ಮನೆಯಲ್ಲಿ ಇರಲಾರೆ. ನನ್ನ ತವರು ಮನೆಗೆ ಈಗಲೇ ಹೊರಡುತ್ತೇನೆ.'

ಗಂಡ:—'ಹಾಗೆಯೇ ಮಾಡು, ಬೇಕಾದರೆ ಇದೋ, ರೈಲಿನ ಟಿಕೇಟಿಗೆ ದುಡ್ಡು!'

ಹೆಂಡತಿ:—(ಎಣಿಸಿಕೊಂಡು) 'ಇದೇ ಸಿದು? ಆ ಮೇಲೆ ವಾಪಸು ಬರುವ ಟಿಕೇಟಿಗೆ?'

ನಮ್ಮ ಕಂಪೆನಿಯಲ್ಲಿರತಕ್ಕ ಹಸನಾದ ಊದು ಬತ್ತಿಗಳು ಕಮ್ಮಿ ಜಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತೆ. ಬೇಕಾದ ವ್ಯಾಪಾರಸ್ಥರು ತರಿಸಿಕೊಂಡು ನಫೆ ಹೊಂದಬಹುದು. ಆರ್ಡರಿನಲ್ಲಿ ಅರ್ಧ ಹಣ ಮುಂಗಡವಾಗಿ ಕಳುಹಿಸಿದರೆ ನೂಲು ರವಾನಿಸಲಾಗುತ್ತದೆ. ಪ್ಯಾಕೆರಿಗ್ ಮತ್ತು ರೈಲ್ವೆ ಚಾರ್ಜು ಪ್ರತ್ಯೇಕ.

ಮಣ 1ಕ್ಕೆ ರೂ. 14—8—0.

9 ಇಂಚಿನಿಂದ 12—15—16ರ ವರೆಗೂ ಇರುವ ನರ್ ಗೀಸ್— ಅಂಬರ್— ಗ.ಲಾಬಿ— ಶಾಫರಾನಿ— ಸಂದಲ—ಕ್ಯೂಷ್ಣು— ಹಾಲ್‌ಮಡ್ಡಿ— ಪುನುಗು—ಜವಾಜ್—ಕಸ್ತೂರಿ ಬತ್ತಿಗಳು—ಮಣ 1ಕ್ಕೆ ರೂ. 14—8—0. ಮಹುವೆ, ಮುಂಜಿಗಳಲ್ಲಿ ಬೇಕಾದ ಆಪ್ಪಟ ಕನ್ನೂಜ್ ಪನ್ನೀರು ಡಜನ್ ಬಾಟ್ಲಿ ಚಿಕ್ಕ ಸೈಜು ರೂ. 5—0—0, ದೊಡ್ಡ ಬಾಟ್ಲಿ ರೂ. 9—8—0. ಹಸಿ ಗಂಧ—ತೊಲೆ ಹಸನ್ 1ಕ್ಕೆ ರೂ. 2—8—0. ಮಡ್ಡಿ 6 ಆಣೆಯಿಂದ ರೂ. 1—8—0 ವರೆಗೂ—ಇನ್ನೂ ಅನೇಕ ರಖಂವಾರಿ ತೈಲಗಳು, ಅತ್ತರುಗಳು, ಸೆಂಟ್‌ಗಳು ಎಲ್ಲವೂ ಬಿಕರಿಗೆ ಸಿದ್ಧವಾಗಿರುತ್ತವೆ. ಒಂದು ಸಲ ತರಿಸಿ ನಫೆ ಸಂಪಾದಿಸಿಕೊಳ್ಳಬಹುದು:-ಗ್ಯಾರಂಟಿ ಮೂಲು.

ಮ್ಯಾನೇಜರ್,

ಇಂಟರ್‌ನ್ಯಾಶನಲ್ ಸೀಡ್ ಕಂಪೆನಿ,

ಲಾಲ್‌ಬಾಗ್ ಫ್ಲೋರ್ಟ್ ರೋಡ್,

ಬೆಂಗಳೂರು ಸಿಟಿ.

Props:—S. G. N. BROS.

B. C. I. BANK, LTD.,

VIZAGAPATAM.

Our Novel Scheme appreciated by His Highness the Yuvaraja of Mysore.

Applications are invited from respectable Ladies and Gentlemen for the posts of DISTRICT MANAGERS, and SPECIAL MANAGERS in all the DISTRICTS OF MYSORE STATE, except Kolar, Bangalore and Tumkur, on Rs. 110—20—300, and Rs 100—10—200 per mensem with PENSION BENEFITS. Applications should reach the undersigned before 20—6—'36 with two anna stamps and credentials.

Dr. B. V. Raman, *Provincial Manager,*
14, I. Main Road,
Seshadripuram, Bangalore City.

Applications for the posts of SPECIAL MANAGERS and AGENTS from the Districts of KOLAR, BANGALORE and TUMKUR should be addressed with 2 anna stamps to the respective DISTRICT MANAGERS.

Mrs. K. Puttamma,
Near Muzzaffarkhana, Kolar Town.
Mr. M. Subbarao, *Sonnapanahalli,*
Bettahalsoor Post, Mysore State.
Mr. C. S. Rao, *C/o. Nataraj N. S.,*
Head Master, Wesleyan Mission Middle School
Tumkur, Mysore State.

"Got to stay a week in Mangalore? You have my sympathy."

"Don't need it, thanks! You evidently haven't tried the Udipi Sri Krishna Bhavan lately. It's the only hotel on the west coast where you can't help enjoying yourself."

Hampankatta, **The Udipi Sri Krishna Bhavan** *Mangalore.*

HEALTHIEST LOCALITY—CLOSE TO ALL PLACES OF BUSINESS AND PLEASURE—CEILING FANS—RUNNING WATER—ELECTRIC REFRIGERATORS—EXPERT MANAGEMENT—THE MOST UP-TO-DATE HOTEL IN KANARA.

ಕಣ್ಣುಗಳ ಆರೋಗ್ಯ

ಲೇಖಕರು:— ಶ್ರೀಯುತ ಕೆ. ನರಸಿಂಹನವರು, ಪಾಲ ಅಗ್ರಹಾರ, ನಾಗಮಂಡಲ ತಾಲ್ಲೂಕು.

ಮನುಷ್ಯರಿಗೆ ಕಣ್ಣುಗಳ ಉಪಯೋಗ ವೆಷ್ಟೆಂಬುದನ್ನು ಕುರಿತು ಪ್ರತ್ಯೇಕವಾಗಿ ಇಲ್ಲಿ ಹೇಳಬೇಕಾಗಿಲ್ಲ. ಇಂದ್ರಿಯಗಳೊಳಗೆಲ್ಲ ಪ್ರಧಾನ ಸ್ಥಾನದಲ್ಲಿರುವ ಕಣ್ಣುಗಳ ಆರೋಗ್ಯ ವಿಚಾರದಲ್ಲಿ ಪ್ರತಿಯೊಬ್ಬರೂ ಬಹಳ ಜಾಗರೂಕರಾಗಿರಬೇಕು. ಹುಟ್ಟಿದ ದಿನದಲ್ಲಿ ಕೂಸು ಕಣ್ಣು ತೆರೆದುದು ಮೊದಲು ಕಣ್ಣು ಮುಚ್ಚುವ ನರಿಗೂ, ಆ ಇಂದ್ರಿಯದ ಪೋಷಣೆಯನ್ನು ಬಹಳ ಎಚ್ಚರಿಕೆಯಿಂದ ಗಮನಿಸಬೇಕಾದ ಸಮಯವಿಶೇಷಗಳೂ ಕೆಲವುಂಟು.

ಒಂದು ಮಗುವಿನ ಪುರೋಭಿವೃದ್ಧಿಗಳೆಲ್ಲಿ ಅಂದರೆ, ಅದರ ವಿದ್ಯಾಭ್ಯಾಸ, ಮುಂದೆ ಅದರ ಜೀವನೋಪಾಯ, ಇಹಲೋಕದ ಸುಖಭೋಗಗಳು ಇವೆಲ್ಲ ನೇತ್ರೇಂದ್ರಿಯವು ಸರಿಯಾಗಿದ್ದರೆ ಮಾತ್ರವೇ ಹೊರತು ದೃಷ್ಟಿಯು ಕೆಟ್ಟು ಹೋದರೆ ಅಂತವನು ಯಾವ ಸುಖಕ್ಕೂ ಭಾಗಿಯಾಗಲಾರನು. ಅನೇಕ ಮಕ್ಕಳು ಸಾಮಾನ್ಯವಾದ ಕೆಲವು ಆರೋಗ್ಯನಿಯಮಗಳನ್ನು ಕೂಡಾ ಅಲಕ್ಷ್ಯಮಾಡುವುದರಿಂದ ಬಹು ಬೇಗನೆ ಕಣ್ಣನ್ನು ಕೆಡಿಸಿಕೊಂಡು ಕಷ್ಟಕ್ಕೆ ಗುರಿಯಾಗುವರು. ಕೂಸು ಹುಟ್ಟಿದೊಡನೆ ಅದರ ಕಣ್ಣುಗಳನ್ನು ತೊಳೆದು ಶುಚಿಮಾಡುವ ವಿಷಯದಲ್ಲಿ ಅಲಕ್ಷ್ಯವಾಗಿರುವುದು, ಎಳೆಯ ಮಕ್ಕಳನ್ನು ಅಧಿಕವಾದ ಬೆಳಕಿದ್ದ ಕಡೆಗೆ ಎತ್ತಿಕೊಂಡು ಹೋಗಿ ಅವುಗಳ ಕಣ್ಣಿಗೆ ಆಯಾಸ ಕೊಡುವುದು, ಶಾಲೆಗಳಲ್ಲಿ ದೃಷ್ಟಿಗೆ ಅಪಾಯಕರಗಳಾದ ಕೆಲವು ಕೆಟ್ಟ ಪದ್ಧತಿಗಳು ಇವೇ ಮುಂದಾಗಿ ನೇತ್ರಾರೋಗ್ಯವನ್ನು ಕೆಡಿಸತಕ್ಕ ಹಲವು ಬಗೆಯ ನೇತ್ರರೋಗಗಳಿಂದ ಬಾಧೆಪಡುವುದಕ್ಕೆ ಕಾರಣವಾಗಿದೆ.

ಆಗಲೇ ಹುಟ್ಟಿದ ಕೂಸುಗಳಲ್ಲಿ ಸ್ವಲ್ಪ ಮಾತ್ರವಾದರೂ ಕಣ್ಣು ಕೆರಳಿದ ಹಾಗೆ ತೋರಿದರೆ ಅದರ ಕಣ್ಣುಗಳ ವಿಷಯದಲ್ಲಿ ಬಹಳ ಎಚ್ಚರದಿಂದಿರಬೇಕು, ಅದರಲ್ಲಿಯೂ ಮುಖ್ಯವಾಗಿ ತಾಯಿಯು, ಹಿಂದೆ ತನ್ನ ಜನನಾಂಗದಲ್ಲಿ ಕಶ್ಮಲ ಸುರಿಯುವುದು (ಯೋನಿಸ್ರಾವ) ನುಂತಾದುವೇನಾದರೂ ಆಗುತ್ತಿದ್ದ ಹಾಗೆ ಸೂಚಿಸಿದರೆ, ಬಹಳ ಜಾಗರೂಕತೆಯಿಂದಿರಬೇಕು.

ಅಂತಹ ಮಕ್ಕಳ ಕಣ್ಣಿಗೆ ನೆಟ್ಟಗೆ ಬೆಳಕು ಬೀಳದಂತೆ ನೋಡಿಕೊಳ್ಳಬೇಕು. ಆದರೆ ಸೂತಿಕಾಗೃಹಕ್ಕೆ ಧಾರಾಳವಾಗಿ ಬೆಳಕು ಬರುವುದನ್ನು ತಪ್ಪಿಸಬಾರದು.

ಬಹಳ ತೀವ್ರವಿಲ್ಲದೆ ತಂಪಾಗಿಯೂ ಸೂರ್ಯರಶ್ಮಿಯು ಒಳಗೆ ಬೀಳುವಂತಿರಬೇಕು. ಆದರೆ ನೇರವಾಗಿ ಆ ರಶ್ಮಿಯು ಮಕ್ಕಳ ಕಣ್ಣಿಗೆ ಬಾರದ ಹಾಗೆ ತೆರೆ ಮುಂತಾದುವುಗಳನ್ನು ಮರೆ ಮಾಡಿಟ್ಟರೆ ಆ ಮೂಲಕವಾಗಿ ಬರತಕ್ಕ ಸೂರ್ಯರಶ್ಮಿಯು ಹಿತಕರವಾಗಿರುವುದಲ್ಲದೆ ಅದರಿಂದ ಯಾವ ಅಪಾಯವೂ ಇರದು.

ಮಕ್ಕಳನ್ನು ಮನೆಯಿಂದ ಹೊರಕ್ಕೆ ಕರೆದುಕೊಂಡು ಹೋಗುವಾಗ ಕಣ್ಣಿಗೆ ನೇರವಾಗಿ ಬೆಳಕು ಬೀಳದಂತೆ, ಸೂರ್ಯರಶ್ಮಿಯ ತೀಕ್ಷ್ಣತೆಯನ್ನು ಕಡಿಮೆಗೊಳಿಸತಕ್ಕ ಕಪ್ಪು, ನೀಲಿ ಅಥವಾ ಹಸುರು ಬಣ್ಣದ ಬಟ್ಟೆಯನ್ನು ಗೋಡೆಯ ಕಿಟಿಕಿಗಳಿಗೆ ಮರೆಮಾಡಿ, ಇಲ್ಲವೇ ಮಕ್ಕಳಿಗೆ ಹೊದ್ದಿಸಿ, ಕರೆದುಕೊಂಡು ಹೋಗಬೇಕು.

ಆರೋಗ್ಯ ವಿಜ್ಞಾನ

ಪ್ರಾಯಕವಾಗಿ ಮಕ್ಕಳಿಗೆ ಆಗಾಗ ಬೇರೆ ಬೇರೆ ಸ್ಥಳಸನ್ನಿವೇಶಗಳನ್ನು ನೋಡುವುದರಲ್ಲಿಯೂ, ವಿನೋದಾಟಗಳಲ್ಲಿಯೂ ಪ್ರೀತಿಯು ಹೆಚ್ಚು. ಆದುದರಿಂದ ಸಣ್ಣ ಮಕ್ಕಳನ್ನು ಒಂದೇ ಕಡೆಯಲ್ಲಿಟ್ಟು ಆಡಿಸುತ್ತಿರಬಾರದು, ಮಕ್ಕಳಿಗೆ ಬೇರೆ ಬೇರೆ ವಿನೋದಗಳನ್ನು ತೋರಿಸುವುದರಿಂದ ಉತ್ಸಾಹ ಹುಟ್ಟಿಸುತ್ತಿದ್ದರೆ ಅದರಿಂದ ಅವುಗಳ ದೇಹಾರೋಗ್ಯವು ಹೆಚ್ಚಿಸುವುದು. ಮೊತ್ತದ ದೇಹಾರೋಗ್ಯದಿಂದ ಕಣ್ಣುಗಳ ಆರೋಗ್ಯರಕ್ಷಣೆಗೆ ಬಹಳ ಅನುಕೂಲವುಂಟು.

ಮಕ್ಕಳಿಗೆ ಆಡುವುದಕ್ಕೆ ಬಹಳ ಚಿತ್ರದ ಪುಸ್ತಕಗಳನ್ನು ಕೊಡಬಾರದು. ಅನೇಕರಿಗೆ ಇದು ಸಾಧ್ಯವಿಲ್ಲದಿರಬಹುದು. ಅಂತಹ ಸಂದರ್ಭಗಳಲ್ಲಿ ಮಕ್ಕಳ ಕೈಗೆ ಅಂತಹ ಆಟದ ಸಾಮಾನುಗಳನ್ನು ಕೊಡುವುದನ್ನು ಮಿತವಾಗಿಟ್ಟುಕೊಳ್ಳಬೇಕು. ತಂಪಾದ ಹೊತ್ತಿನಲ್ಲಿ ಆಗಾಗ ಮಕ್ಕಳನ್ನು ಮನೆಯಿಂದ ಹೊರಗೆ ಎತ್ತಿಕೊಂಡು ಹೋಗಿ ಬರುವ ಪದ್ಧತಿಯನ್ನು ತಪ್ಪದೆ ಅನುಸರಿಸಬೇಕು. ಇದರಿಂದ ಅವುಗಳಿಗೆ ಉಲ್ಲಾಸವುಂಟಾಗುವುದು. ಅಲ್ಲದೆ ಯಾವಾಗಲೂ ಬಹಳ ಹತ್ತಿರದಲ್ಲಿರುವ ಪದಾರ್ಥಗಳನ್ನೇ ನೋಡುತ್ತಿರಬೇಕಾದ ನಿರ್ಬಂಧವನ್ನು ಇದರಿಂದ ಬಹಳಮಟ್ಟಿಗೆ ತಪ್ಪಿಸಿದಂತಾಗುವುದು.

ಓದುವಾಗ ಪುಸ್ತಕದ ಮೇಲೆ ತೀವ್ರವಾದ ಬೆಳಕು ಬೀಳಬಾರದು. ಅನೇಕರು ಸಂಜೆಯಾಗಿ ಮಬ್ಬು (ಕತ್ತಲೆ) ಕವಿದ ಮೇಲೆಯೂ, ಸ್ವಲ್ಪವಾಗಿ ಕಾಣುವ ಬೆಳಕಿನಲ್ಲಿಯಾಗಲೀ, ಚಂದ್ರಿಕೆ (ಬೆಳದಿಂಗಳು)ಯಲ್ಲಿಯಾಗಲೀ ಪುಸ್ತಕಗಳನ್ನೋದುವುದುಂಟು. ಇವು ನಿಜವಾದ ಬೆಳಕಲ್ಲ, ಪುಸ್ತಕವನ್ನೋದುವುದಕ್ಕೆ ತಕ್ಕಷ್ಟು ಪ್ರಕಾಶವೂ ಅವರಲಿಲ್ಲ. ಇದಲ್ಲದೆ ಅನೇಕ ಮಂದಿ ಉದ್ಯೋಗಸ್ಥರು ಆಫೀಸುಗಳಲ್ಲಿ ಕೆಲಸವಾದ ಮೇಲೆ ಮೋಟಾರುಬಂಡಿಯಲ್ಲಿ ಕುಳಿತು ಬರುವಾಗ, ಆ ಗಾಡಿಯೊಳಕ್ಕೆ ಬರುವ ಸಣ್ಣ ಬೆಳಕಿನಲ್ಲಿಯೂ ಸಣ್ಣಕ್ಷರಗಳಿಂದ ಮುದ್ರಿತನಾದ ಪತ್ರಿಕೆಗಳನ್ನೋದುತ್ತ ಬರುವುದನ್ನು ನೋಡಬಹುದು. ಇವರು ಮನೆಗೆ ಬಂದ ಮೇಲೆಯೂ ತಮ್ಮ ದೃಷ್ಟಿಗೆ ಅಕ್ಷರಗಳೇನೂ ಕಾಣದಿರುವ ವರೆಗೆ ಶ್ರಮಪಟ್ಟು ಆ ಪತ್ರಿಕೆಯನ್ನು ಹಿಡಿದು ಓದುತ್ತಲೇ ಇರುವುದೂ ಉಂಟು. ಕೆಲವರು ರಾತ್ರಿಯಲ್ಲಿ ನಿದ್ದೆಯು ಕಣ್ಣುಗಳನ್ನು ಎಳೆಯುತ್ತಿರುವಾಗಲೂ ಬಲತ್ಕಾರದಿಂದ ಕಥೆಗಳನ್ನೋ ಕಾದಂಬರಿಗಳನ್ನೋ ಓದುವರು. ಇವೆಲ್ಲ ಬೇಗನೇ ದೃಷ್ಟಿಯನ್ನು ಕೆಡಿಸಿಬಿಡುವುದು. ಯಾವಾಗಲೂ ಕಣ್ಣುಗಳಿಗೆ ಈ ವಿಧವಾದ ಶ್ರಮವನ್ನು ಕೊಡಬಾರದು. ಬಹಳ ತೀವ್ರವಾದ ಬೆಳಕು ಕಣ್ಣಿಗೆ ಬೀಳುವುದನ್ನು ತಪ್ಪಿಸಬೇಕು. ನೀರು, ಕನ್ನಡಿ, ನುಣುಪಾದ ಕಲ್ಲು ಮುಂತಾಗಿ ಪ್ರತಿಫಲ್ಯನಶಕ್ತಿಯುಳ್ಳ ವಸ್ತುಗಳ ಮೇಲೆ ಬಿದ್ದ ಪ್ರಕಾಶವನ್ನು ನೋಡಬಾರದು. ಇದು ನೇತ್ರಗೋಳದಲ್ಲಿ ಪ್ರಧಾನವಾದ 'ರೆಟಿನಾ' ಎಂಬ ಪರೆಗೆ ಬಹಳ ಆಯಾಸವನ್ನುಂಟುಮಾಡಿ ಅದರ ಶಕ್ತಿಯನ್ನು ಕಗ್ಗಿಸುವುದು. ಅಂತಹ ಪ್ರತಿಫಲಿಸುವ ಪದಾರ್ಥ (ಪ್ರಕಾಶ)ಗಳನ್ನು ನೋಡಬೇಕಾಗಿ ಬಂದ ಸಂದರ್ಭಗಳಲ್ಲಿ ಕಪ್ಪು ಮುಂತಾದ ಬಣ್ಣದ ಕನ್ನಡಕಗಳನ್ನು ಹಾಕಿಕೊಳ್ಳಬೇಕು.

ಬಾಲ್ಯದಲ್ಲಿ ಮಕ್ಕಳಿಗೆ ಓದುವುದಕ್ಕಾಗಿ ಕೊಡುವ ಪುಸ್ತಕಗಳೆಂತವೆಂಬುದನ್ನು ಮುಖ್ಯವಾಗಿ ಗಮನಿಸಬೇಕು. ಶಾಲೆಗೆ ಹೋಗುವ ಮಕ್ಕಳಿಗೆ ಅಲ್ಪ ಬೆಲೆಯುಳ್ಳ ಸಣ್ಣ ಸಣ್ಣ ಪುಸ್ತಕಗಳನ್ನು ಕೊಟ್ಟು ಓದಿಸುವುದುಂಟು. ಸ್ಫುಟವಾಗಿ ಕಾಣದೆ ಸಣ್ಣಕ್ಷರಗಳಿಂದ ಮುದ್ರಿತವಾದ ಪುಸ್ತಕಗಳನ್ನು ಓದುವುದರಿಂದಲೇ ಅನೇಕ ಬಾಲಕರು ಆಗಾಗ ಕಣ್ಣಿನ ಬಾಧೆಗೆ ಗುರಿಯಾಗಿ ಕಷ್ಟಪಡುವರು. ಮುಂದೆ ಇದು ಅನೇಕ ನೇತ್ರರೋಗಗಳಿಗೂ ಬೀಜಾವಾಪವಾಗುವುದು. ಬಾಲ್ಯವಯಸ್ಸಿನಲ್ಲಿ ಇವೆಲ್ಲ ಕಣ್ಣಿಗೆ ಬಹು ಸುಲಭವಾಗಿ ಅಪಾಯವನ್ನು ತರುವುದಲ್ಲದೆ ಅದು ಅಷ್ಟರಲ್ಲಿಯೇ ಪರ್ಯವಸಾನವಾಗದೆ ಅದರಿಂದುಂಟಾದ ನ್ಯೂನತೆಯು ಜೀವಾವಧಿ ಬಿಟ್ಟುಹೋಗದೆ ಬಾಧಿಸುತ್ತಲೇ ಇರುವುದು.

ಈಗಿನ ಕಾಲದಲ್ಲಿ ಪ್ರಾಯಕವಾಗಿ ವರ್ತಮಾನಪತ್ರಿಕೆಗಳೇ ಬಹಳಮಟ್ಟಿಗೆ ಜನಗಳ ಕಣ್ಣನ್ನು ಕೆಡಿಸಲು ಕಾರಣವಾಗಿವೆ. ಏಕೆಂದರೆ ವರ್ತಮಾನಪತ್ರಿಕೆಗಳನ್ನೋದುವುದರಲ್ಲಿ ಎಲ್ಲರಿಗೂ ಅತುರವೂ ಅಭಿರುಚಿಯೂ ಹೆಚ್ಚಾಗುತ್ತವೆ. ಅವರಲ್ಲಿ ಸ್ಥಳಸಂಕೋಚಕ್ಕಾಗಿ ಅನೇಕ ವಿಷಯಗಳು ಬಹಳ ಸಣ್ಣಕ್ಷರಗಳಿಂದ ಮುದ್ರಿತವಾಗುತ್ತಿವೆ. ಇಂತಹ ಪತ್ರಿಕೆಗಳು ಎಷ್ಟೇ ಹೊತ್ತಾದ ಮೇಲೆ ಸಿಕ್ಕಿದರೂ ಅವುಗಳನ್ನು ಓದಿ ಮುಗಿಸುವ ಆತುರದಿಂದ ಅನೇಕರು ಇದ್ದಷ್ಟು ಬೆಳಕಿನಲ್ಲಿ ಕಾಲಾಕಾಲವನ್ನು ವಿಮರ್ಶಿಸದೆ ಓದುವರು. ಇದರಿಂದಲೂ ಕಣ್ಣಿಗೆ ಅಪಾಯವು ಹೆಚ್ಚು.

ಎಲ್ಲಕ್ಕಿಂತಲೂ ಮುಖ್ಯವಾಗಿ ಶಾಲೆಗಳಲ್ಲಿ ಸಣ್ಣ ಮಕ್ಕಳಿಗೆ ಓದಿಸುವ ಪುಸ್ತಕಗಳನ್ನು ಗಮನಿಸಬೇಕಾದುದು ಬಹಳ ಮುಖ್ಯವು. ಆ ಪುಸ್ತಕಗಳು ಪ್ರಕಾಶವಾದ ದೊಡ್ಡ ದೊಡ್ಡ ಅಕ್ಷರಗಳಿಂದ ಮುದ್ರಿತವಾಗಿರಬೇಕು. ಹಾಗಿಲ್ಲದೆ ಅಸ್ಪುಟವಾದ ಸಣ್ಣ ಟೈಪುಗಳಿಂದ ಮುದ್ರಿತವಾದ ಪುಸ್ತಕವನ್ನು ಮಕ್ಕಳ ಕೈಗೆ ಕೊಟ್ಟರೆ, ಅವು ಕಣ್ಣಿನ ಹತ್ತರಕ್ಕೆ ಪುಸ್ತಕವನ್ನಿಟ್ಟು ಓದಬೇಕಾಗುವುದು. ಅಕ್ಷರಗಳೆಲ್ಲ ಪ್ರಕಾಶವಾದ ಕಪ್ಪು ಶಾಯಿಯಲ್ಲಿ ಮುದ್ರಿತವಾಗಿರಬೇಕು ಮತ್ತು ಪಂಗ್ತಿಗಳಲ್ಲಿ ಒಂದಕ್ಕೊಂದಕ್ಕೆ ಸಡುವೆ ಬಿಟ್ಟಿರುವ ಅವಕಾಶವು ಕೊನೆಯ ಪಕ್ಷ ಎರಡು 'ಮಿಲಿಮೀಟರ್'ನಷ್ಟಿರಬೇಕು. ಪಂಗ್ತಿಗಳು ಬಹಳ ಉದ್ದವಾಗಿಯೂ ಇರಬಾರದು.

ಈ ಕೆಳಗಿನ ನಿಯಮಗಳು ನೇತ್ರರಕ್ಷಣೆಗೆ ಆವಶ್ಯಕವಾದುವುಗಳಾಗಿವೆ:—

೧. ಯಾವಾಗಲೂ ತಲೆಯನ್ನೆತ್ತಿಕೊಂಡೇ ಓದಬೇಕು.

೨. ಪುಸ್ತಕವನ್ನು ಮುಖದಿಂದ ೧೪ ಅಂಗುಲ ದೂರದಲ್ಲಿ ಹಿಡಿದುಕೊಳ್ಳಬೇಕು.

೩. ಬೆಳಕು ಸ್ವಚ್ಛವಾಗಿಯೂ, ಉತ್ತಮವಾದುದಾಗಿಯೂ ಇರಬೇಕು.

೪. ಸೂರ್ಯರಶ್ಮಿಯು ಪುಸ್ತಕದ ಹಾಳೆಗಳ ಮೇಲೆ ಬಿದ್ದಿರಬಾರದು.

೫. ದೀಪಕ್ಕೆ ಎದುರಾಗಿ ಕುಳಿತುಕೊಂಡು ಓದಬಾರದು.

೬. ಹಿಂದಿನಿಂದಾಗಲೀ, ಭುಜದ ಕಡೆಯಿಂದಾಗಲೀ ಬೆಳಕು ಬೀಳ್ತುತ್ತಿರಬೇಕು.

೭. ಅಸ್ಪಷ್ಟವಾಗಿ ಕಾಣುವ ಮತ್ತು ಸಣ್ಣ ಅಕ್ಷರದ ಪುಸ್ತಕಗಳನ್ನಾಗಲೀ, ಪತ್ರಿಕೆಗಳನ್ನಾಗಲೀ ಓದಬಾರದು.

೮. ಆಗಾಗ್ಗೆ ಕಣ್ಣಿಗೆ ವಿಶ್ರಾಂತಿಯನ್ನು ಕೊಡುತ್ತಿರಬೇಕು.

೯. ಪ್ರಾತಃಕಾಲಗಳಲ್ಲಿಯೂ, ಸಂಧ್ಯಾಕಾಲಗಳಲ್ಲಿಯೂ ಶುಭ್ರವಾದ ನೀರಿನಿಂದ ಕಣ್ಣುಗಳನ್ನು ತೊಳೆಯುತ್ತಿರಬೇಕು.

೧೦. ನೇತ್ರವ್ಯಾಧಿ ಇರುವವರೊಡನೆ ಸೇರಬಾರದು.

೧೧. ನೇತ್ರಗಳಿಗೆ ವ್ಯಾಧಿಯು ತೋರಿದ ಕೂಡಲೇ ಅನುಭವಸ್ಥರಿಂದ ತಕ್ಕ ಚಿಕಿತ್ಸೆಯನ್ನು ಪಡೆಯಬೇಕು.

ಒಕ್ಕಲಿಗರ ಪತ್ರಿಕೆ.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

ಮಾತ್ರೆಗಳು.

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಬಲಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಉಚಿತವಾಗಿ ಕೊಡುವ

"ಜೀವದ ವೃಕ್ಷಮೂಲ"

ಒಂದು ಡಬ್ಬಿ ಉಪಯೋಗಿಸಿ ನೋಡಿ, ಮೂವತ್ತೆರಡು ಮಾತ್ರೆಗಳ ಡಬ್ಬಿ ೧ಕ್ಕೆ ಒಂದು ರೂಪಾಯಿ ಮಾತ್ರ.

ಕ್ಯಾಟಲಾಗಿಗೆ ಬರೆಯಿರಿ:—

ಆತಂಕನಿಗ್ರಹ ಫಾರ್ಮೆಸಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕಾಮತ್‌ರವರ ದಿವ್ಯ ಸಿದ್ಧೌಷಧ!

ಉನ್ಮಾದ ಸಂಜೀವನ!!

ಉಗ್ರವಾಗಿರುವ ಹುಚ್ಚು; ಮೌನವಾಗಿರುವ ಹುಚ್ಚು; ದೀರ್ಘ ಕಾಲದ ಹುಚ್ಚು; ಅಲ್ಪ ಕಾಲದ ಹುಚ್ಚು ನಿದ್ರಾ ನಾಶ, ಮನೋವಿಕಾರ, ಅಪಸ್ಮಾರ, ಹೆಂಗಸರಿಗುಂಟಾಗುವ ಸೂತಿಕಾವಾಯು, ಹಿಸ್ಟೇರಿಯಾ—ಎಂತಹ ಹುಚ್ಚು, ಬುದ್ಧಿಭ್ರಮಣೆಗಳಿಗೂ ಅವಶ್ಯ ಉಪಯೋಗಿಸಿ.

ಇದರಲ್ಲಿ ಅಮಲುಪದಾರ್ಥಗಳಿಲ್ಲ; ಶುದ್ಧ ವನಸ್ಪತಿಗಳಿದ್ದೇ ತಯಾರಿ.

60 ಮಾತ್ರೆಗಳ ಬಾಟಲಿಯೊಂದಕ್ಕೆ ಬೆಲೆ ರೂ. 3/- ಮಾತ್ರ.

ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:—ಸಿ. ವೈಕುಂಠ ಕಾಮತ್,
'ಇನ್‌ಸೇನಿಟಿ ಎಕ್ಸ್‌ಪರ್ಟ್',
ಪೋಸ್ಟ್ ಉಡುಪಿ, ದ. ಕನ್ನಡ.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ವಳಜ್ವರ, ಅಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ, ಸಂಭೋಗಶಕ್ತಿಯನ್ನೂ, ಜ್ಞಾಪಕಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ, ಕಾಂತಿಯನ್ನೂ ಉಂಟುಮಾಡುವುದು. **ಬಾಟ್ಲಿ 1ಕ್ಕೆ ರೂ. 2—8—0.**

ಮಲೇರಿಯಾ ನಿವಾರಿಣಿ

ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡೆ ಬಂದ ಜ್ವರ, ಪುರಾಣಜ್ವರ, ಕಫಜ್ವರ ಜ್ವರಗೆಡ್ಡೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. **ಬಾಟ್ಲಿ 1ಕ್ಕೆ ರೂ. 1—8—0.**

ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು, ಇವೇ ಮುಂತಾದ 20 ವಿಧದ ಮೇಹರೋಗಗಳನ್ನು ಗುಣಪಡಿಸುವುದು. **ಕ್ರಯ ಡಬ್ಬಿ 1ಕ್ಕೆ ರೂ. 2—8—0 ಮಾತ್ರ.**

ಎಸ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ರಥಬೀದಿ, ನಂಬ್ರ 18, ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:— ಶ್ರೀ ರಾಮಾ ಸ್ವೀಶನರಿ ಹೌಸ್, ಶ್ರೀ ರಾಮು ಪೇಟೆ, ಕಾಸರಗೋಡು. ಡಾ। ಶ್ರೀನಿವಾಸ ಪೈ, ಪುತ್ತೂರು. ಮುಲ್ಲರಪೆಟೆನ್ ಬ್ರದರ್ಸ್, 91, ಚಿಕ್ಕಪೇಟೆ, ಬೆಂಗಳೂರು ಸಿಟಿ. ಮೆಸರ್ಸ್ ಕಾಮತ್ ಎಂಡ್ ಕೊ., ವಿಟ್ಠಲ ಭ್ಯಾ ಪಟೇಲ್ ರೋಡ್, ಕುಂಬಾಯಿ. ದಿ ವೆಂಕಟಿ ಹೋಲ್, ಮಡಿಕೇರಿ, ಕೂರ್ಗ್. ರಾವ್ ಫಾರ್ಮೆಸಿ, ಸಾಗರ.

ವಿಜ್ಞಾನ ವಿಷಯ

'ವಿಜ್ಞಾನಿ.'

ನೂರು ವರ್ಷದ ಮೇಲೆ.

ಈ ವಿಜ್ಞಾನಯುಗದಲ್ಲಿ ವೈಜ್ಞಾನಿಕ ಸಾಧನಗಳು ಉನ್ನತಿ ಹೊಂದುತ್ತಿರುವ ಕಾಲದಲ್ಲಿ ವೈಜ್ಞಾನಿಕರ ಜೀವನವು ಇನ್ನು ನೂರು ವರ್ಷದ ಮೇಲೆ ಯಾವ ರೀತಿಯಾದೀತೆಂದು ಈಗ ಬರೆದರೆ ಅದು ಆಲ್ಲಾವುದ್ದೀನನ ದೀಪದಂತೆ ಅಶ್ಚರ್ಯಕರವಾಗಿ ಕಂಡೀತು. ಫ್ರೆಂಚ್ ಪತ್ರಿಕೆಯಾದ 'ಕಾಂದೀಬಿ'ನಲ್ಲಿ ಒಬ್ಬ ಲೇಖಕನು ಹೀಗೆ ಬರೆದಿದ್ದಾನೆ-ವರ್ತಮಾನಕಾಲದ ವೈಜ್ಞಾನಿಕ ಆವಿಷ್ಕಾರಗಳ ಉತ್ತರೋತ್ತರ ಪ್ರಗತಿಯಿಂದ ಭವಿಷ್ಯದ ಆವಿಷ್ಕಾರಗಳ ರೂಪವು ಹೇಗಿದ್ದೀತೆಂದು ವಿಜ್ಞಾನವೇತ್ತರು ಯೋಚಿಸಿ ನಿಶ್ಚಯಿಸುತ್ತಾರೋ ಆ ರೂಪದಲ್ಲಿ ಗೃಹ ನಿರ್ಮಾಣಕಾರ್ಯವನ್ನು ಈ ರೀತಿ ವಿವರಿಸುತ್ತಾರೆ. ಮುಂದಿನ ಕಾಲದ ಮನೆಗಳ ಗೋಡೆ ನೆಲಗಳು ಇಟ್ಟಿಗೆ, ಸಿಮೆಂಟು, ಕಲ್ಲುಗಳಿಂದ ರಚಿತವಾಗದೆ ಅತಿ ತೆಳುವಾದ, ವಜ್ರಕ್ಕಿಂತ ಕಠಿಣವಾದ ಪಾರದರ್ಶಕ ಕನ್ನಡಿಗಳಿಂದ ರಚಿತವಾದುವು. ಬೆಳಕು ಹೆಚ್ಚು ಬೇಡವಾದರೆ ಅಪಾರದರ್ಶಕ ಕನ್ನಡಿಗಳನ್ನುಪಯೋಗಿಸಬರುವುದು. ಕೋಣೆಗಳನ್ನು ಮಾಡಲಿಕ್ಕೆ ಅಡ್ಡ ಹಾಕಿದ ಗೋಡೆಗಳನ್ನು ವಿದ್ಯುತ್ತಿನ ಸಹಾಯದಿಂದ ಬೇಕಾದಾಗ ಬೇಕಾದಲ್ಲಿ ತಿರುಗಿಸಬರುವುದು. ಈ ರೀತಿಯ ಮನೆಗಳಿಗೆ ಗಾಳಿ, ನೀರು, ಬೆಂಕಿಗಳ ಭಯವಿಲ್ಲ. ಆಚೆ ಕೋಣೆಯಲ್ಲಾಗುವ ಶಬ್ದ ಈಚೆ ಕೋಣೆಗೆ ಕೇಳಿಸಲಾರದು. ಇದರಿಂದ ತುಂಬಾ ಶಬ್ದವಾಗುತ್ತಿರುವ ನಗರಗಳಲ್ಲಿ ಕೂಡ ಶಾಂತತೆಯಿಂದ ಜೀವನ ಕಳೆಯಬಹುದು.

ಭವಿಷ್ಯತ್ತಿನ ಉದ್ಯಾನಗಳು ಸುತ್ತಲೂ ಕನ್ನಡಿಗಳಿಂದ ಆವೃತವಾಗಿ ಶೀತಕಾಲದಲ್ಲಿ ತುಂಬ ಬರ್ಫ ಬಿದ್ದು ಗಿಡಗಳೆಲ್ಲಾ ಬತ್ತಲೆಯಾದಾಗ ಕೂಡ ಒಳಗೆ ಫಲಪುಷ್ಪಗಳಿಂದ ಸುಂದರವಾಗಿ ಶೋಭಿಸಿಯಾವು. ಏಲಾಸಿಗಳು ಅಂತಹ ಉದ್ಯಾನಗಳಲ್ಲಿ ಕುಳಿತು ಶೀತಬಾಧೆಯಿಲ್ಲದೆ ಸುಖವಾಗಿ ಕಾಲಯಾಪನೆ ಮಾಡಬಹುದು. ಉದ್ಯಾನವನ್ನು ಎಲ್ಲಾ ಕಡೆಗಳಿಂದ ಮುಚ್ಚಿದರೂ ವೈಜ್ಞಾನಿಕ ಸಾಧನೆಗಳಿಂದ ಆಕ್ಸಿಜನ್ ವಾಯುವನ್ನು ತಯಾರಿಸಿ ಶುದ್ಧವಾಯುಸಂಚಾರವನ್ನುಂಟುಮಾಡಲಾಗುತ್ತದೆ. ಮಲಗುವ ಕೋಣೆಗಳಲ್ಲಿ ಚಳಿಗಾಲದಲ್ಲಿ ಅಗ್ನಿಷ್ಟಿಕೆಗಳ ಸಹಾಯವಿಲ್ಲದೆ ಸಾಕಷ್ಟು ಬಿಸಿಯಿರುವಂತೆ ಮಾಡಬರುತ್ತದೆ. ಬಾಗಲು ತೆರೆಯಲಿಕ್ಕೆ ಹಾಕಲಿಕ್ಕೆ ಕೈಯಿಂದ ಮುಟ್ಟಬೇಕಾಗಿಲ್ಲ, ಫೋಟೋ ಇಲೆಕ್ಟ್ರಿಕ್ ಸೆಲ್ಲಿನ ಮುಂದೆ ಕೈಯಾಡಿಸಿದರೆ ಸಾಕು, ಆಲಿಬಾಬನ ಕಳ್ಳರ ಹಣದ ಕೋಣೆಯಂತೆ ತಾನಾಗಿಯೇ ಬಾಗಿಲು ತೆರೆಯುವುದು. ಸ್ನಾನಕ್ಕೆ ನೀರು ಮತ್ತು ಸಾಬೂನುಗಳ ಅಗತ್ಯವಿರಲಾರದು. ಸ್ನಾನಕ್ಕೆ ಯಂತ್ರಗಳು ನಿರ್ಮಾಣವಾದಾವು. ನೀರಿನ ಕೆಲಸವನ್ನು ಗಾಳಿ ಮಾಡೀತು.

ಭವಿಷ್ಯತ್ತಿನ ಸಂಸಾರದಲ್ಲಿ ಸಂತೋಷ ಕೊಟಗಳಲ್ಲಿ ಸಂಗೀತಗಾರರನ್ನೋ ಆಟಗಾರರನ್ನೋ ದೂರದಿಂದ ತರಿಸುವ ಆವಶ್ಯಕತೆಯಿರಲಾರದು ಟೆಲಿವೀಜನಿನ ಸಹಾಯದಿಂದ ಎಲ್ಲವನ್ನೂ ಅದು ನಡೆಯುವಲ್ಲಿಂದಲೇ ತಾವು ಕುಳಿತಲ್ಲೇ ನೋಡಬಹುದು.

ವಾಯುಯಾನವು ಭೂಮಿಯ ಮೇಲೆ ಗಂಟೆಗೆ ೯೦೦ ನೂರು ಮೈಲು ವೇಗದಲ್ಲಿಯೂ ಸಮುದ್ರದ ಮೇಲೆ ಸಾವಿರ ಮೈಲು ವೇಗದಲ್ಲಿಯೂ ಹಾರಾಡೀತು. ಭೂವಿಯಿಂದ ೫೦ ಸಾವಿರ ಫೀಟು ಎತ್ತರದ ವರೆಗೆ ಸರೂತ ಹಾರುವ ಶಕ್ತಿಯು ವಾಯುಯಾನಕ್ಕೆ ಬಂದೀತು.

ಇನ್ನು ಮೋಟಾರುಗಳ ವಿಷಯ. ಮೋಟರುಗಳು ನೆಲದ ಮೇಲೆ ಮೋಟರುಗಳಾಗಿಯೂ ಆಕಾಶದಲ್ಲಿ ವಿಮಾನಗಳಾಗಿಯೂ ಸಮುದ್ರದಲ್ಲಿ ಸ್ಟೀಮರುಗಳಾಗಿಯೂ ಪರಿಣಮಿಸುವಂತೆ ತಯಾರಾಗುವುವು.

ಭವಿಷ್ಯತ್ಕಾಲದಲ್ಲಿ ರಾತ್ರಿ ದೀಪ ಹಚ್ಚುವ ಕೆಲಸವಿರಲಾರದು. ಯಂತ್ರಗಳು ಹಗಲಿನ ಸೂರ್ಯಕಿರಣಗಳನ್ನು ಸೆಳೆದುಕೊಂಡು ರಾತ್ರಿಯಾದ ಕೂಡಲೇ ಸಾವಿರಾರು ಸೂರ್ಯರನ್ನುಂಟುಮಾಡಿಯಾವು.

ಕಾಯಿಪಲ್ಯಗಳನ್ನೂ ಆಹಾರಸಾಮಗ್ರಿಗಳನ್ನೂ ಪ್ರಯೋಗಶಾಲೆಗಳು ರಾಸಾಯನಿಕ ರೀತಿಯಿಂದ ತಯಾರಿಸಿಯಾವು. ಅಂತೂ ಬೇಕಾದ ವಸ್ತುಗಳೆಲ್ಲಾ ವೈಜ್ಞಾನಿಕ ಜಗತ್ತಿನಲ್ಲಿ ಸೃಷ್ಟಿಯಾಗಬಹುದು.

ಮೇಡಂ ಮೇರಿ ಕ್ಯೂರಿ.

ಭಾಗ್ಯವು ಪುರುಷರನ್ನು ಮಾತ್ರ ಅವಲಂಬಿಸಿರುವುದಲ್ಲ, ಭಾಗ್ಯದೇವತೆಗೆ ತನ್ನ ಅಕ್ಕ ತಂಗಿಯರಾದ ಸ್ತ್ರೀಯರಲ್ಲಿಯೂ ಪ್ರೀತಿಯಿದೆ. ಅವಳ ಅನುಗ್ರಹದಿಂದ ಸ್ತ್ರೀಯರು ಕೂಡ ಉಚ್ಚ ಪದವಿಗಳನ್ನು ಹೊಂದಿ ಲೋಕಮಾತೆಯರಾಗಿ ಮೆರೆಯುತ್ತಾರೆ. ತನ್ನ ಸಾಮರ್ಥ್ಯದಿಂದ ಭಾಗ್ಯದೇವತೆಯನ್ನು ಒಲಿಸಿ ಲೋಕೋತ್ತರವಾದ ಆವಿಷ್ಕಾರವನ್ನು ಮಾಡಿ ಪ್ರಪಂಚಕ್ಕೇ ಒಂದು ಮಹತ್ತಾದ ವರದಾನವಿತ್ತ ಆ ಮಾತೃಶಕ್ತಿಸ್ವರೂಪಿಣಿಯಾದ ಮೇಡಂ ಮೇರಿ ಕ್ಯೂರಿಯು ಒಬ್ಬಳು.

೧೮೬೭ರಲ್ಲಿ ಪೋಲೆಂಡಿನಲ್ಲಿ ಮೇಡಂ ಕ್ಯೂರಿಯು ಜನ್ಮವೆತ್ತಿದಳು. ಇವಳ ತಂದೆ ಗಣಿತ ಶಾಸ್ತ್ರದ ಅಧ್ಯಾಪಕನು. ತಾಯಿ ಹೆಣ್ಮಕ್ಕಳ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದಳು. ಕ್ಯೂರಿಯು ಒಂಭತ್ತು ವರ್ಷದವಳಾದಾಗ ಅವಳ ತಾಯಿ ಇಹಲೋಕವನ್ನು ಬಿಟ್ಟಳು. ಹುಡುಗಿಯು ನಾಲ್ಕು ವರ್ಷದವಳಾದಾಗಲೇ ಓದು ಬರಹವನ್ನಭ್ಯಾಸಮಾಡಿದಳು.

ಹದಿನೈದು ವರ್ಷಗಳ ಪ್ರಾಯದ ವರೆಗೆ ಸಾಲೆಯಲ್ಲಿ ಕಲಿತು ಮೇರಿಯು ಸಾಲೆ ಬಿಟ್ಟು ಪೇರಿಸಿನ ಒಂದು ಕುಲೀನ ಕುಟುಂಬದಲ್ಲಿ 'ಆಯ'ಳಾಗಿ ಸೇರಿದಳು. ಮನೆಯ ಆರ್ಥಿಕ ಸ್ಥಿತಿಯಿಂದ ಇವಳು ಈ ಕೆಲಸವನ್ನು ವಹಿಸಬೇಕಾಯಿತು. ಇದು ಅವಳ ಯೋಗ್ಯತೆಯಿಂದ ಕಡಮೆ ಕೆಲಸವೆಂಬುದನ್ನು ಮರೆಯದಿರಿ. ಅವಳಿಗೆ ವಿದ್ಯಾಭ್ಯಾಸವನ್ನು ಮುಂದುವರಿಸುವುದರಲ್ಲೇ ಆಸಕ್ತಿಯಿತ್ತು. ಆದ್ದರಿಂದ ಅವಳು ಮೊದಲಿನ ಕೆಲಸ ಬಿಟ್ಟು ಊರಿಗೆ ಹಿಂದಿರುಗಿ ಒಂದು ಫಿಸಿಕಲ್ ಲೆಬೋರೇಟರಿಯಲ್ಲಿ ಕೆಲಸಕ್ಕೆ ನಿಂತಳು.

೧೮೯೧ರಲ್ಲಿ ಪುನಃ ತನ್ನೆ ವಿದ್ಯಾಭ್ಯಾಸವನ್ನು ಮುಂದರಿಸಲಿಕ್ಕಾಗಿ ಪೇರೀಸಿಗೆ ಬಂದಳು. ಅಲ್ಲಿ ವಿದ್ಯಾರ್ಥಿನಿಯಾಗಿ ತನ್ನ ಆಹಾರವನ್ನು ತಾನೇ ತಯಾರಿಸುತ್ತಾ ಅಭ್ಯಾಸವನ್ನು ಮುಂದರಿಸಿದಳು. ಎರಡು ವರ್ಷಗಳ ಅಭ್ಯಾಸ ಮಾಡಿ ಮೂರನೇ ವರ್ಷದಲ್ಲಿ ಗಣಿತಶಾಸ್ತ್ರದಲ್ಲಿ 'ಡಿಪ್ಲೊಮಾ'ವನ್ನು ಪಡೆದಳು. ಅನಂತರ ತನ್ನ ಜನ್ಮಭೂಮಿಯಾದ ಪೋಲೆಂಡಿಗೆ ಹಿಂದಿರುಗಿದಳು. ಆದರೆ ಪೋಲೆಂಡಿನಲ್ಲಿ ಆಕೆಗೆ ಕೆಲಸ ದೊರಕಲಿಲ್ಲ. ಪುನಃ ಪೇರೀಸಿಗೇ ಬಂದು ಅಲ್ಲಿನ ಯುನಿವರ್ಸಿಟಿಯಲ್ಲಿ ಕೆಲಸ ಪಡೆದಳು. ಅದೇ ವಿದ್ಯಾಲಯದಲ್ಲಿ ಪಯರೇ ಕ್ಯೂರಿ ಎಂಬವನು ಅಧ್ಯಾಪಕವೃತ್ತಿಯಲ್ಲಿದ್ದನು. ಇಬ್ಬರ ಐಚ್ಛಿಕ ವಿಷಯವೂ ಒಂದೇಯಾಗಿದ್ದು ಇಬ್ಬರೂ ವೈಜ್ಞಾನಿಕ ಅನುಸಂಧಾನಗಳಲ್ಲಿ ತತ್ಪರರಾಗಿದ್ದವರು. ಇಬ್ಬರೂ ಜೊಟ್ಟಿಗೆ ಕೆಲಸ ಮಾಡತೊಡಗಿದರು. ಹೀಗಿರುವಾಗ ಇವರ್ಇಳಗೆ ಪ್ರೇಮ ಮೊಳೆಯತೊಡಗಿತು. ಎರಡು ವರ್ಷಗಳ ಅನಂತರ ಮೇರಿಯೊಡನೆ ಕ್ಯೂರಿಗೆ ವಿವಾಹನಾಯಿತು. ವಿವಾಹಾನಂತರ ಆ ದಂಪತಿಗಳ ಜೀವನವು ಪವಿತ್ರವೂ ಸುಖಮಯವೂ ಆಗಿ ಉಜ್ವಲ ಭವಿಷ್ಯದ ಕಡೆಗೆ ಮುಂದರಿಯಿತು. ಅವರೊಳಗಿನ ಪ್ರೇಮಬಂಧವು ಅಗಾಧವಾದುದು. ಪಯುರೇ ಕ್ಯೂರಿಗೆ ವಂದನೆಯ ಮೊದಲು ಇವಳಿಲ್ಲಿಯಾದರೂ ತನ್ನ ಕೆಲಸಗಳಿಗೆ ಅಡ್ಡಿಯಾದಾಳೋ ಎಂಬ ಭಾವನೆಯಿತ್ತು. ಮದುವೆಯ ಅನಂತರ ಆ ಸಂಶಯವು ದೂರವಾಯಿತು. ತನ್ನ ಹೆಂಡತಿಯನ್ನು ತನ್ನ ಸಹಾಯಕ್ಕಾಗಿ ದೇವರು ಕಳುಹಿದನೆಂದು ಆತನು ಹೇಳುತ್ತಿದ್ದನು.

ಮದುವೆಯಾದ ಮೇಲೂ ಅವರ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರಲಿಲ್ಲ. ಅವರ ಪ್ರಯೋಗಶಾಲೆಯು ಬಹಳ ಸಣ್ಣ ಪ್ರಮಾಣದಲ್ಲಿತ್ತು. ಬೇಕಾದಷ್ಟು ಸಾಧನಸಂಪತ್ತಿಗಳಿರಲಿಲ್ಲ. ಆದರೆ ಇದೇ ಸಣ್ಣ ಪ್ರಯೋಗಶಾಲೆಯಲ್ಲೇ ಕ್ಯೂರಿಯು ತನ್ನ ಪರಿಶ್ರಮದಿಂದ ಲೋಕೋತ್ತರ ಸಂಪತ್ತುಳ್ಳ 'ರೇಡಿಯಂ'ವನ್ನು ಕಂಡುಹಿಡಿದು ಲೋಕಕ್ಕೊಂದು ದೊಡ್ಡ ವರದಾನ ಮಾಡಿದಳು. ಇವಳ ಕೆಲಸದಲ್ಲಿ ಗಂಡನೂ ತುಂಬಾ ಪರಿಶ್ರಮಪಟ್ಟಿದ್ದಾನೆ. ರೇಡಿಯಂ ಮಿನ ಆವಿಷ್ಕಾರಕ್ಕಾಗಿ ಅವರಿಗೆ ನೋಬೆಲ್ ಪ್ರೈಸ್ ದೊರಕಿತು.

ರೇಡಿಯಂ ಬಹು ಬೆಲೆಯುಳ್ಳ ವಸ್ತುವೆಂದೂ ಅದನ್ನು ದೊರಕಿಸಲಿಕ್ಕೆ ಬಹಳ ಕಷ್ಟ ಉಂಟೆಂದೂ ಅದರಿಂದ ಅನೇಕ ಕಾರ್ಯಗಳಾಗುತ್ತವೆಂದೂ ವಾಚಕರಿಗೆ ಗೊತ್ತಿರಬಹುದು.

ಆ ದಂಪತಿಗಳ ವೈವಾಹಿಕ ಜೀವನವು ಹನ್ನೆರಡು ವರ್ಷಗಳ ಕಾಲ ಸುಖವಾಗಿ ನಡೆಯಿತು. ಈ ಕಾಲದಲ್ಲಿ ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರು. ಆದರೆ ೧೯೦೬ರಲ್ಲಿ ಮೇರಿಯನ್ನು ಆಕೆಯ ಸಹಚರನು ಬಿಟ್ಟು ಇಹಲೋಕದಿಂದ ಮರೆಯಾದನು. ಪತಿಯ ಮರಣಾನಂತರ ಮೇರಿಯು ಪುನಃ ಸಂಶೋಧನೆಯಲ್ಲಿ ಇತೋಪ್ಯತಿಶಯವಾದ ಪ್ರಯತ್ನದಿಂದ ಕೆಲಸ ಮಾಡತೊಡಗಿದಳು. ಪುನಃ ಮತ್ತೊಮ್ಮೆ 'ರಸತಂತ್ರ'ದಲ್ಲಿ ನೋಬೆಲ್ ಪ್ರೈಸನ್ನು ಪಡೆದಳು.

ರೇಡಿಯಂಮಿನಂತಹ ಲೋಕೋತ್ತರ ಸಂಪತ್ತನ್ನು ಕಂಡುಹಿಡಿದ ಕ್ಯೂರಿಯನ್ನು ಅನೇಕ ಜನಾಂಗಗಳು ತಮ್ಮಲ್ಲಿಗೆ ಕರೆಸಿಕೊಂಡು ಸಮ್ಮಾನ ಮಾಡಿದುವು. ಆಕೆಯ ಆರ್ಥಿಕ ಸ್ಥಿತಿಯು ಉತ್ತಮ ಸ್ಥಿತಿಗೆ ಬಂದರೂ ಅವಳು ಸಾದಾ ಜೀವನವನ್ನೇ ಸಾಗಿಸಿದ್ದಳು. ಜೀವನದ ಅಂತ್ಯದ ವರೆಗೂ ಫ್ರಾನ್ಸಿನ ವಿಜ್ಞಾನಪರಿಶೋಧನಾಲಯದ ಅಧ್ಯಕ್ಷೆಯಾಗಿದ್ದ ಕ್ಯೂರಿಯು ಎರಡು ವರ್ಷಗಳ ಮೊದಲು ತನ್ನ ದೇಹವನ್ನು ಬಿಟ್ಟಳು.

ಹಾಸ್ಯಾರ್ಣವ.

ಗ್ರಂಥಕರ್ತೃ:—'ಹೇಗೂ, ಇಷ್ಟೂ ದಿನ ಕಾದು ಕಾದು ನಿರಾಶನಾದ ಬಳಿಕ ನನ್ನ ಒಂದು ಪುಸ್ತಕಕ್ಕಾದರೂ ಹಣ ದೊರೆತಂತಾಯಿತು!'

ಮಿತ್ರ:—'ಅದೇನು? ಯಾವ ಪ್ರಕಾಶಕರು ನಿನ್ನ ಗ್ರಂಥದ ಸ್ವಾತಂತ್ರ್ಯವನ್ನು ಕೊಂಡು ಕೊಂಡರು?'

ಗ್ರಂಥ:—'ಕೊಂಡುಕೊಂಡ ಮಾತಲ್ಲ. ಕಳುಹಿಸಿದ ನನ್ನ ಹಸ್ತಪ್ರತಿಯು ಎಲ್ಲೋ ಕೈತಪ್ಪಿ ಹೋದುದರಿಂದ, ಏನು ಪ್ರತಿಫಲ ಬೇಡುವಿರೆಂದು ನನ್ನನ್ನು ಬರೆದು ಕೇಳಿದ್ದಾರೆ.'

* * * *

ಹಿರಿಯ:—'ಏನೋ ಮಗು! ಇಸ್ಕೂಲಿಗೆ ಹೋಗುವ್ವದಕ್ಕೆ ನಿನಗೆ ಸಂತೋಷವಾಗುತ್ತದೆಯೇ?'

ಕಿರಿಯ:—'ಸಂತೋಷವೇನು ಬಂತು! ಕೆಲಸವೆಲ್ಲ ನಾವು, ಮಕ್ಕಳು, ಮಾಡಬೇಕಂತೆ! ಸಂಬಳ ಮಾತ್ರ ಮಾಸ್ತರಿಗಂತೆ!'

* * * *

ತಂದೆ:—'ಏನೋ ನಾಣಾ! ಕ್ಲಾಸಿನ ಕೊನೆಗೆ ಹಾಕಿದ್ದಾರಂತಲ್ಲೋ ನಿನ್ನ?'

ನಾಣ:—'ಎಲ್ಲಿ ಕುಂತರೇನಯ್ಯ! ಎಲ್ಲರಿಗೂ ಒಂದೇ ಪಾಠ ಹೇಳಿಕೊಡುತ್ತಾರೆ.'

* * * *

ಚಿಕ್ಕಯ್ಯ: (ಚಿಕ್ಕ+ಕಯ್ಯ)—'ಶೆಟ್ರೇ! ಈ ಬನಾರಸು ಸೀರೆಗೆ ಬೆಲೆಯೇನು?'

ಶೆಟ್ಟಿ:—'ನಗದಾದರೆ ನಲವತ್ತು ರೂಪಾಯಿ. ಕ್ರಡವಾದರೆ ಅರುವತ್ತು ರೂಪಾಯಿ; ಮೊದಲು ನಲವತ್ತು, ಈಗಲೇ ಕೊಟ್ಟು ಹಿಂದಿನಿಂದ ಎರಡು ಕಂತಾಗಿ ಇಪ್ಪತ್ತು ಕೊಡಬೇಕು.'

* * * *

ಭಿಕ್ಷುಕ:—'ಇದಕ್ಕೂ ಒಳ್ಳೇಯ ದಿನಗಳನ್ನು ನಾನು ಮೊದಲು ನೋಡಿದವನು, ಮಹಾಪ್ರಭು!'

ಕವಡಿ ಚುಂಬಕ:—'ಇರಬಹುದು. ಹವಾಗುಣವನ್ನು ಕುರಿತು ಮಾತನಾಡುವುದಕ್ಕೆ ನನಗೆ ಈಗ ಹೊತ್ತಿಲ್ಲ. ಹೋಗು.'

ಕೋರ್ಟು ಕಚೇರಿಗಳು, ಶಾಲಾ ಕೊಲೇಜುಗಳು, ಬೋರ್ಡು ಮುನಿಸಿಪಾಲಿಟಿಗಳು, ರೈತ, ವರ್ತಕರು

ಇತ್ಯಾದಿ ಎಲ್ಲಾ ಇಲಾಖೆಯವರೂ ಉಪಯೋಗಿಸುತ್ತಿರುವರು.

ಅಂದ ಮೇಲೆ ನೀವೂ ನಿಮ್ಮ ಸೌಕರ್ಯಕ್ಕಾಗಿ ನಮ್ಮ 'ಯುಟಿಲಿಟಿ' ಸ್ಟ್ಯಾಂಪನ್ನು ಏಕೆ ಉಪಯೋಗಿಸಬಾರದು? ಈ ಒಂದೇ ರಬ್ಬರು ಮೊಹರಿನಿಂದ ನಿಮ್ಮ ಎಲ್ಲಾ ಕೆಲಸಗಳೂ ಸುಲಭವಾಗಿ ಆಗುವುವು.

ದಿ ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,

ವಿವಿಧ ರಬ್ಬರು ಮೊಹರುಗಳನ್ನೂ, ಕೆತ್ತನೆ ಕೆಲಸಗಳನ್ನೂ, ಪೈಂಟಿಂಗನ್ನೂ ಮಾಡುವವರು,

ಬಲ್ಮಠ ರಸ್ತೆ, ಮಂಗಳೂರು.

ನಾವು ಫೌಂಟನ್ ಪೆನ್ನುಗಳನ್ನು ರಿಪೇರಿ ಮಾಡಿಕೊಡುತ್ತೇವೆ.

ಜೈ ವಿಜಯ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಹೆಡ್ ಆಫೀಸು:—16, ಲಿಂಗಬೆಟ್ಟಿ ಸ್ಟ್ರೀಟ್, ಮದ್ರಾಸ್ಸು.

ಗವರ್ನಮೆಂಟ್ ಜವಾಬ್ದಾರಿಯನ್ನು ಪಡೆದು, ಭದ್ರವಾದ ಆಡಳಿತೆಗೆ ಒಳಪಟ್ಟು ಸರ್ವರಿಗೂ ಅನುಕೂಲವಾಗುವಂತೆ ರೂಪಾಯಿ 250ರ ಪೋಲಿಸಿಯನ್ನು ಸಹ ಕೊಡುವ ಮತ್ತು ಅತ್ಯಾಧುನಿಕ ವಿಮಾಶಾಸ್ತ್ರಕ್ಕೆ ಅನುಸಾರವಾದ, ನಿಜವಾದ ಜನಸೇವನಾ ವಿಮಾ ಕಂಪೆನಿಯೆಂದರೆ ಇದಾಗಿರುತ್ತದೆ. ಅದ್ವಿತೀಯವಾದೀ ವಿಮಾ ಸಂಸ್ಥೆಯು ಸಾವಿರಕ್ಕೆ ಎಂಡೋಮೆಂಟ್ ಟರ್ಮಿನ ಮೇಲೆ ರೂ. 50ರ ಬೋನಸ್ಸನ್ನು ಕೊಡುವುದು

ಬೇಕಾಗಿದ್ದಾರೆ

ಕಾರ್ಯದಕ್ಷತೆಯುಳ್ಳ ಯೋಗ್ಯರು ನಮ್ಮ ಕಂಪೆನಿಯ ಪ್ರತಿನಿಧಿಗಳಾಗಿ ಕೆಲಸಮಾಡಲು ಪ್ರತಿ ತಾಲೂಕುಗಳಲ್ಲಿಯೂ ಕೂಡಲೇ ಬೇಕಾಗಿದ್ದಾರೆ ದಕ್ಷತೆಯ ಮೇಲೆ ತಿಂಗಳಿಗೆ ರೂ. 60 ಸಂಬಳ ಕೊಡಲಾಗುವುದು.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

B. S. RAI, DT. ORGANISER,
J. V. I. COY., LTD., FARENGIPET, S. K.

OMNIUM-GATHERUM.

District Board Budget for 1936-37.

I have carefully read the criticisms of your correspondent in your esteemed weekly in the latest as also in the former ones.

While I agree with almost what all he says, your cerrespondent seems to have made some proposals, which are absurd on their very face. I wonder, whether this gentleman has ever cared to go beyond Coondapoor in his life, and I do not understand how and why he suggests the District Board to close the Byndoor Board Middle School. As one who has been closely following the progress of this school, I strongly depreciate any idea of closing this school. The strength of this school is more than what is usually expected of a middle school and for miles around, there is not another secondary school except a High school at Coondapoor. I also know it for a fact that many students from this middle school, have continued their studies in High Schools either at Coondapoor, or at other places in this District. A Middle school for Byndoor is an absolute necessity and any suggestions by arm-chair critics of Mangalore to close this school, should be ignored by the District Board. I have travelled extensively throughout our District every month for the past one year, and have seen lot of Elementary Schools, which, if properly inspected, will be found to be superfluous, in many taluks.

Has it occurred to our Dr. P. G. Achar of Udipi to suggest closing some unnecessary Elementary schools in and around Udipi? If he just goes into this matter deeply and impartially, we will find that there are at least two privately managed Elementtary schools in Udipi which are superfluous and amounts given to which as grants are a mere waste. Does he know, as the unopposed member for Udipi circle, that the so called managers of these privately managed schools rareley go to their schools even thrice a week?

If every member of the District Board scrupulously keeps up his promises to the rate-payers and pays more attention to what is going on in his constituency, each can suggest many ways of cutting down unnecessary expenditure in his area, and thus prove useful members of the District Board.

I shall deal with your correspondent's other criticisms in your next issue.

V. D. H.

Proceedings of the meeting of the King George V Memorial Fund held at 11 A. M. on wednesday the 3rd June 1936.

1. Proposed by Mr. Venkatesh Pai and seconded by Mr. B. Madhava Rao that Mr. Srinivasa Baliga be taken as a member of the Committee. Carried Unanimously.

2. Resolved that 22nd October '36 be provisionally fixed for the celebration of the flag day for collections to the fund.

3. Resolved that the Central Committee Madras be thanked for allotting to this committee 8000 flags free of cost for the flag day celebration.

4. Resolved that the undermentioned ladies and gentlemen be appointed members of the Sub Committee to arrange for the flag day celebration at Mangalore.

Mr. C. R. Charsley; Mr. M. Krishna Nambiar; Mrs. M. S. Sreshta; Mrs. T. M. Aranha; Mrs. G. Nery; Mr. Smye; Mr. B. Fernandez; Mr. A. B. Shetty; Mr. U. Kannappa; Mr. U. C. S. Bhatt; Mr. M. S. Sreshta; Mr. T. M. Aranha; Principal of the Government College; District Board President; Chairman, Municipal Council, Mangalore; Commissioner, Mangalore Municipality; Lady Superintendent, Government Training School for Women; Principal of the St. Agnes College; The Head Mistress, St. Annes High School; The Head Mistress, Lady Hill School; The Head Master, Ganapathi High School; The Head Master, Canara High School; The Head Master, Mission High School; District Educational Officer of the Dt. Board; Mr. M. A. Talwar; Mr. M. Kunjammu; Mrs. J. C. Meyer; Mrs. P. Ranganatha Punja; Mr. Krauss of the Basel Mission Press; Dr. Girdhar Rao; District Medical Officer.

5. Resolved that the Hon. Joint Secretaries of the Provincial Committee be requested to arrange for the publication in the Madras papers, the names of ladies and gentlemen who have subscribed and who may hereafter subscribe 1 rupee and more.

6. Resolved that M. R. Ry. Dewan Bahadur B. Mahabala Hegde Avl., be thanked for his having arranged to remit so far Rs. 531—14—0 and that he be requested to continue to make as far as possible similar remittances till the fund is closed.

7. Resolved that Mr. Padmanabha Pillai, D. F. O., S. Kanara North, be thanked for his having arranged to remit so far a sum of Rs. 46—2—0 and for his kindness in promising to make further remittances.

8. Resolved that Rev. Dr. J. C. Meyer be thanked for his kind remittance of Rs. 21/— this day.

9. Resolved that Mr. Kunjammu Sahed be thanked for his kind remittance of Rs. 36/— this day.

10. Resolved that Mrs. Nery be thanked for her kind remittance of Rs. 9/— this day.

11. Resolved that Mr. B. Madhava Rao, T. D. C., be thanked for his kind remittance of Rs. 24-8-0 this day.

12. Resolved that the Hony. Joint Secretaries of the Provincial Committee be informed that the 23rd June will not suit this District for a flag day.

13. Resolved that the next meeting be held at 11 A. M. on 1-7-'36 in the Collector's Office.

Mangalore, 3—6—'36. } *(Sd)* **M. Humayun,** Collector & President, King George V Memorial Fund.

ವಿವಿಧ ವೃತ್ತ

ಹಿಂದೂಸ್ಥಾನದ ಜನರಲ್ಲಿ ಪರಿಶೋಧನೆಯ ಚಾತುರ್ಯವೂ ಕಾರ್ಯೋತ್ಸಾಹವೂ, ಇದ್ದವರೆಗೂ, ಉಂಟಾಗದೆ ಇರುವುದರಿಂದಲೇ, ಉತ್ತಮೋತ್ತಮವಾಗಿ ಉಪಯೋಗಿಸಲ್ಪಡಬಹುದಾದ ಎಷ್ಟೋ ಆಹಾರಪದಾರ್ಥಗಳು ನಿರರ್ಥಕವಾಗಿ ನಮ್ಮಲ್ಲಿಯೇ ನಷ್ಟವಾಗುತ್ತಲಿವೆ. ಇವುಗಳೊಳಗೆ, ತೆಂಗಿನಕಾಯಿಯ ಹಾಲು (ನೀರು) ಒಂದಾಗಿದೆ. ಬೇಸಗೆಯ ದಿನಗಳಲ್ಲಿ, ಹಿಂದೂಸ್ಥಾನದ ಜನರು,–ಅದರಲ್ಲಿಯೂ ನಾಡುಗರು,–ಸೀಯಾಳದ (ಎಳೆನೀರಿನ) ನೀರನ್ನು ವಿಶೇಷವಾಗಿ ಕುಡಿಯುವುದಕ್ಕೆ ಉಪಯೋಗಿಸುವರು. ಒಂದೆರಡು ಸೀಯಾಳಗಳನ್ನೂ ಅದರೊಳಗಿನ ಮೃದುವಾದ ಪದಾರ್ಥವ(ಬಳುಕ)ನ್ನೂ ತಿಂದು ಬಿಟ್ಟರೆ, ಆ ದಿನ ಬಡಜನರಿಗೆ ಪ್ರತ್ಯೇಕ ಆಹಾರವೇ ಬೇಕಾಗಿರುವುದಿಲ್ಲ. ಅಮೇರಿಕದ ಪ್ರೊಫೆಸರ್ ವಾನ್ ಸ್ಲ್ಯೂಕ್ (Van Slyke) ಎಂಬ ಪಂಡಿತರೊಬ್ಬರು ಸೀಯಾಳದ ಮತ್ತು ತೆಂಗಿನಕಾಯಿಯ ಹಾಲ (ನೀರ)ನ್ನು ಪೃಥಕ್ಕರಿಸಿ (analyse), ಅವುಗಳಲ್ಲಿ ಈ ಕೆಳಗಿನ ಪದಾರ್ಥಗಳು ಸೇರಿರುವಂತೆ ಕಂಡುಹಿಡಿದಿರುವರು:—

ಪದಾರ್ಥಗಳು.	ಸೀಯಾಳದ ನೀರು.	ತೆಂಗಿನ ಕಾಯಿ ನೀರು.
1. ಜಲ.	೯೪. ೩೭.	೯೧. ೨೩.
2. ರಕ್ಷೆ.	. ೬೧.	೧. ೦೬.
3. ಗ್ಲೂಕೋಸ್.	೩. ೯೭.	ಭಾಯೆ ಮಾತ್ರ.
4. ಶರ್ಕರೆ.	ಭಾಯೆ ಮಾತ್ರ	೪. ೪೩.
5. ಪ್ರೋಟೀಡುಗಳು.	. ೧೩.	. ೨೯.
6. ಫ್ಯಾಟ್ (ಕೊಬ್ಬು.)	. ೧೨.	. ೧೪.
	೯೯. ೨೦.	೯೭. ೧೪.

ಈ ಪೃಥಕ್ಕರಣದ ಮೇಲಿಂದ ನೋಡಲು,–ಸೀಯಾಳದ ಹಾಲಿನಲ್ಲಿ ಮಾನವದೇಹವನ್ನು ಸಂರಕ್ಷಿಸುವುದಕ್ಕೆ ಅತ್ಯಗತ್ಯವಾಗಿರುವ ಆಹಾರ ಪದಾರ್ಥಗಳಲ್ಲಿ ಇರಬೇಕಾಗಿರುವ ಎಲ್ಲಾ ಪದಾರ್ಥಗಳೂ ಇವೆಯೆಂದು ಕಂಡುಬರುತ್ತಿದೆ. ಸೀಯಾಳದ ನೀರಿಗಿಂತ, ಕಾಯಿ ಹಾಲೇ ವಿಶೇಷವಾಗಿ ನಿರರ್ಥಕವಾಗುತ್ತಲಿದೆ. ದಿವ್ಯವಾದ ಈ ನೀರನ್ನು, ಯಾವುದಾದರೂ ಉಪಾಯಗಳಿಂದ, ಯಥಾವಸ್ಥಿತವಾಗಿ ಇರಗೊಳಿಸುವ ವಿಧಾನವನ್ನು ಮಾತ್ರ, ನಮ್ಮಲ್ಲಿಯ ಯಾವ ನಾದರೂ ಶಾಸ್ತ್ರಜ್ಞನು ಕಂಡುಕೊಂಡನಾದರೆ, ನಮ್ಮಲ್ಲಿರುವ ಪೇಯಗಳೊಡನೆ, ಅತ್ಯುಪಯುಕ್ತವಾದ ಇನ್ನೊಂದು ನವೀನ ಪೇಯವನ್ನು ಕಲ್ಪಿಸಿಕೊಟ್ಟ ಕೀರ್ತಿಯು ಅಚಂದ್ರಾರ್ಕವಾಗಿರುವುದು.

ನಾಗರಿಕತೆಯು ಹೆಚ್ಚಿದಂತೆಲ್ಲಾ, ನೀರು ಬೆರೆಯಿಸದಿರುವ ಒಳ್ಳೆಯ ಹಾಲು ಈ ದೇಶದಲ್ಲಿ ಎಲ್ಲೆಲ್ಲಿಯೂ ದುರ್ಲಭವಾಗುತ್ತಲಿದೆ. ಇದಕ್ಕಾಗಿ, ವಿದೇಶದಲ್ಲಿ ತಯಾರಾಗುತ್ತಲಿರುವ ಗಟ್ಟಿಹಾಲ (condensed milk)ನ್ನು ಇಲ್ಲಿಯ ಅನೇಕರು ಉಪಯೋಗಿಸತೊಡಗಿರುವರು. ಈ ಹಾಲನ್ನು ಇಲ್ಲಿಯೇ ನಾವು ತಯಾರು ಮಾಡತಕ್ಕ ವಿಧಾನವನ್ನು ನಮ್ಮೊಬ್ಬನು ಈಗ ಲೀಗ ಕಂಡುಕೊಂಡಿರುವನು:—ಸೇಕಡಾ ೫೦ ರಂತೆ ಶುದ್ಧವಾಗಿರುವ ಹಾಲನ್ನು,—ಒಂದು ಪಾತ್ರೆಯಲ್ಲಿ ನೀರನ್ನಿಟ್ಟು, ಮರಳಿಸಿ, ಆ ನೀರು ಮರಳುತ್ತಿರುವಾಗ,—ಹಬೆಯಲ್ಲಿಟ್ಟು, ಅದರ ಸೆಕೆಯಿಂದ ಚೆನ್ನಾಗಿ ಕಾಯಿಸಬೇಕು. ಹೀಗೆ ಅದು ಕಾಯುತ್ತಲಿರುವಾಗ, ಒಂದು ಕಡ್ಡಿಯ ಕೊನೆಯಿಂದ ಅದನ್ನು ಕೆದಕುತ್ತಲಿದ್ದರೆ, ಅದು ಗಟ್ಟಿಯಾಗುತ್ತ ಬರುತ್ತಿದೆ. ಹೀಗೆ ಮಾಡುತ್ತಿರುವಾಗ, ಒಂದು ತೊಟ್ಟಾದರೂ ನೀರು ಅದರಲ್ಲಿ ಬೆರೆತುಹೋಗದಂತೆ ಚೆನ್ನಾಗಿ ನೋಡಿಕೊಳ್ಳುತ್ತಿರಬೇಕು. ೫೦ ಭಾಗವಿರುವ ಹಾಲು ೨೦ಕ್ಕೆ ಇಳಿಯುವ ವರೆಗೂ, ಇದೇ ರೀತಿಯಾಗಿ ಕಾಯಿಸುತ್ತಿದ್ದು, ಅನಂತರ ಪಾತ್ರೆಯನ್ನು ಈಚೆಗೆ ತೆಗೆದು, ತಣ್ಣೀರಿರುವ ಪಾತ್ರೆಯಲ್ಲಿಟ್ಟು, ತಣಿಯಿಸಬೇಕು. ಆಗಲೇ, ೨ ಭಾಗ ಬೋರಿಕ್ ದ್ರಾವಕವನ್ನು ಕೊಂಚ ಕಾದಿರುವ ಹಾಲಿನೊಂದಿಗೆ ಬೆರೆಯಿಸಿ, ಅದನ್ನು ಈ ಪಾತ್ರೆಯಲ್ಲಿ ಹುಯಿದುಬಿಟ್ಟು, ಅರ್ಧಘಂಟೆಯ ಪರ್ಯಂತವಾಗಿ ಈ ದ್ರಾವಕವನ್ನೂ ಹಾಲನ್ನೂ ಚೆನ್ನಾಗಿ ಕಲಕಿ, ಅವುಗಳು ಬೆರೆಯುವಂತೆ ಮಾಡಬೇಕು. ಆಗ, ಹಾಲು ಚೆನ್ನಾಗಿ ಗಟ್ಟಿಯಾಗುತ್ತಲೇ, ಅದನ್ನು ಗಾಳಿ ಹೋಗದ ಡಬ್ಬಿಗಳಲ್ಲಿ ತುಂಬಿ ಇರಿಸಬೇಕು.

R. M. B.

ವೈದ್ಯವಿಶಾರದ ಎಚ್. ತಿಮ್ಮಪ್ಪ ಪಂಡಿತ, ಪ್ರೊಪ್ರೈಟರ್.

ಆನಂದ ಚಂದ್ರೋದಯ ಆಯುರ್ವೇದಿಕ್ ಔಷಧಾಲಯ.

ಮಾರ್ಕೆಟ್ ರೋಡ್, ಹಂಪನಕಟ್ಟೆ, ಮಂಗಳೂರು.

ಸಚ್ಚಿದಾನಂದ ಚೂರ್ಣ.

ಎಲ್ಲಾ ತರದ ಪಿತ್ತರೋಗ, ಪಿತ್ತಪಾಂಡು, ಪಿತ್ತಕಾಮಿಲಾ ರೋಗಕ್ಕೆ

ಈ ರೋಗದಿಂದ ಉಂಟಾಗಿರುವ ಜಗೆ, (ಎಜೆ ಹಾರುವದು) ಸಂದು ಸಂದುನೋವು, ಕೈ ಕಾಲು ಬಚ್ಚುವದು, ಓಡುವಾಗ ಮತ್ತು ಎತ್ತರ ಸ್ಥಳದಲ್ಲಿ ಹತ್ತಿ ನಡೆಯುವಾಗ ಉಂಟಾಗುವ ಆಯಾಸ, ಶೋಫ (ಶರೀರ ಬೀಗುವದು) ಶರೀರ ಬಿಳೀ ವರ್ಣವಾಗುವದು, ನಾಲಿಗೆ ಒಣಗುವದು, ನಾಲಿಗೆಯು ರುಚಿ ಕೆಡುವದು, ನಾಲಿಗೆ ಕಹಿ ಆಗುವದು, ಆಹಾರ ಬೇಡವಾಗುವುದು, ಅಜೀರ್ಣ ಉಂಟಾಗುವುದು, ತಲೆ ತಿರುಗುವದು ಕಣ್ಣುಕತ್ತಲೆ ಬರುವದು, ಕಿವಿಯಲ್ಲಿ ಗುಂ ಎಂತ ಶಬ್ದ ಉಂಟಾಗುವದು, ಮೈ ಪಸೆ ಇಲ್ಲದೆ ಒಣಗಿ ಹೋಗುವದು, ಹೊಟ್ಟೆಯಲ್ಲಿ ಬೆಂಕಿ, ಎದೆ ಗಂಟ್ಲು ಸುಡುವುದು, ಮಲಬದ್ಧತೆಯಾಗಿ ಮಲವು ಬಹು ಗಟ್ಟಿಯಾಗಿ ಹಿಕ್ಕೆಗಳಂತಿರುವದು, ಆಲಸ್ಯ, ಕೆಲಸಮಾಡಲಿಕ್ಕೆ ಮನಸ್ಸಿಲ್ಲದಿರುವದು, ಅಲ್ಲದೆ ಇನ್ನೂ ಈ ರೋಗದಿಂದ ಉಂಟಾಗುವ ಬೇರೆ ವಿಕಾರಗಳಿಂದ ದೇಹಾಂತ್ಯದ ವರೆಗೆ ನರಳುತ್ತಿರುವವರು ದೇಹಾಂತ್ಯದ ವರೆಗೆ ತಮ್ಮ ದೇಹಾರೋಗ್ಯವನ್ನು ರಕ್ಷಿಸಿಕೊಂಡು, ನಿರೋಗಿಗಳಾಗಿ ಇರಬೇಕೆಂತ ಅಪೇಕ್ಷಿಸುವಹಾದರೆ ಈ ನಮ್ಮ ಸಚ್ಚಿದಾನಂದ ಚೂರ್ಣವನ್ನು ಸೇವಿಸಿರಿ.

ಅತ್ಯುತ್ತಮ ಗುಣಕಾರಿಯಾದ ಈ ಔಷಧವನ್ನು ಅಪೇಕ್ಷಿಸುವವರು 7 ಯಾ 15 ದಿವಸಕ್ಕೆ ಬೇಕಾಗುವ 1 ಯಾ 2 ತೊಲೆ ತರಿಸಿಕೊಂಡು ಸೇವಿಸಿ ಪರೀಕ್ಷಿಸಿರಿ. ಅಷ್ಟರಲ್ಲಿಯೇ ಗುಣಾಂಶ ಕಂಡುಬಂದರೆ, ನಾವು ಹೇಳುವ ವರೇಗೆ ಸೇವಿಸಿ, ದೇಹಾರೋಗ್ಯವನ್ನು ಪೂರ್ಣ ಪಡೆಯಿರಿ. ಅನುಮಾನ ಕಂಡರೆ, ರೋಗಿಗಳು ಖುದ್ದು ನಮ್ಮ ಔಷಧಾಲಯಕ್ಕೆ ಬಂದು ತಮ್ಮ ಊಟದ ಖರ್ಚು ತಾವೇ ನೋಡಿಕೊಂಡು, 15 ದಿವಸ ಯಾ 1 ತಿಂಗಳ ಔಷಧಿಯನ್ನು ಮುಂಗಡವಾಗಿ ಹಣ ಕೊಡದೆನೇ ಸೇವಿಸಿ ಗುಣಾವಗುಣ ಪರೀಕ್ಷಿಸಿರಿ.

ಅಷ್ಟರಲ್ಲಿ ಗುಣಾವಗುಣ ಕಂಡುಬಾರದಿದ್ದರೆ, ಸೇವಿಸಿದ ಔಷಧಿಯ ಕ್ರಯ ಕೊಡುವ ಅಗತ್ಯವಿಲ್ಲ. ಅಷ್ಟರಲ್ಲಿ ಗುಣಾಂಶ ಎಂತ ಕಂಡುಬಂದರೆ, ನಾವು ಪ್ರಥಮ ಕೊಟ್ಟ ಔಷಧಿಯ ಕ್ರಯ ತೆರಬೇಕಾಗುವದಲ್ಲದೆ, ಅನಂತರ ನಾವು ಹೇಳುವ ಸಮಯದ ವರೇಗೆ ಬೇಕಾಗುವ ಮದ್ದಿನ ಕ್ರಯಕೊಟ್ಟು ಸೇವಿಸಬೇಕಾಗುವುದು.

ರೋಗಿಗಳು ತಮ್ಮಿಂದ ಕೈಲಾಗುವ ಕೆಲಸಗಳನ್ನು ಮಾಡುತ್ತಾ ಪಥ್ಯಾಪಥ್ಯದ ಭಯವಿಲ್ಲದೆ ಸೇವಿಸಿ ಗುಣಹೊಂದತಕ್ಕ ಸೇವನೆಗೆ ಹಿತಕರವಾದ ಕೈಕಂಡ ಔಷಧವಾಗಿರುತ್ತದೆ.

ಕ್ರಯ ತೊಲೆ 1ರ ಬರೇ 12 ಆಣೆ (0—12—0). ಒಂದು ತಿಂಗಳ ಔಷಧಿಗೆ ರೂ. 2—8—0.

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

THE POPULAR INSURANCE HEAD OFFICE MANGALORE

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು–ಸರ್ವರಿಗೂ ಅನುಕೂಲವಾದ ಆತ್ಯಾಧುನಿಕ
ಶಾಸ್ತ್ರೀಯ ವಿಮಾಪದ್ಧತಿಗಳು—ಅಡಚಣೆಯು ಸುವ್ಯವಸ್ಥಿತ—
ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ಏಜಂಟರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

THE BANK OF MANGALORE, LTD.,

MANGALORE.

ESTD. 1931.

Head Office:-MANGALORE. **Branch:-MUDABIDRI.**

Fixed Deposits:-4½% for 3 months
,, 5% ,, 6 ,,
,, 6% ,, 12 ,,
,, 6½% ,, 24 ,, & upwards.

Savings Bank Deposits:—4⅜% on daily balance.
Withdrawals by cheques.
Current A/C 2%—opened free of charge.
We have various schemes for encouraging Thrift such as Cumulative Deposits, Recurring Savings Bank Deposits etc.

SAVE WHILE YOU CAN

Your future demands a fund to draw upon in case of need:—

START NOW AT THIS BANK—

Write for detailed Rules of Business sent free on request.

THE Bombay Life Assurance Co., Ltd.,

ESTD. 1908.

FIGURES THAT TELL

Year.	Proposed Business.	Completed Business.
1931	Rs. 72,91,300	Rs. 58,66,300.
1932	Rs. 75,69,500	Rs. 63,54,500.
1933	Rs. 1,11,47,833	Rs. 94,16,500.
1934	Rs. 1,25,50,250	Rs. 1,04,33,750.
1935	Rs. 1,50,48,915	Rs. 1,23,28,665.

Please consult for Agencies and Life Insurance Advice:—

Messrs. KOCHIKAR BROTHERS, Branch Secretaries.

OFFICES:

Visveswarapuram Circle, BANGALORE CITY.
Soumyalayam, CALICUT.
Udipi, S.INDIA.
Mount Road, MADRAS.
"Gautam Nivas", Charni Road Gingaum, BOMBAY, No. 4.
Car-Street, MANGALORE.

Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

THE CENTRAL BANK, LIMITED,

(INCORPORATED IN TRAVANCORE.)

Bunder Road, **MANGALORE.**

London Agents: LLOYDS BANK, LIMITED.
New York ,, : NATIONAL CITY BANK OF NEW YORK.

ಈತನಕ ಇಪ್ಪತ್ತಯ್ದು ವರ್ಷಗಳಲ್ಲಿ ವಿಮಾ ಉದ್ಯಮವನ್ನು ಪ್ರಾರಂಭಿಸಿ ವರ್ಷ ವರ್ಷಕ್ಕೆ ಅಭಿವೃದ್ಧಿಯನ್ನು ತೋರಿಸುತ್ತಾ ಈಗ ಜೀವವಿಮೆಯನ್ನೂ ಕೈಕೊಂಡು ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಧಾರವಾಡ.

ಕರ್ನಾಟಕದ ಮುಂದಾಳುಗಳಾದ ದೇಶಭಕ್ತ

ಶ್ರೀಯುತ ಎಸ್. ಕೆ. ಹೊಸಮನಿ, ಬಿ. ಎ., ಎಲ್.ಎಲ್. ಬಿ., ಎಂ. ಎಲ್. ಎ.,
ಮತ್ತು ಚೆಯರ್ಮ್ಯಾನ್

ಶ್ರೀಯುತ ವಿ. ವಿ. ಹಾಲಭಾವಿ, ಬಿ. ಎ., ಎಲ್.ಎಲ್. ಬಿ.,
ರಿಟಾಯರ್ಡ್ ಫಸ್ಟ್ ಕ್ಲಾಸ್ ಸಬ್ ಜಡ್ಜ್, ಧಾರವಾಡ

ಇವರ ನೇತೃತ್ವದ ಕೆಳಗೆ ನಡೆದಿರುವ ಮತ್ತು ಕರ್ನಾಟಕದ ವ್ಯಾಪಾರ ಉದ್ಯೋಗಗಳನ್ನು ಬೆಳಿಸಲಿಚ್ಛಿಸುವ ಸ್ವದೇಶೀ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ.

ಧಾರವಾಡ, ಬೆಳಗಾಂವ, ಬಿಜಾಪುರ, ಕಾರವಾರ, ಬಳ್ಳಾರಿ, ರಾಯಚೂರ ಮತ್ತು ಮೈಸೂರ ಸ್ಟೇಟಿನಲ್ಲಿಯೂ, ಅಭಿಮಾನದಿಂದ ಕೆಲಸ ಮಾಡುವ **ಕುಶಲ ಏಜಂಟರು ಬೇಕಾಗಿದ್ದಾರೆ.**

ವಿಶೇಷ ಮಾಹಿತಿಯನ್ನು ಸಮಕ್ಷವು ಇಲ್ಲವೇ ಪತ್ರದ್ವಾರದಿಂದ ತಿಳಿಕೊಳ್ಳಬೇಕು.

The Manager,
The Swaraj Banking & Insurance Co., Ltd., Dharwar.

Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

Roofing Tiles, Ridges, Ventilators, Skylights, Flooring Tiles, Building Bricks, etc.

They are hall marks of perfection—genuine in quality and superb in kind.

That is why we want you to insist on buying them.

Buy only goods bearing our genuine Trade Marks & Names.

Messrs. C. Abdurahiman & Coragappa,

MANGALORE.

Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

ಉಜ್ವಲ ರಾಷ್ಟ್ರೀಯ ವಾರಪತ್ರಿಕೆಯು } **'ಕರ್ನಾಟಕ ವೈಭವ'** { ಸ್ವಾಮಸನಾ ಗರ್ಜತಿ. ವಿಜಾಪೂರ.

ಸಂಪಾದಕರು:—**ವೆಂಕಟೇರಾವ ನಾಯಕ,** ಎಂ. ಎ., ಎಲೆಲ್. ಬಿ., (ಕೆಲಕಾಲ ಕನ್ನಡ ಪ್ರೊಫೇಸರರು.)

ಇಡೀ ಕರ್ನಾಟಕದಲ್ಲಿ ನಲವತ್ತುಮೂರು ವರ್ಷಗಳಿಂದ ರಾಷ್ಟ್ರಸಭೆಯ ಸಂದೇಶವನ್ನು ಸಾರುತ್ತಿರುವ ವಯೋವೃದ್ಧ ವಾರಪತ್ರಿಕೆ ಇದೊಂದೇ. ವಿಷಯವೈವಿಧ್ಯ, ವಿಚಾರಪರಿಪ್ಲುತತೆ, ಬಗೆಯ ಬೆಡಗು, ಶೈಲಿಯ ಸೊಬಗು, ಸಾಹಿತ್ಯಪಮಾಲೋಚನೆ, ಖಂಡತುಂಡ ಮಾತು, ವಾರ್ತಾವರಣ, ಕತೆ, ನಗೆಬರಹ ಇ.ಗಳನ್ನು ಓದಬೇಕಾಗಿದ್ದರೆ 'ಕರ್ನಾಟಕ ವೈಭವ'ವನ್ನೇ ತರಿಸಿರಿ. ವ್ಯಂಗ್ಯವಿನೋದದ ಬಗ್ಗೆಯಂತೂ 'ಆಪ್ಪಾ ಭಟ್ಟರ ಹೊತ್ತಗೆ'ಯು ಪ್ರಖ್ಯಾತವಾಗಿದೆ.

ಕ್ರಾ. ಆಕಾರದ ಸು. ೧೬ ಪುಟಗಳಿವೆ. ಪ್ರತಿ ವಾರ ಉದ್ಯೋಗವ್ಯವಸಾಯಗಳ ಸುದ್ದಿ ಬರುವುದು. ಜಾಹೀರಾತುದಾರರು ತಮ್ಮ ಸರಕುಗಳಿಗೆ ಕರ್ನಾಟಕದಲ್ಲಿ ಮನ್ನಣೆ ದೊರೆಯಬೇಕೆಂದು ಬಯಸುತ್ತಿದ್ದರೆ ಇದರಲ್ಲಿ ಪ್ರಕಟನೆಯನ್ನು ಹಾಕಬೇಕು.

ವ್ಯವಸ್ಥಾಪಕ,
ಕರ್ನಾಟಕ ವೈಭವ ಕಾರ್ಯಾಲಯ, ವಿಜಾಪೂರ.

The Premier Bank of India, Ltd.,

ದಿ ಪ್ರಿಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,

ಹೆಡ್ ಆಫೀಸ್—ಮದ್ರಾಸ್.

ಚಾಲ್ತಿ ಲೆಕ್ಕಾಚಾರ, ಸೇವಿಂಗ್ಸ್ ಬ್ಯಾಂಕ್ ಮತ್ತೂ ಫ್ಯಾವಿಡೆಂಟ್ ಠೇವಣಾತಿ ಲೆಕ್ಕಾಚಾರಗಳನ್ನು ತೆರೆಯಲಾಗುತ್ತದೆ. ಒಂದು ವರ್ಷ ಹಾಗೂ ಎರಡು ವರ್ಷಗಳ ಕಾಲಾವಧಿಯ ನಿರಖು ಠೇವಣಾತಿಗಳನ್ನು ಅನುಕೂಲವಾದ ಬಡ್ಡಿ ದರಗಳೊಡನೆ ಸ್ವೀಕರಿಸಲಾಗುತ್ತದೆ. ಸಾಲಗಳನ್ನು ಯೋಗ್ಯವಾದ ಭದ್ರತೆಗಳ ಮೇಲೆ ಕೊಡಲಾಗುವುದಲ್ಲದೆ, ಎಲ್ಲ ಬಗೆಯ ಬ್ಯಾಂಕಿಂಗ್ ವ್ಯವಹಾರಗಳನ್ನೂ ಕೈಕೊಳ್ಳಲಾಗುತ್ತಿವೆ. ಹೆಚ್ಚಿನ ವಿವರಗಳ ಬಗ್ಗೆ ಹೆಡ್ ಆಫೀಸಿಗೆ ಬರೆದು ಕೇಳಿ.

ಎಸ್. ವಿ. ರಾವ್, ಡಿ. ಕೋಮ್.,
ಮ್ಯಾನೇಜಿಂಗ್ ಡೈರೆಕ್ಟರ್.

Printed and published by U. Ganesh Shenai, Superintendent at the Saraswathi Printing Works, Ltd., Mangalore. Editor:—B. Vittal Rau.